

# ಅಖಿಲ ಭಾರತ ಪತ್ರಿಕೆ

ಏಪ್ರಿಲ್ 2026

# ಸೂರ್ಯತೇಜದ ಪಥ

ಬೆಲೆ : 15/-



ಫೋಟೋ: ಇಮೇಜಿಂಗ್ ಸಾವಿತ್ರಿ

# ಅಖಿಲ ಭಾರತ ಪತ್ರಿಕೆ

**ಏಪ್ರಿಲ್ 2026**

ಸಂಪುಟ: 36 ಸಂಚಿಕೆ: 04



**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ



**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


## ಪರಿವಿಡಿ

### ಸೂರ್ಯತೇಜದ ಪಥ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ತಮ ಮತ್ತು ಸೂರ್ಯತೇಜದ ಪಥ** 3
**ಯೋಗ ಸಾಧನೆಗೆ ಸೂರ್ಯತೇಜದ ಪಥ** 5
ಅನು: ಶ್ರೀ ಪುಟ್ಟು ಕುಲಕರ್ಣಿ

**ಸೂರ್ಯತೇಜದ ಪಥದಲ್ಲಿ ಅವಚೇತನಗಳು** 9
ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ)

**ಅಡೆ–ತಡೆಗಳು ಮತ್ತು ಸೂರ್ಯತೇಜದ ಪಥ** 21
**ದೈವೀ ಅನುಗ್ರಹಕ್ಕೆ ಸಂತೋಷದ ಮಾರ್ಗ** 30
ಅನು: ಡಾ॥ ಮಹಾದೇವ ಸಕ್ರಿ


**ಪ್ರಕಾಶಕ್ಕಿಂತ ಮೊದಲ ಕತ್ತಲು** 32
ಅನು: ನಾಗಜ್ಯೋತಿ ಮಾನ್ವಿ
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**ಶ್ರೀ ಅರವಿಂದರ ‘ಗೀತಾ ಪ್ರಬಂಧಗಳು’** 52
ಅನು: ಜಾನ್ವಿ

**ಮುಖಪುಟದ ಕವನಗಳು** 57
ಅನು: ಶ್ರೀ ಪುಟ್ಟು ಕುಲಕರ್ಣಿ

## ಸಂಪಾದಕರ ಟಿಪ್ಪಣಿ

'ಸೂರ್ಯತೇಜದ ಪಥ'ವು ಶ್ರೀ ಅರವಿಂದರು ಮತ್ತು ಶ್ರೀಮಾತೆಯವರಿಂದ, ಅದೂ ಜಂಟಿಯಾಗಿಯೇ ಇಡೀ ಮಾನವ ಕುಲಕ್ಕೆ ರೂಪಿಸಲ್ಪಟ್ಟಿರುವ ಪಥವಾಗಿದೆ. ಈ ಪಥವು ಅತ್ಯಂತ ಶೀಘ್ರವಾಗಿ ಗಮ್ಯವನ್ನು ತಲುಪಿಸುವ ಮತ್ತು ಅತ್ಯಂತ ಸುರಕ್ಷಿತವಾಗಿರುವ ಪಯಣವನ್ನು ಒದಗಿಸುವ ಅಪರೂಪದ ಮಾರ್ಗವಾಗಿ, ಆ ಮೂಲಕ ಜೀವನದ ಸಾರ್ಥಕತೆಯನ್ನು ಪಡೆದುಕೊಳ್ಳಲು, ಹಾಗೂ ಈ ಮೃಣ್ಮಯದ ಬದುಕಿನ ಮೂಲಕವೇ ತೇಜಪೂರ್ಣವಾಗಿರುವ ಪಥದಲ್ಲಿ ಆತ್ಮವು ಸಾಗಲು ಸಹಕಾರಿಯಾಗಿದೆ. (ಎಐಎಮ್)



ಸರ್ವಸ್ವವೂ ಸ್ವರ್ಣಮಯ ಮತ್ತು ಸುವರ್ಣಮಯ ಹಾಗು ಸುವರ್ಣವಾಗಿದೆ, ಸ್ವರ್ಣ ವರ್ಣದ ಧಾರಾಪ್ರವಾಹವು ಅಪ್ರತಿಹತವಾಗಿ ಅವತರಣಗೊಳ್ಳುತ್ತಿದೆ, ಇದು ಎಂದಿಗೂ ವಿಚಲನೆಗೊಳ್ಳುವದಿಲ್ಲ, ಇದರ ಮೂಲಕವೇ ಚೇತನವು ಅವತರಣಗೊಳ್ಳುತ್ತಿದ್ದು, ಇದೇ ದೇವತೆಗಳ ಪಥವೂ ಆಗಿದೆ. ಹೀಗಾಗಿ ಈ 'ತೇಜಪೂರ್ಣತೆಯಿಂದ ಕಾಂತಿಮಯವಾಗಿರುವ ಪಥವು' ಎಲ್ಲ ಅಡೆತಡೆಗಳನ್ನೂ ನಿವಾರಿಸಿ, ಸತ್ಯದ ದರ್ಶನ ಮಾಡಿಸುತ್ತದೆ.

ಇದೇ ಈ 'ಪಥದ ವ್ಯವಸ್ಥೆ'ಯಾಗಿದ್ದು ಇದು ನಮ್ಮೆದುರಿಗೆ ಸದಾ ಸಿದ್ಧವೂ ಇದೆ. ನಾವೀಗ ಆ ಪಥದಲ್ಲಿ ಯಾಣ ಮಾಡುವದನ್ನು ಪ್ರಾರಂಭಿಸಬೇಕಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/31** **– ಶ್ರೀಮಾತೆ**

## ತಮ ಮತ್ತು ಸೂರ್ಯತೇಜದ ಪಥ

**– ಅನು: ಪುಟ್ಟು ಕುಲಕರ್ಣಿ**

ಈ ಸೂರ್ಯತೇಜದ ಪಥವು ನನ್ನಿಂದಲೇ ಸಂಶೋಧಿಸಲ್ಪಟ್ಟಿದೆ ಅಥವಾ ನಾನೇ ಇದರ ಮೂಲ ಸಂಶೋಧಕ ಎಂದು ಬಹುತೇಕವಾಗಿ ನೀವು ತಪ್ಪು ಅಭಿಪ್ರಾಯವನ್ನು ಹೊಂದಿದ್ದೀರಿ. ನಾನು ಪ್ರಪ್ರಥಮದಲ್ಲಿ, ಅಂದರೆ ಮೂವತ್ತು ವರ್ಷದ ಹಿಂದೆ ಅಧ್ಯಯನ ಮಾಡಿರುವ ಯೋಗದ ಕುರಿತಾದ ಗ್ರಂಥವೊಂದು, ಈ

ವಿಷಯವಾಗಿ – ತಮಸ್ಸು ಮತ್ತು ಸೂರ್ಯತೇಜದ ಪಥದ– ಕುರಿತಾಗಿ ವಿವರ ವಿವರವಾಗಿ ವಿಷದಪಡಿಸಿದೆ. ಅದೂ ಅಲ್ಲದೇ ಈ ಪಥವು ತಮದ ಮೇಲೆ ಹೇಗೆ ಸಂಪೂರ್ಣವಾಗಿ ಪ್ರಭುತ್ವವನ್ನು ಸ್ಥಾಪಿಸಿದೆ ಎನ್ನುವದನ್ನೂ ವಿವರಿಸುತ್ತದೆ.

ನಾನು ನನ್ನ ವೈಯಕ್ತಿಕ ನೆಲೆಯಲ್ಲಿ ಸಾಧನೆಯಲ್ಲಿ ತೊಡಗಿಕೊಂಡು ಈ 'ಸೂರ್ಯತೇಜದ ಪಥ'ದಲ್ಲಿ ಯಾನ ನಡೆಸಲು ಹೆಜ್ಜೆ ಹಾಕುತ್ತ, ತೊಂದರೆಗಳನ್ನೂ ಅನುಭವಿಸುತ್ತಲೇ, ಆ ಪಥದಲ್ಲಿ ಸಾಗಿ ಗಮ್ಯವನ್ನು ಕಂಡುಕೊಂಡು, ಈ ಪಥದ ಯಾನದಲ್ಲಿ ನನ್ನ ಅನುಭವಗಳನ್ನು ಕಂಡುಕೊಂಡೆ ಎನ್ನುವದಕ್ಕಿಂತಲೂ ಮಿಗಿಲಾಗಿ, ಶ್ರೀಮಾತೆಯು ನನಗಿಂತ ಹತ್ತುಪಟ್ಟು ಈ ಸಾಧನೆಯಲ್ಲಿ ವಿಜಯಿಯಾಗಿದ್ದಾಳೆ. ಇದಕ್ಕೆಲ್ಲ ಕಾರಣವೆಂದರೆ, ಈ ಪಥವನ್ನು ಅರಸಿಕೊಂಡು ಸಾಗುವ ಎಲ್ಲ ಸಾಧಕರೂ ವಿಜಯವನ್ನು ಪಡೆದುಕೊಳ್ಳಲು  ನಡೆಸುವ ಹೋರಾಟದಲ್ಲಿ ಹಲವು ಇಂತಹ ವಿಷಯಗಳನ್ನು ಎದುರಿಸಬೇಕಾಗುತ್ತದೆ. ಸಾಧಕನಾದವನಿಗೆ ಯಾವುದೂ ಬಾಧಕವಾಗಿರುವದಿಲ್ಲ, ಆದರೂ ಆ ಪಥದಲ್ಲಿ ಸಾಗುವ ಮುನ್ನ ಅವುಗಳನ್ನು ಎದುರಿಸಲೇಬೇಕಾಗುತ್ತದೆ; ಅದರಲ್ಲೂ ಕೆಲವು ವಿಷಯಗಳಿಗಾಗಿ ನಾವು ನೂರಾರು ಬಾರಿ ಹೋರಾಡಬೇಕಾಗುತ್ತದೆ (ನಿಜವಾಗಿ ನೋಡಿದರೆ, ಇದೊಂದು ಹಂತದ ಅನುಭವದ ಹೇಳಿಕೆಯಾಗಿರಬಹುದು) – ಅದರಲ್ಲೂ ನಾವು ವಿಜಯವನ್ನು ಸಾಧಿಸುವ ಮುನ್ನ ಇದು ಸರ್ವೇಸಾಮಾನ್ಯವಾದ ಅನುಭವವಾಗಿದೆ. ಮತ್ತೂ ಕೆಲವರು ಆ ಹೋರಾಟವನ್ನು ಮುಂದುವರಿಸುತ್ತಲೇ, ಅಂದರೆ ಅಲ್ಲಿರುವ 'ಪರಿಪಕ್ವ ಪರಿಪೂರ್ಣತೆ'ಯನ್ನು ಸಾಧಿಸುವ ತನಕವೂ ತಮ್ಮ ಸಾಧನೆಯನ್ನು ಮುಂದುವರೆಸುತ್ತಾರೆ. ಆದರೆ ನಾವು ಮಾತ್ರ ಅವರ ಈ ಸಾಧನೆಯು ಉಳಿದವರ ಸಲುವಾಗಿಯೇ ಮಾಡಲ್ಪಡುತ್ತಿದೆ ಎನ್ನುವದನ್ನು ಸಮ್ಮತಿಸುವದಿಲ್ಲ. ಉಳಿದವರಿಗೆ ಬರುವ ಯಾವುದೇ ತೊಂದರೆಗಳನ್ನೂ ತಾನು ಈ ಸಾಧನೆಯ ಮೂಲಕವೇ ಧರಿಸಿ ಭರಿಸಿಕೊಳ್ಳುತ್ತ, ಉಳಿದವರಿಗೆ ಸುಲಭವಾದ ಪಥವೊಂದನ್ನು ನಿರ್ಮಾಣದ ಖಚಿತತೆಯನ್ನು ಒದಗಿಸುತ್ತಾರೆ. ಶ್ರೀಮಾತೆಯು ಒಂದೊಮ್ಮೆ ಆ ದಿವ್ಯತ್ವವನ್ನು ಕುರಿತು ಪ್ರಾರ್ಥಿಸಿದ ಉದ್ದೇಶವೂ ಇದೇ ಆಗಿದೆ. ಯಾವುದೇ ತೊಂದರೆಗಳು, ಅಪಾಯಗಳು, ಯಾತನೆಗಳು ಬಂದರೂ ಅವೆಲ್ಲವೂ ಶ್ರೀಮಾತೆಯ ಪಥದಲ್ಲಿ ಮಾತ್ರವೇ ಇರುವಂತೆ, ಉಳಿದವರಿಗೆ ಸುಲಭವಾಗಿರುವ ಪಥವನ್ನು ರೂಪಿಸುತ್ತಾಳೆ. ಯಾರು ಅವಿರತವಾಗಿ ಸಾಧನೆಯಲ್ಲಿ ತೊಡಗಿ, ಪ್ರತಿದಿನವೂ ಉಗ್ರ ಹೋರಾಟದ

ಮಧ್ಯದಲ್ಲಿಯೂ, ವರ್ಷಾನುಗಟ್ಟಲೇ ಸಂಪೂರ್ಣವಾಗಿ ತಮ್ಮನ್ನು ತಾವು ಶ್ರೀಮಾತೆಗೆ ಸಮರ್ಪಿಸಿಕೊಂಡು ಮತ್ತು ಪ್ರಾಮಾಣಿಕವಾಗಿರುವ ವಿಶ್ವಾಸವನ್ನು ಹೊಂದಿ ಶ್ರೀಮಾತೆಯ ಆಣತಿಯಂತೆ ನಡೆದುಕೊಳ್ಳುತ್ತಾರೋ, ಅವರಿಗೆ ಈ 'ಸೂರ್ಯತೇಜದ ಪಥ'ದಲ್ಲಿ ಸಾಗಲು ಸುಲಭವಾಗುತ್ತದೆ. ಒಂದು ವೇಳೆ ಈ ವಿಶ್ವಾಸವಿಲ್ಲದಿದ್ದರೂ ಸಹಿತ, ಯಾವಾಗ ಅವರು ವಿಶ್ವಾಸದಿಂದ ಮೊದಲ ಹೆಜ್ಜೆಯನ್ನು ಈ ಪಥದಲ್ಲಿ ಇಟ್ಟರೂ ಸಹಿತ, ತಕ್ಷಣದಲ್ಲಿಯೇ ಅವರಿಗೆ ಈ ಪಥದ ಪಯಣ ಸುಲಭ ಸಾಧ್ಯವಾಗುತ್ತದೆ. ಅಲ್ಲಿ ಒಂದು ವೇಳೆ ತೊಂದರೆಗಳು ಕಾಣುತ್ತಿವೆ ಎಂದಾದರೆ, ಅದು ನಿಮ್ಮಲ್ಲಿರುವ ಅವಿಶ್ವಾಸ, ಪ್ರತಿಕಾರ, ಸ್ವಯಂ ಅಭಿಮಾನಗಳು ಅಥವಾ ಒಟ್ಟಿನಲ್ಲಿ 'ತಮದ ಪ್ರಭಾವ'ದ ಕಾರಣದಿಂದ ಆಗಮಿಸುತ್ತವೆ.

ಸೂರ್ಯತೇಜದ ಪಥವೆನ್ನುವದು ಯಾವುದೇ ಕಾರಣಕ್ಕೂ ಕಲ್ಪಿತ ಕಥನವಂತೂ ಅಲ್ಲವೇ ಅಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/471–72**

---

## ಯೋಗ ಸಾಧನೆಗೆ ಸೂರ್ಯತೇಜದ ಪಥ

### ಆಹ್ಲಾದಪೂರ್ವಕ ಹಾಗು ಕಾಂತಿಮಯ ಹೃದಯ

ಶಾಂತಿ ಎನ್ನುವದೇ ಇಲ್ಲಿ ಪ್ರಪ್ರಥಮವಾಗಿ ಯೋಗಿಗಳಿಗೆ ಮತ್ತು ಋಷಿಗಳಿಗೆ ಅವಶ್ಯವಿರುವ ಏಕೈಕವಾದ ಸಂಗತಿಯಾಗಿದೆ. ಶಾಂತಿ ಎಂದರೆ– ಸಮಾಧಾನದಿಂದ ಕೂಡಿದ ಮತ್ತು ಪ್ರಶಾಂತವಾಗಿರುವ ಮನಸ್ಸು– ಇದು ಯಾವಾಗಲೂ ಶಾಂತಿಯನ್ನು ರೂಪಿಸುತ್ತದೆ– ಇದೇ ದಿವ್ಯತ್ವವನ್ನು ದೃಷ್ಟಿಸಲು–ಸಾಕ್ಷಾತ್ಕರಿಸಿಕೊಳ್ಳಲು– ಅತ್ಯಂತ ಶ್ರೇಷ್ಠ ನಿಯಮವಾಗಿದೆ. ಆಹ್ಲಾದಪೂರ್ಣವಾಗಿರುವ ಮತ್ತು ಸೂರ್ಯತೇಜದಿಂದ ಕಾಂತಿಮಯವಾಗಿರುವ ಹೃದಯವು ಮಾತ್ರ 'ಆನಂದ'ವನ್ನು ಭರಣಗೊಳಿಸಿಕೊಳ್ಳಲು ಇರುವ ಸೂಕ್ತವಾದ ಪಥವಾಗಿದೆ. ಆನಂದವನ್ನು ಏನೆಂದು ವರ್ಣಿಸುವದು? ಆ ಪರಮ ದಿವ್ಯತ್ವದೊಡನೆ ಸಂಯೋಗಗೊಳ್ಳಲು ಇರುವ ಅಡೆತಡೆಯಾಗಿದೆಯೇ ಈ ಆನಂದ? ವಿಷಣ್ಣತೆಯಿಂದ ಹೇಳುವದಾದಲ್ಲಿ, ಈ ಪಥದಲ್ಲಿ ಸಾಗಲು, ಖಚಿತವಾಗಿಯೂ ಇದೊಂದು ಭಯಾನಕವಾಗಿರುವ ತೊಂದರೆಯೇ ಆಗಿದೆ. ಪ್ರತಿಯೊಬ್ಬನೂ ಈ ಪಥದಲ್ಲಿ ಕೆಲವೊಮ್ಮೆಯಾದರೂ ಸಾಗಲೇಬೇಕಿದೆ, ಕ್ರಿಶ್ಚಿಯನ್ ಸಾಧಕರು ಈ ಪಥದಲ್ಲಿ ಪ್ರಗತಿ ಕಾಣಲು ಈ 'ಖಿನ್ನತೆಯ ಪರಮಾವಧಿಯಲ್ಲಿಯೇ'

ಸಾಗಬೇಕು. ಇಲ್ಲಿರಬಹುದಾದ ಚಿರಂತನ ಪುನರಾವರ್ತನೆಯು ಬೇರೆ ಏನೂ ಆಗಿರದೇ, ಕೇವಲ ಅಡೆತಡೆ ಮಾತ್ರ ಆಗಿರುತ್ತದೆ. ಭಗವದ್ಗೀತೆಯೂ ಸಹಿತ 'ಯಾವುದೇ ನಿರಾಶಾಭಾವವಿಲ್ಲದ ಹೃದಯದೊಂದಿಗೆ ಯೋಗವನ್ನು ಆಚರಿಸು' ಎಂದೇ ಹೇಳುತ್ತಿದೆ.

ಈ ರೀತಿಯ ನೋವು, ಯಾತನೆ, ಹೋರಾಟ ಮತ್ತು ನಿರಾಶಯ ಸರಣಿಗಳು ಸಹಜವಾಗಿದ್ದರೂ ಇವುಗಳಿಂದ ತಪ್ಪಿಸಿಕೊಳ್ಳಲು ಆಗುವದಿಲ್ಲ. ಈ ಪಥದಲ್ಲಿ ಯಾನ ಮಾಡುವ ಮುನ್ನ, ಇವುಗಳು ನಮಗೆ ಸಹಾಯಕಾರಿಯಾಗಿವೆ ಎನ್ನುವದಕ್ಕಿಂತ, ಇವುಗಳು ಮಾನವನ ಅಜ್ಞಾನದ ಕಾರಣದಿಂದಾಗಿ ಹೇರಲ್ಪಟ್ಟಿರುವ ಸಂಗತಿಗಳಾಗಿವೆ. ಅದೂ 'ಪ್ರಕಾಶ'ವನ್ನು ಅರಸಿಕೊಂಡು ಯಾನ ಮಾಡುವಲ್ಲಿ ಇಂತಹ ಘಟನೆಗಳು ಸಹಜವಾಗಿರುವ ಘಟನೆಗಳಾಗಿವೆ. ರಾಮಕೃಷ್ಣ ಪರಮಹಂಸರಾಗಲಿ ಅಥವಾ ವಿವೇಕಾನಂದರಾಗಲೀ ಅನುಭವಿಸಿರುವ ಇಂತಹ ಘಟನೆಗಳನ್ನು ನೀವು ಸಂಕೇತಪೂರ್ವಕವಾಗಿ ಉಳಿದವರಿಗೂ ಹೇಳಬೇಕೆನ್ನುವ ಮನೋಭಾವದಿಂದ ಅವುಗಳನ್ನು ಅಭಿವ್ಯಕ್ತಗೊಳಿಸಲ್ಲ. ಆದರೆ ನೀವು ಹೊಂದಲೇಬೇಕಾದ ಅವಿಚಲವಾದ ವಿಶ್ವಾಸದ, ದೃಢ ಮನೋಭಾವದ, ಅವಿರತವಾದ ಪ್ರಯತ್ನಗಳ ಕುರಿತು ಇದೇ ಸೂಕ್ತ ಪಥ ಎಂದು ಹೇಳಿದ್ದಾರೆ. ಇಂತಹ ಎಲ್ಲ ವಿರೋಧದ ಮಧ್ಯದಲ್ಲಿ ಸಾಗಿಯೂ, ಕೆಟ್ಟ ಘಳಿಗೆಗಳನ್ನು ಎದುರಿಸಿದರೂ, ಎಂದಿಗೂ ಯೋಗ ಸಾಧನೆಯನ್ನು ಅಥವಾ ದಿವ್ಯತ್ವವನ್ನು ದೃಷ್ಟಿಸಲು ಹೊಂದಿದ್ದ ಅಭೀಪ್ಸೆಯನ್ನು ಬಿಟ್ಟುಕೊಡಲಿಲ್ಲ. ಈ ಪಥದಿಂದ ಹಿಂದೆ ಸರಿಯುವ ಕನಸನ್ನೂ ಕಾಣಲಿಲ್ಲ. ಈ ಎಲ್ಲ ತೊಂದರೆಗಳು ಆ ಪರಮ ದಿವ್ಯತ್ವವನ್ನು ಪಡೆದುಕೊಳ್ಳಲು ತಾನಿನ್ನೂ ಅಸಮರ್ಥ, ಅಥವಾ ಸಾಕ್ಷಾತ್ಕಾರಕ್ಕಾಗಿ ತಾನಿನ್ನೂ ಪಕ್ವಗೊಂಡಿಲ್ಲ ಎನ್ನುವ ಮನೋಭಾವವನ್ನು ಅವರು ಎಂದಿಗೂ ತಾಳಲಿಲ್ಲ.

ಇದನ್ನು ಸುಲಭವಾಗಿ ಸಂವಹನ ಪಡಿಸಲು ಒಂದು ಕಥೆಯಿದೆ. ಅದರಲ್ಲೂ ವೈಷ್ಣವ ಪಂಥದ ಒಬ್ಬ ಯೋಗಿಯ ಕಥೆಯಿದು. ಇದರ ನೈತಿಕ ಮೌಲ್ಯ ಇರುವ ಈ ಕಥಾನಕದ ಸಾರಾಂಶವನ್ನು ನಾನು ಸಾರ ಸಂಗ್ರಹದಲ್ಲಿ, ತನ್ನದೇ ಭಾಷೆಯಲ್ಲಿ ಹೇಳಲಿಚ್ಛಿಸುತ್ತೇನೆ. 'ಒಮ್ಮೆ ನಾರದ ಮಹರ್ಷಿಯು ವೈಕುಂಠಕ್ಕೆ ಪ್ರಯಾಣ ಮಾಡುತ್ತಿದ್ದಾಗ, ಮಾರ್ಗದಲ್ಲಿ ಓರ್ವ ವೈಷ್ಣವ ಪಂಥದ ಯೋಗಿಯೋರ್ವನು ಸುದೀರ್ಘ ಕಾಲದಿಂದ, ಕಠಿಣಾತಿಕಠಿಣ ನಿಯಮಗಳ ಮೂಲಕ ತಪಸ್ಸು

ಮಾಡುತ್ತಿದ್ದನು. ನಾರದನ್ನು ಕಂಡ ಆ ಯೋಗಿ, 'ಓ ನಾರದರೆ' ಎಂದು ಕರೆದು, ನೀವು ಇದೀಗ ವೈಕುಂಠಕ್ಕೆ ಹೋಗುತ್ತಿದ್ದೀರಿ ಅಲ್ಲವೇ, ಅಲ್ಲಿ ಭಗವಾನ್ ವಿಷ್ಣುವನ್ನು ಕಾಣುತ್ತೀರಿ. ನಾನು ಇಲ್ಲಿ ನನ್ನ ಜೀವಮಾನದುದ್ದಕ್ಕೂ ಕಠಿಣ ನಿಯಮಗಳ ಪ್ರಕಾರವಾಗಿಯೇ ತಪಸ್ಸನ್ನು ಆಚರಿಸುತ್ತಿದ್ದೇನೆ. ಆತ್ಮಸಂಯಮದಿಂದ ತಪಸ್ಸಿನಲ್ಲಿ ತೊಡಗಿದ್ದೇನೆ. ಆದರೆ, ಇಲ್ಲಿಯವರೆಗೂ ನನಗೆ ಭಗವಾನ ವಿಷ್ಣುವಿನ ಕೃಪೆ ಮತ್ತು ದರ್ಶನ ಲಭ್ಯವಾಗಿಲ್ಲ. ನನಗೆ ಭಗವಾನ ವಿಷ್ಣುವಿನ ದರ್ಶನ ಯಾವಾಗ ಲಭ್ಯವಾಗುತ್ತದೆ ಎನ್ನುವದನ್ನು ವಿಚಾರಿಸಿ ತಿಳಿಸಬೇಕು ಎಂದು ಕೇಳಿಕೊಳ್ಳುತ್ತಾನೆ. ಅದಕ್ಕೆ ಒಪ್ಪಿದ ನಾರದ ಮುಂದೆ ಸಾಗುತ್ತಿದ್ದಂತೆಯೇ, ಓರ್ವ ವಿಷ್ಣು ಭಕ್ತನು ಹರಿಯ ವರ್ಣನೆಯ ಹಾಡುಗಳನ್ನು ಹಾಡುತ್ತಾ, ನರ್ತನ ಮಾಡುತ್ತಾ ಇರುತ್ತಾನೆ. ನಾರದನನ್ನು ಕಂಡ ಆ ಭಕ್ತನು ನಾರದರಿಗೆ ನಮಸ್ಕರಿಸಿ, ಓ ನಾರದರೇ, ನೀವು ನನ್ನ ಪರಮಾತ್ಮನನ್ನು ಕಾಣಲು ಹೋಗುತ್ತಿದ್ದೀರಾ. ನಾನು ಯಾವಾಗ ಭಗವಾನ ವಿಷ್ಣುವನ್ನು ಕಾಣಲು ಸಾಧ್ಯವಾಗುತ್ತದೆ ಎನ್ನುವದನ್ನು ವಿಚಾರಿಸಿ ತಿಳಿಸಿ ಎಂದು ಕೇಳಿಕೊಳ್ಳುತ್ತಾನೆ.'

ನಾರದರು ವೈಕುಂಠದಿಂದ ಮರಳಿ ಬರುವಾಗ ಮತ್ತೆ ಆ ಯೋಗಿಯನ್ನು ಕಂಡು, 'ನಿನ್ನ ವಿಷಯವನ್ನು ನಾನು ವಿಷ್ಣುವಿನ ಹತ್ತಿರ ವಿಚಾರಿಸಿದ್ದೇನೆ. ಇನ್ನೂ ಆರು ಜನ್ಮಗಳ ನಂತರವಷ್ಟೇ ನಿನಗೆ ವಿಷ್ಣುವಿನ ದರ್ಶನ ಸಾಧ್ಯವಾಗುತ್ತದೆ' ಎಂದು ವಿಷ್ಣು ಹೇಳಿದ್ದಾನೆ ಎಂದು ತಿಳಿಸಿದ. ಅದನ್ನು ಕೇಳುತ್ತಿದ್ದಂತೆಯೇ, ಆ ಯೋಗಿಯು ಜೋರಾಗಿ ರೋದಿಸುತ್ತ, ಪ್ರಲಾಪಿಸುತ್ತ, 'ಓ ಇಷ್ಟೊಂದು ದೀರ್ಘ ಕಾಲದಿಂದಲೂ ನಾನು ಭಗವಾನ ವಿಷ್ಣುವಿನ ದರ್ಶನದ ಸಲುವಾಗಿ ಕಠಿಣ ಪರಿಶ್ರಮದ ಮೂಲಕ ತಪಸ್ಸನ್ನಾಚರಿಸುತ್ತಿದ್ದೇನೆ. ಇಂಥ ಪ್ರಯಾಸದಿಂದ ನಾನು ಪ್ರಯತ್ನಪಡುತ್ತಿದ್ದರೂ, ಇದಕ್ಕೆ ಪ್ರತಿಫಲವೆಂದರೆ ಇನ್ನೂ ಆರು ಜನ್ಮಗಳ ಕಾಲ ಕಾಯಬೇಕು! ಈ ಪರಮಾತ್ಮ ವಿಷ್ಣುವು ಅದೆಷ್ಟು ಕಠೋರಿಯಾಗಿದ್ದಾನೆ! ಎಂದು ತನ್ನ ಪ್ರಲಾಪವನ್ನು ಯೋಗಿಯು ಮುಂದುವರೆಸಿದ್ದ.

ಅಲ್ಲಿಂದ ಮುಂದೆ ಸಾಗಿದ ನಾರದ, ಇನ್ನೊಬ್ಬ ಭಕ್ತನನ್ನೂ ಭೇಟಿಯಾಗಿ, 'ನಾನು ನಿನಗೆ ಯಾವದೇ ಶುಭಕರವಾದ ಸುದ್ದಿಯನ್ನು ತಂದಿಲ್ಲ. ನಿನಗೆ ಇನ್ನೂ ಒಂದು ಲಕ್ಷ ಜನ್ಮಗಳ ನಂತರದಲ್ಲಿ ಮಾತ್ರವೇ ವಿಷ್ಣುವಿನ ದರ್ಶನ ಲಭ್ಯವಾಗುತ್ತದೆಯಂತೆ' ಎಂದು ತಿಳಿಸಿದ. ಅದನ್ನು ಕೇಳಿದ ತಕ್ಷಣವೇ ಆ ಭಕ್ತನು ಸಂತೋಷದಿಂದ ಕುಣಿಯಲು ಪ್ರಾರಂಭಿಸಿ, ಓ, ಓ ನಾನು ನನ್ನ ಹರಿಯನ್ನು

ಖಂಡಿತವಾಗಿಯೂ ಕಾಣಬಲ್ಲೆ ಎನ್ನುವ ವಿಷಯ ತಿಳಿದು ತುಂಬ ಸಂತೋಷವಾಗಿದೆ. ಅದೂ ಕೇವಲ ಒಂದು ಲಕ್ಷ ಜನ್ಮಗಳಲ್ಲಿ! ದೇವನು ಎಷ್ಟೊಂದು ಕರುಣಾಮಯಿಯಾಗಿದ್ದಾನೆ ಎನ್ನುತ್ತ ಭಾವಾವೇಶದಿಂದ ನರ್ತನವನ್ನು ಮುಂದುವರೆಸಿದ. ಆಗ ನಾರದ ಅವನನ್ನು ಸಂತೈಸುತ್ತ, 'ಇದೋ ಈಗಲೇ ಈ ಕ್ಷಣವೇ ನಿನ್ನ ಪ್ರಯತ್ನ ಸಫಲತೆಯನ್ನು ಪಡೆದಿದೆ. ಈ ದಿನವೇ ನೀನು ನಿನ್ನ ಭಗವಂತನನ್ನು ದರ್ಶಿಸುತ್ತೀಯಾ' ಎಂದು ತಿಳಿಸಿದ.

ಇದೆಲ್ಲ ಸರಿ, ಅತಿರಂಜಿತದಂತೆ ಕಾಣುವ ಈ ಕಥೆ ಏನನ್ನು ಸಂಕೇತಿಸುತ್ತಿದೆ? ಮಾನವನ ಸ್ವಭಾವವು ಎಷ್ಟೊಂದು ವಿರೋಧಾಭಾಸದಿಂದ ಕೂಡಿದೆ ಎನಿಸುತ್ತಿದೆ ಅಲ್ಲವೇ? ನಿಮ್ಮ ಅಭಿಪ್ರಾಯವೇನು? ಕೇವಲ ಇದೊಂದೇ ಕಥೆಯಲ್ಲ, ಅತಿರಂಜಿತದಂತೆ ಕಾಣುತ್ತಿದ್ದರೂ, ಹರಿಶ್ಚಂದ್ರನ ಕಥೆ ಮತ್ತು ಶಿಬಿ ಚಕ್ರವರ್ತಿಯ ಕಥೆಗಳಲ್ಲಿಯೂ ಇದನ್ನು ಕಾಣಬಹುದಾಗಿದೆ.

ಆದರೆ, ಈಗಲೂ ನಾನು ಆ ವೈಷ್ಣವ ಭಕ್ತನನ್ನು ಒಂದು ಉದಾಹರಣೆ ಎಂದು ಅತಿ ಮುಖ್ಯವಾಗಿ ಪರಿಗಣಿಸುವದಿಲ್ಲ. ಪ್ರತಿಪಾದಿಸುತ್ತಲೂ ಇಲ್ಲ. ಅದರಲ್ಲೂ ಸಾಕ್ಷಾತ್ಕಾರವು ಇದೇ ಜನ್ಮದಲ್ಲಿ ಅಥವಾ ಲಕ್ಷ–ಲಕ್ಷ ಜನ್ಮಗಳ ನಂತರದಲ್ಲಿ ಲಭ್ಯವಾಗುತ್ತದೆ ಎನ್ನುವ ವಿಷಯವನ್ನು ನಾನು ಹೇಳುತ್ತಿಲ್ಲ. ಮುಖ್ಯವಾಗಿ ಕಥೆಗಳಲ್ಲಿರುವ ನೀತಿಯ ಆಂತರ್ಯವನ್ನು ಮಾತ್ರ ಹೇಳುತ್ತಿದ್ದೇನೆ. ಈ ಕಥೆಯನ್ನು ರಾಮಕೃಷ್ಣರು ಹೇಳಿರುವ ಕಾರಣವೆಂದರೆ ಇದೇ ನೀತಿಯಾಗಿದೆ. 'ಸೂರ್ಯತೇಜದ ಪಥ'ವೊಂದು ಇದೆ ಎನ್ನುವ ವಿಷಯವನ್ನು ಅವರು ತಿಳಿದಿರಲಿಲ್ಲ ಎಂದರ್ಥವಲ್ಲ. ಅದೂ ಯೋಗದಿಂದಲೇ ಸಾಧ್ಯವೆನ್ನುವ ವಿಷಯವೂ ಅವರಿಗೆ ಗೊತ್ತಿತ್ತು. ಈ ಯೋಗದ ಮೂಲಕ ಸಾಧನೆ ನಡೆಸಲು ಇರುವ 'ಸೂರ್ಯತೇಜದ ಪಥ'ವೇ ಅತೀ ಶೀಘ್ರವಾಗಿ ಗಮ್ಯವನ್ನು ಸೇರಲು ಸಾರ್ಥ್ಯ ಎನ್ನುವ ವಿಷಯವೂ ಅವರಿಗೆ ತಿಳಿದಿತ್ತು. ಇದೇ ಅತ್ಯುತ್ತಮ ಮಾರ್ಗವೂ ಆಗಿದೆ ಎನ್ನುವದೂ ಅವರ ವಿಶ್ವಾಸವಾಗಿತ್ತು. ನಾನು ಪ್ರಪ್ರಥಮವಾಗಿ ಓದಿದ 'ಯೋಗದ ಗ್ರಂಥ'ದ ವಿಷಯಗಳನ್ನು ಮೂವತ್ತು ವರ್ಷಗಳ ಹಿಂದೆ ಓದಿದ್ದು, ಅಲ್ಲಿ ಉಲ್ಲೇಖಿಸಲ್ಪಟ್ಟಿರುವ 'ತಮ ಮತ್ತು ಸೂರ್ಯತೇಜದ ಪಥ'ದ ಕುರಿತಾಗಿ ಅದರಲ್ಲೂ ಎರಡನೇಯದಾಗಿ ಹೇಳಿರುವ 'ಸೂರ್ಯತೇಜದ ಪಥ'ವೇ ಶ್ರೇಷ್ಠವಾದ ಮಾರ್ಗವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/470–71**

# ಸೂರ್ಯತೇಜದ ಪಥದಲ್ಲಿ ಅವಚೇತನಗಳು

**– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ**

## ತೋಷಭರಿತ ಆದಿತ್ಯ ಹೃದಯ

ನಾನು ದೈವಿಕ ಕತ್ತಲೆಯನ್ನು ನಂಬುವದಿಲ್ಲ. ಇದು ಕ್ರಿಶ್ಚಿಯನ್ ಧರ್ಮದ ಪರಿಕಲ್ಪನೆಯಾಗಿದೆ. ನಮ್ಮ ಪ್ರಕಾರ ದೈವಿಕತೆ ಎಂದರೆ ಶಾಂತಿ, ಪಾವಿತ್ರ್ಯತೆ, ವೈಶಾಲ್ಯತೆ, ಪ್ರಕಾಶ ಮತ್ತು ಆನಂದವಾಗಿದೆ. ಶಾಂತಿ ಮತ್ತು ಸಂತೋಷಗಳು ಯೋಗ ಮಾರ್ಗದಲ್ಲಿ ಅಡ್ಡಿ–ಆತಂಕಗಳನ್ನು ಒಡ್ಡುತ್ತವೆ ಎಂಬ ನಿಮ್ಮ ಮಾತಿಗೆ ಸಂಬಂಧಿಸಿದಂತೆ ನಾನು ಅವುಗಳನ್ನು ವಿಚಿತ್ರ ವಿಚಾರಗಳೆಂದು ಪ್ರಸ್ತಾಪಿಸಿದ್ದೆ. ಏಕೆಂದರೆ, ಅವುಗಳು ಸಾಕ್ಷಾತ್ಕಾರ ತೀವ್ರ ಅಭೀಪ್ಸೆಗೆ ಅನುಗುಣವಾಗಿಲ್ಲ.

*

## ಸಂಕಷ್ಟ ಮತ್ತು ಸಂಘರ್ಷ

ಸಾಧನೆಯ ಮಾರ್ಗದಲ್ಲಿ ಕತ್ತಲೆಯ ಅಧಿಪತ್ಯವಿರುತ್ತದೆ. ಮತ್ತು ಕ್ರಿಶ್ಚಿಯನ್ನರಂತೆ ಹಲವು ಸಾಧಕರು ಈ ಮಾರ್ಗದಲ್ಲಿ ಅನುಭವಿಸುವ ಆಧ್ಯಾತ್ಮಿಕ ಸಂಕಷ್ಟದ ಕುರಿತು ಬೋಧಿಸುತ್ತಾರೆ; ಹಲವರು ಈ ಸಂಕಷ್ಟವನ್ನು ನಾವು ಗಳಿಸಲಿರುವ ವಿಜಯಕ್ಕೆ ನಾವು ತೆರಬೇಕಾಗಿರುವ ಅನಿವಾರ್ಯವಾದ ಬೆಲೆ ಎಂದು ಭಾವಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಅದು ನಿಜವೇ ಆಗಿರಬಹುದು. ಅಥವಾ ಅನೇಕ ಸಾಧಕರ ಆರಂಭಿಕ ಸಾಧನಾ ಕ್ರಮದಲ್ಲಿ ಅದು ಸಂಭವಿಸಿರಬಹುದು. ಇಲ್ಲವೇ ಯಾರೋ ಒಬ್ಬರು ತಾವಾಗಿಯೇ ಅಂತಹ ಮಾರ್ಗವನ್ನು ಆರಿಸಿಕೊಂಡು ಮುನ್ನಡೆದಿರಬಹುದು. ಆದರೆ, ಅಂತಹ ಸಂದರ್ಭದಲ್ಲಿ ತಾಳ್ಮೆ, ಧೈರ್ಯ ಮತ್ತು ಛಲಬಿಡದ ಛಲದಂಕಮಲ್ಲರ ಶಕ್ತಿಯೊಂದಿಗೆ ಆ ಬೆಲೆಯನ್ನು ಪಾವತಿಸಬೇಕಾಗುತ್ತದೆ. ಅಥವಾ ಆ ಸಂಕಷ್ಟವನ್ನು ಎದುರಿಸಬೇಕಾಗುತ್ತದೆ. ಈ ರೀತಿಯ ತಾಳ್ಮೆಯಿದ್ದಲ್ಲಿ ನಮ್ಮ ಸಾಧನಾ ಮಾರ್ಗದಲ್ಲಿ ಎದುರಾಗುವ ಕತ್ತಲೆಯ ಶಕ್ತಿಗಳ ದಾಳಿಗಳಿಗೆ ಮತ್ತು ಅವುಗಳು ಒಡ್ಡುವ ಅಗ್ನಿ ಪರೀಕ್ಷೆಗಳ ವಿರುದ್ಧ ಜಯವನ್ನು ಸಾಧಿಸಲು ಸಾಧ್ಯವಾಗುತ್ತದೆ. ಆ ಅವಚೇತನಗಳ ವಿರುದ್ಧ ಸಾಧಿಸಿದ ಗೆಲುವಿನ ನಂತರ ನಮ್ಮಲ್ಲಿ ಗಮನಾರ್ಹವಾದ ಪ್ರಗತಿಯು ಕಂಡುಬರುತ್ತದೆ. ಆ ಪ್ರಗತಿಯೇ ಎದುರಾಗಿ ಬಂದು ನಮ್ಮೊಳಗಿರುವ ದೌರ್ಬಲ್ಯಗಳನ್ನು ಎತ್ತಿ ತೋರಿಸುತ್ತ, "ಅವುಗಳ ವಿರುದ್ಧ

ಸಂಘರ್ಷಕ್ಕಿಳಿದು ಅವುಗಳ ಮೇಲೆ ವಿಜಯವನ್ನು ಸಾಧಿಸುವ"ಂತೆ ಪ್ರೇರಣೆಯನ್ನು ನೀಡುತ್ತವೆ. ಆದರೆ, ಇದು ಗಾಢಾಂಧಕಾರದಿಂದ ಕೂಡಿದ ಅವಚೇತನದ ಮಾರ್ಗವಾಗಿರುವದರಿಂದ, ಅನಿವಾರ್ಯತೆಯು ಇರದ ಹೊರತು ಯಾರೂ ಈ ಮಾರ್ಗವನ್ನು ಅನುಸರಿಸಲಾರರು.

*

**ಅಂಧಕಾರದ ಅಸುರೀ ಶಕ್ತಿಗಳ ಸೃಷ್ಟಿ**

ಎಂತಹ ಕಷ್ಟದ ಸಂದರ್ಭದಲ್ಲೂ ನಾವು, "ನಾನು ಅಸಮರ್ಥನಾಗಿದ್ದೇನೆ. ನಾನು ಯೋಗ ಜೀವನಕ್ಕೆ ಅರ್ಹನಲ್ಲ." ಎಂಬ ನಿರಾಶಾದಾಯಕ ನುಡಿಗಳನ್ನಾಡಬಾರದು. ಇಂತಹ ನುಡಿಗಳು ಎಂದಿಗೂ ನಮಗೆ ಸಹಾಯವನ್ನು ಮಾಡುವದಿಲ್ಲ. ಅದರ ಬದಲಾಗಿ ನಾವು ಯಾವಾಗಲೂ "X"ನಂತೆ (ಅವನ ಘನ ಮಹಾತ್ವಾಕಾಂಕ್ಷೆಯ ಮಾರ್ಗದಲ್ಲಿ ಎದುರಾದ ಸಂಕಷ್ಟವು ನಿಮ್ಮ ಕಷ್ಟಗಳಿಗಿಂತ ತೀರಾ ಭಿನ್ನವಾಗಿತ್ತು.) ಬದುಕಬೇಕು. ಮತ್ತು ಈ ಸಂಕಷ್ಟಗಳೆಲ್ಲ ಪರಿಹಾರವಾಗಬೇಕಾದರೆ ನಾನಿನ್ನು 6 ವರ್ಷಗಳ ಕಾಲ ಕಾಯಲೇಬೇಕು ಎಂಬ ನಿಮ್ಮ ಮಾನಸಿಕ ಆಲೋಚನೆಗಳು ತೀರಾ ಅಪಾಯಕಾರಿಯಾಗಿವೆ. ಅವು ಕತ್ತಲೆಯ ಕಾರಸ್ಥಾನಗಳಿಂದ ಬಂದ ವಿಚಾರಗಳಾಗಿದ್ದು, ಅವು ನಿಮ್ಮನ್ನು ನಿಮ್ಮ ಅಭೀಪ್ಸಾ ಮಾರ್ಗದಿಂದ ದೂರವಿಡಲು ಪ್ರಯತ್ನಿಸುತ್ತ ಕೊನೆಗೆ ನಿಮ್ಮನ್ನು ಕತ್ತಲೆಯ ಒಂದು ಮಾರ್ಗದಿಂದ ಗಾಢಾಂಧಕಾರವಾದ ಮತ್ತೊಂದು ಅವಚೇತನದೆಡೆ ಕರೆದೊಯ್ದು ಭವಿಷ್ಯದಲ್ಲಿ ನೀವು ಗಳಿಸಬೇಕಿರುವ ವಿಜಯದ ಫಲವು ನಿಮ್ಮ ಕೈತಪ್ಪಿ ಹೋಗುವಂತೆ ಮಾಡುತ್ತವೆ. ಇದರ ಕುರಿತಾಗಿ ಕೃಷ್ಣಪ್ರೇಮ್ ಅವರು ಏನು ಹೇಳಿದ್ದಾರೆಂದು ನನಗೆ ತಿಳಿದಿಲ್ಲ. ಆದರೆ, ನೀವು ಅವರ ಆದೇಶವನ್ನು ಅರ್ಥಮಾಡಿಕೊಂಡಿದ್ದರೆ, ಅದು ಮಾನ್ಯವಾಗಿಲ್ಲ. ಏಕೆಂದರೆ, ಅನೇಕರು ದೈವಿಕ ಕೃಪೆಯ ಮೇಲೆ ನಂಬಿಕೆಯನ್ನು ಇಡದಿದ್ದರೂ ತಪಸ್ಸು ಅಥವಾ ಇನ್ನಾವುದೋ ಮಾರ್ಗದಿಂದ ಯೋಗವನ್ನು ಸಿದ್ಧಿಸಿಕೊಂಡಿದ್ದಾರೆ. ಯೋಗ ಜೀವನಕ್ಕಾಗಿ ಬೇಕಿರುವುದು ದೈವಿಕ ಕೃಪೆಯ ಮೇಲಿನ ನಂಬಿಕೆಯಲ್ಲ, ಬದಲಿಗೆ ಋತ ಮತ್ತು ದಿವ್ಯ ಜೀವನದ ಅಭೀಪ್ಸೆಗಾಗಿ ಹಂಬಲಿಸುತ್ತಿರುವ ನಮ್ಮ ಆತ್ಮದ ಅವಶ್ಯಕತೆಯಿದೆ. ನಿಮಗೆ ದೈವೀ ಕೃಪೆಯ ಮೇಲೆ ನಂಬಿಕೆ ಇರಲಿ, ಇರದೇ ಇರಲಿ ಒಟ್ಟಿನಲ್ಲಿ ನಿಮ್ಮೊಳಗೆ ಋತ ಮತ್ತು ದಿವ್ಯ ಜೀವನಕ್ಕಾಗಿ ಸದಾಕಾಲ ತುಡಿಯುತ್ತಿರುವ

ಆತ್ಮವಿದ್ದಿದ್ದೇ ಆದಲ್ಲಿ ಆ ದೈವೀ ಕೃಪೆಯು ನಿಮ್ಮ ಸಾಧನೆಯಲ್ಲಿ ಮಧ್ಯ ಪ್ರವೇಶಿಸಿ ತನ್ನ ಅನುಗ್ರಹವನ್ನು ಬೀರಿ ನಿಮ್ಮ ಸಾಧನೆಯನ್ನು ತೀಕ್ಷ್ಣವೂ–ತ್ವರಿತವೂ ಆಗಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/469–473**

**ಸಾಧನೆಯ ಮಾರ್ಗದಲ್ಲಿ ಸಂಕಷ್ಟಗಳು**

"ನನ್ನ ಮಾರ್ಗದಲ್ಲಿ ನಾನು ಇನ್ನೊಂದು ಸಂಕಷ್ಟವನ್ನು ಎದುರಿಸಲು ಇಚ್ಛಿಸುವದಿಲ್ಲ" ಎಂಬ ನಿಮ್ಮ ನಿಲುವನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನಂತೂ ಅನಿವಾರ್ಯತೆಯಿಂದ ವೀರನಾದವನೇ ಹೊರತು ನಾನಾಗಿಯೇ ಅದನ್ನು ಇಚ್ಛಿಸಿ ಪಡೆದವನಲ್ಲ. ನನಗೆ ಬಿರುಗಾಳಿ ಮತ್ತು ಯುದ್ಧಗಳೆಂದರೆ ಇಷ್ಟವಿಲ್ಲ. ಕನಿಷ್ಠ ಪಕ್ಷ ಸೂಕ್ಷ್ಮ ಸ್ತರದಲ್ಲಂತೂ ನಾನದನ್ನು ಖಂಡಿತ ಇಚ್ಛಿಸುವದಿಲ್ಲ. ಸೂರ್ಯತೇಜದಿಂದ ಪ್ರಜ್ವಲಿತವಿಹ ಮಾರ್ಗವು ಒಂದು ಭ್ರಮೆಯಾಗಿರಬಹುದು. ಆದರೆ, ನಾನಂತೂ ಈ ವಾದವನ್ನು ಒಪ್ಪುವದಿಲ್ಲ. ಏಕೆಂದರೆ, ನಾನು ಹಲವಾರು ವರ್ಷಗಳಿಂದ ಜನರು ಆ ಮಾರ್ಗದಲ್ಲಿ ನಡೆಯುತ್ತಿರುವದನ್ನು ಕಂಡಿದ್ದೇನೆ. ಆ ಮಾರ್ಗದಲ್ಲಿ ನೈಸರ್ಗಿಕವಾದ ವಾತಾವರಣವಿದ್ದು, ಆಗಾಗ ಕೊಂಚ ಪ್ರಮಾಣದಲ್ಲಿ ವೈಪರಿತ್ಯವಿರುವ ಹವಾಮಾನವನ್ನು ಹೊಂದಿದೆ. ಆದರೆ, ಆ ಮಾರ್ಗದಲ್ಲಿ ಬಿರುಗಾಳಿ–ಚಂಡಮಾರುತಗಳಂತಹ ಸಂದಿಗ್ಧ ವಾತಾವರಣವಂತೂ ಖಂಡಿತ ಇಲ್ಲ. ಈ ವಿಷಯದಲ್ಲಿ 'ದುರ್ಗಂ ಪಥಸ್ತತ್' ಎಂಬ ಪರಿಕಲ್ಪನೆಯು ನಿಜವಿರಬಹುದು. ಆದರೆ, ಲಯ ಅಥವಾ ನಿರ್ವಾಣದೆಡೆಗೆ ಕೊಂಡೊಯ್ಯುವ ಈ ಮಾರ್ಗವು ಹಲವರಿಗೆ ಅತ್ಯಂತ ಸಂಕಷ್ಟದ ಮಾರ್ಗವಾಗಿ ಕಂಡುಬರಬಹುದು. (ಆದರೆ ನನ್ನ ವಿಷಯಕ್ಕೆ ಬಂದರೆ, ನಾನು ನಿರ್ವಾಣವನ್ನು ತಲುಪಿರುವುದು ಉದ್ದೇಶಪೂರ್ವಕ–ವಾಗಿರಲಿಲ್ಲ. ಬದಲಿಗೆ ನನ್ನ ಯೋಗ ಜೀವನದ ಆರಂಭದಿಂದಲ್ಲೇ ನನ್ನ ಅನುಮತಿಯನ್ನೂ ಕೇಳದೆಯೇ ಆ ನಿರ್ವಾಣವು ನನ್ನೊಳಗೆ ಇಳಿದುಬಂದಿತ್ತು.) ಆ ಸಾಧನೆಯ ಮಾರ್ಗವು ಸದಾಕಾಲವೂ ಬಿರುಗಾಳಿಗಳಿಂದ ಕೂಡಿರುತ್ತದೆ ಎಂದು ಹೇಳಲಾಗದು. ಹಾಗಿದ್ದೂ ಹಲವರಿಗೆ ಈ ಮಾರ್ಗದಲ್ಲಿ ಸಂಕಷ್ಟಗಳು ಎದುರಾಗುತ್ತಲೇ ಇರುತ್ತವೆ. ನಾವು ಮಾತ್ರ ನಮಗೆದುರಾಗುವ ಸಂಕಷ್ಟಗಳ ವಿರುದ್ಧ ಸಂಘರ್ಷವನ್ನೊಡ್ಡಿ ಆ ಮಾರ್ಗದಲ್ಲಿ ಗಟ್ಟಿಯಾಗಿ ನೆಲೆಯೂರಬೇಕು,

ಮುನ್ನುಗ್ಗಬೇಕು. ಕ್ರಮೇಣ, ಆ ಚಂಡಮಾರುತಗಳ ಶಕ್ತಿ, ತೀವ್ರತೆ ಮತ್ತು ಅದರ ಸಂಚಾರದ ಅವಧಿಯು ಕಡಿಮೆಯಾಗುತ್ತ ಸಾಗುವದನ್ನು ನಾನು ಗಮನಿಸಿದ್ದೇನೆ. ಹಾಗಾಗಿಯೇ ನಾನು ಈ ಮಾರ್ಗದಲ್ಲಿ ಸ್ಥಿರವಾಗಿ ಮುನ್ನಡೆಯಬೇಕು ಎಂದು ಹೇಳಿರುವುದು. ಹೀಗೆ ನಿಮ್ಮ ಸಾಧನೆಯು ಸಾಗುತ್ತಿದ್ದಂತೆ ಅದು ನಿಮ್ಮ ಸಾಧನೆಗೆ ಒಂದು ಮಹತ್ವದ ತಿರುವನ್ನು ನೀಡುತ್ತದೆ. ವರ್ಷಗಳಿಂದ ಹಿಂಸಾತ್ಮಕ ರೂಪವನ್ನು ತಾಳಿದ್ದ ಈ ಚಂಡಮಾರುತಗಳು ಈಗೀಗ ತಮ್ಮ ತೀವ್ರತೆಯನ್ನು ತಗ್ಗಿಸಿಕೊಂಡಿರುವ ಕೆಲವು ಆಶ್ಚರ್ಯಕರ ಉದಾಹರಣೆಗಳನ್ನು ನಾನು ಗಮನಿಸಿದ್ದೇನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/682–83**

## ಗುರುವಿಗೆ ಸಾಧನೆಯ ಮಾರ್ಗದ ಸಂಕಷ್ಟಗಳ ಅರಿವಿರುತ್ತದೆ

ಆತ್ಮದೊಳಗೆ ಅಥವಾ ಆಂತರ್ಯದೊಳಗೆ ತಿರುಗುತ್ತಿರುವ ಸಾಧ್ಯತೆಯು ಯಾವಾಗಲೂ ಒಂದು ಸಾಧ್ಯತೆಯಾಗಿಯೇ ಉಳಿದುಕೊಳ್ಳುತ್ತದೆ. ಅದರ ಅವತರಣಿಕೆಯು ವಿಳಂಬವಾಗಬಹುದೇ ವಿನಃ ಅದು ಎಂದಿಗೂ ನಾಶವಾಗುವದಿಲ್ಲ. ಸಾಧಕನು ತನ್ನ ಅಹಮಿಕೆಯ ಬೆನ್ನುಹತ್ತಿ ಅಥವಾ ಯೋಗದ ದುರ್ಬಳಕೆಯನ್ನು ಮಾಡಿ ತನ್ನ ಸಾಧನೆಯ ಸನ್ಮಾರ್ಗದಿಂದ ಬೇರಾಗಿ ದುರ್ಮಾರ್ಗದೆಡೆ ಕ್ರಮಿಸಿದರೆ ಮಾತ್ರ ಅವನಲ್ಲಿದ್ದ ಆ ಸಾಧ್ಯತೆಯು ಮರೆಯಾಗಿ ಹೋಗಬಹುದು. ಬಾಹ್ಯದಲ್ಲಿರುವ ನಮ್ಮ ದಿನನಿತ್ಯದ ಕ್ರಮದಲ್ಲಿ ಏರುಪೇರುಗಳು ಕಂಡುಬಂದರೂ ಅಥವಾ ನಮ್ಮ ಬಾಹ್ಯದ ಮೇಲೆ ಮುಚ್ಚಿದ ತೆಳುಪೊರೆಯನ್ನು ಭೇದಿಸಿ ಆಂತರ್ಯದ ನಡೆಯು ಬಾಹ್ಯವನ್ನು ಪ್ರಗತಿಯೆಡೆ ಸಾಧಿಸದೇ ಹೋದರೂ ಅವುಗಳಿಗೆ ನಮ್ಮಲ್ಲಿರುವ ಸಾಧ್ಯತೆಗೆ ಯಾವುದೇ ತೊಂದರೆಯನ್ನು ಮಾಡಲು ಸಾಧ್ಯವಿಲ್ಲ. ಏಕೆಂದರೆ ಯೋಗ ಸಾಧನೆಯಲ್ಲಿ ತೊಡಗಿದ ಹಲವಾರು ಸಾಧಕರಿಗೆ ಈ ರೀತಿಯ ಅನುಭವಗಳು ಸರ್ವೇ ಸಾಮಾನ್ಯ. ಇದಕ್ಕೆ ಪ್ರಮುಖ ಕಾರಣವೆಂದರೆ, ಹಲವು ಸಾಧಕರು ತಮ್ಮ ಯೋಗ ಸಾಧನೆಯ ಆರಂಭದಲ್ಲಿಯೇ ತಮ್ಮಲ್ಲಿರುವ ಎಲ್ಲಾ ನ್ಯೂನ್ಯತೆಗಳನ್ನು ಒಮ್ಮೆಲೇ ರಾಶಿ ಸುರಿದುಕೊಂಡು ಬಿಡುತ್ತಾರೆ. 'ನಿಧಾನವಾಗಿಯೇ ಆಗಲಿ ವೇಗವಾಗಿಯೇ ಆಗಲಿ ತಮ್ಮ ಮಾರ್ಗದಲ್ಲಿ ಕ್ರಮಿಸುತ್ತಾ ಸಾಗಿದಾಗ ಒಂದಲ್ಲ ಒಂದು ದಿನ ಆ ದಿವ್ಯ ಶಕ್ತಿಯು ಬಂದು ನಮ್ಮಲ್ಲಿರುವ ಕೊರತೆಗಳನ್ನು ನೀಗಿಸಿ ನಮ್ಮಲ್ಲಿ ಬಾಳಿನೊರತೆಗಳನ್ನು ತುಂಬುತ್ತವೆ' ಎಂಬ ನಂಬಿಕೆಯಿಂದ ಮುನ್ನಡೆಯದೇ ತಮ್ಮದೇ ಆದ ನ್ಯೂನ್ಯತೆಗಳ

ರಾಶಿಯೊಳಗೆ ಸುರಂಗ ಕೊರೆದು ತೆವಳಲು ಪ್ರಯತ್ನಿಸುತ್ತಾರೆ. ಹಾಗೆಂದು ಅವರ ಈ ಮಾರ್ಗವನ್ನು ಅವರೇ ಬೇಕೆಂದು ಆರಿಸಿಕೊಂಡಿದ್ದಲ್ಲ. ಬದಲಿಗೆ ಅವರ ಸ್ವಭಾವದಲ್ಲಿರುವ ಯಾವುದೋ ಒಂದು ವಿಲೋಮ ಪ್ರವೃತ್ತಿಯ ಅಂಶವು ಅವರಿಂದ ಈ ರೀತಿಯ ಅಡ್ಡ ಮಾರ್ಗವನ್ನು ಆರಿಸಿಕೊಳ್ಳುವಂತೆ ಪ್ರೇರೇಪಿಸುತ್ತಿರುತ್ತದೆ. ಇಲ್ಲಿರುವ ಹಲವು ಸಾಧಕರಿಗೆ ಇಂತಹ ಅನುಭವಗಳಾಗಿವೆ. ಅವರ ಆಂತರಿಕ ಪ್ರಜ್ಞೆಯು ಅವರ ಬಾಹ್ಯ ಪ್ರಜ್ಞೆಯಿಂದ ಬೇರ್ಪಟ್ಟಿದೆ ಅಥವಾ ಸಂಪೂರ್ಣವಾಗಿ ಮುಚ್ಚಿಹೋಗಿದೆ. ನಾವು ನಿಮಗೆ ಸೂರ್ಯತೇಜದ ಪಥವನ್ನು ಆರಿಸಿಕೊಳ್ಳುವಂತೆ ಎಷ್ಟೇ ಸಲಹೆ ನೀಡಿದರೂ, ನೀವು ಮಾತ್ರ ಈ ಕಠಿಣತಮ ಮಾರ್ಗವನ್ನೇ ಆರಿಸಿಕೊಂಡು ಸಾಗಲು ಪ್ರಯತ್ನಿಸುತ್ತಿದ್ದಿರಿ. ಮತ್ತು ಈಗಲೂ ಸಹ ಈ ಅಭ್ಯಾಸದಿಂದ ಹೊರಬರಲು ಪ್ರಯತ್ನಿಸುತ್ತಿಲ್ಲ. ಹಾಗೆಂದ ಮಾತ್ರಕ್ಕೆ ನೀವು ಶಾಶ್ವತವಾಗಿ ಈ ಸುರಂಗದಲ್ಲಿಯೇ ಸಿಲುಕಿಕೊಂಡು ಬಿಡುತ್ತೀರಿ ಎಂದು ಅರ್ಥವಲ್ಲ. ಬದಲಿಗೆ ನೀವು ಈ ಸುರಂಗದಿಂದ ಹೊರಬಂದಾಗ ನಿಮಗಿಂತಲೂ ಮುಂದಾಗಿಯೇ ಮಾರ್ಗವನ್ನು ಕ್ರಮಿಸಿ ನಿಮಗಿಂತಲೂ ಮೊದಲೇ ಗುರಿಯನ್ನು ತಲುಪಿದ ನಿಮ್ಮ ಆಂತರ್ಯವು ಕತ್ತಲೆಯಲ್ಲಲ್ಲ ಬದಲಿಗೆ ಆ ಸೂರ್ಯತೇಜದ ಬೆಳಕಿನೊಳಗೆ ನಿಮಗಾಗಿ ಕಾಯುತ್ತಾ ನಿಂತಿರುವದನ್ನು ನೀವು ಕಾಣಬಹುದು. ಒಬ್ಬ ಗುರುವಿನಲ್ಲಿರಬೇಕಾದಕ್ಕಿಂತ ಹೆಚ್ಚಿನ ತಾಳ್ಮೆಯನ್ನು ನಾನು ಹೊಂದಿದ್ದೇನೆ ಎಂದು ನಾನು ಹೇಳುತ್ತಿಲ್ಲ. ಪ್ರತಿಯೋರ್ವ ಗುರುವಿನಲ್ಲೂ ತಾಳ್ಮೆಯು ಅತ್ಯವಶ್ಯಕ. ಹಾಗೂ ಅವರಲ್ಲಿರುವ ಇನ್ನೆರಡು ಮುಖ್ಯವಾದ ಅಂಶಗಳೆಂದರೆ, ಒಂದು ಅವರಿಗೆ ಮಾನವ ಸ್ವಭಾವದ ಸಂಕಷ್ಟಗಳ ಅರವಿರತ್ತದೆ. ಎರಡನೆಯದಾಗಿ ಯೋಗಿಕ ಶಕ್ತಿಯು ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಅವರು ತಿಳಿದಿರುತ್ತಾರೆ. – ಈ ಯೋಗದ ಶಕ್ತಿಯು ಹಲವು ವಿಧವಾದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ. ಅದು ಕೆಲವೊಮ್ಮೆ ಮುಕ್ತವಾಗಿ ಮತ್ತೂ ಕೆಲವೊಮ್ಮೆ ಗುಪ್ತವಾಗಿ; ಕೆಲವೊಮ್ಮೆ ನಿಧಾನವಾಗಿ ಮತ್ತೆ ಕೆಲವೊಮ್ಮೆ ವೇಗವಾಗಿ; ಕೆಲವೊಮ್ಮೆ ಜ್ವಾಲಾಮುಖಿಯಂತೆ ಮತ್ತೆ ಕೆಲವೊಮ್ಮೆ ಹವಳದಂತೆ ತನ್ನ ಕಾರ್ಯವನ್ನು ನಿರ್ವಹಿಸುತ್ತಿರುತ್ತದೆ. ಅಂತಹ ಸಂದರ್ಭದಲ್ಲಿ ಗುರುವಾದವನು ಕೇವಲ ಮೇಲ್ನೋಟದ ಭಾವವನ್ನು ಗಣನೆಗೆ ತೆಗೆದುಕೊಳ್ಳದೇ ತಮ್ಮ ಆಂತರ್ಯದ ಜ್ಞಾನ ಮತ್ತು ಯೋಗಿಕ ಅನುಭೂತಿಯ ಮೂಲಕ ಅವುಗಳ ಸರ್ವಾಂಗೀಣ ಕ್ಷಮತೆಯನ್ನು ಕಂಡುಕೊಳ್ಳುತ್ತಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/684–85**

## ಸೂರ್ಯತೇಜದ ಪಥದಲ್ಲಿ ಪಯಣ

ಯಾರಲ್ಲಿ ಶರಣಾಗತಿಯ ಭಾವವಿರುತ್ತದೆಯೋ ಅವರು ಈ ಸೂರ್ಯತೇಜದ ಪಥದಲ್ಲಿ ಸುಲಭವಾಗಿ ಮುನ್ನಡೆಯಬಲ್ಲರು. ಮೊದಲು ಅಸ್ತಿತ್ವದ ಕೇಂದ್ರದಲ್ಲಿ ಶರಣಾಗತಿಯನ್ನು ಸಾಧಿಸಿ ನಂತರ ಅಸ್ತಿತ್ವದ ಸರ್ವ ಭಾಗಗಳಲ್ಲಿ ಸಂಪೂರ್ಣವಾದ ಶರಣಾಗತಿಯನ್ನು ಸಾಧಿಸಬೇಕು. ಅಲ್ಲದೆ ಆ ದಿವ್ಯತೆಯ ಮೇಲೆ ಅವಲಂಬಿತರಾಗಿ ಆ ದಿವ್ಯತೆಯು ಕರುಣಿಸುವ ಪ್ರತಿಯೊಂದು ದ್ರವ್ಯವನ್ನು ಸಂತೋಷದಿಂದ ಸ್ವೀಕರಿಸಬೇಕು. ಇದರಿಂದ ನಾವು ನಡೆಯುವ ಮಾರ್ಗವು ಸೂರ್ಯನ ತೇಜದಿಂದ ಪ್ರಕಾಶಮಾನವಾಗಿ ಬೆಳಗಲಾರಂಭಿಸುತ್ತದೆ. ಮತ್ತು ನಮ್ಮ ಸಾಧನೆಯ ಗುರಿಯೆಡೆಗಿನ ಮಾರ್ಗವು ನೇರವೂ–ಸುಲಭವೂ ಆಗಿ ಪರಿಣಮಿಸುತ್ತದೆ. ಹೀಗೆ ತಮ್ಮ ಪಥವನ್ನು ಪ್ರಕಾಶಮಯಗೊಳಿಸಿದ ಸಾಧಕರು ಎಲ್ಲಾ ರೀತಿಯ ಸಂಕಷ್ಟಗಳಿಂದ ಮುಕ್ತರಾಗುತ್ತಾರೆ ಎಂದು ಅರ್ಥವಲ್ಲ. ಬದಲಿಗೆ ಅವರು ತಮ್ಮ ಜೀವನದಲ್ಲಿ ಬರುವ ಕಷ್ಟಗಳನ್ನು ನೋವು ಮತ್ತು ನಿರಾಸೆಗಳಿಲ್ಲದೆ ಎದುರಿಸಲು ಸಮರ್ಥರಾಗುತ್ತಾರೆ. ಭಗವದ್ಗೀತೆಯು ಹೇಳುವಂತೆ, “ಅನಿರ್ವಿಣ್ಣ ಚೇತಸಾ” ಎಂಬ ಯೋಗವನ್ನು ಅಭ್ಯಾಸ ಮಾಡಬೇಕು. ನಮ್ಮ ಆಂತರ್ಯದಿಂದ ಹೊರಡುವ ಮಾರ್ಗದರ್ಶದ ಜೊತೆಜೊತೆಗೆ ಬಹಿರಂಗದ ಗುರುವಿನ ಮಾರ್ಗದರ್ಶನವನ್ನೂ ಗ್ರಹಿಸುತ್ತಾ ನಮ್ಮ ಸಾಧನೆಯಲ್ಲಿ ಮುನ್ನಡೆಯಬೇಕು. ಒಂದು ವೇಳೆ ಯಾರಿಗಾದರೂ ಪ್ರಕಾಶ ಅಥವಾ ಮಾರ್ಗದರ್ಶನದ ನೆರವು ಸಿಗದಿದ್ದರೂ ಪರವಾಗಿಲ್ಲ. ಆತನಲ್ಲಿ ಉಜ್ವಲವಾದ ಮತ್ತು ಸ್ಥಿರವಾದ ನಂಬಿಕೆ ತೋಷಯುಕ್ತ ಭಕ್ತಿ ಅಥವಾ ಆಧ್ಯಾತ್ಮದ ಆಶಾವಾದಿ ಮನೋಭಾವನೆಯಿದ್ದರೆ ಅದನ್ನು ಅನುಸರಿಸಿ ಮುಂದುವರೆಯಬಹುದು. ನಮ್ಮ ಪ್ರತಿಯೊಂದು ಹೆಜ್ಜೆಯಲ್ಲೂ ಆ ದಿವ್ಯತೆಯು ನಮ್ಮ ಕೈಹಿಡಿದು ನಡೆಸಲು ಸಿದ್ಧವಾಗಿರುತ್ತದೆ. ಹಾಗಾಗಿಯೇ ಆ ದಿವ್ಯತೆಯ ಯಾವುದಾದರೂ ಕ್ರಿಯೆಯ ಕುರಿತು ನಮಗೆ ಹೆಚ್ಚಿನ ಮಾಹಿತಿಯ ಅರಿವಿರದೇ ಇದ್ದರೂ, ಆ ದಿವ್ಯತೆಯ ಕ್ರಿಯೆಯು ಸರ್ವ ಶ್ರೇಷ್ಠವಾದದ್ದು ಎಂಬ ದೃಢವಾದ ನಂಬಿಕೆಯನ್ನು ಹೊಂದಿರಬೇಕು. ಆಗ ದಿವ್ಯತೆಯು ನಮ್ಮ ಸಹಾಯಕ್ಕೆ ಮುಂಬರಿಯುತ್ತದೆ. ಆದರೆ, ಎಲ್ಲರಲ್ಲೂ ಈ ಮನೋಭಾವನೆ ಇರುವದಿಲ್ಲ. ಹೆಚ್ಚಿನವರು ಈ ರೀತಿಯ ಸ್ವಭಾವದಿಂದ ದೂರವಾಗಿಯೇ ಉಳಿದುಬಿಡುತ್ತಾರೆ. ಈ ಶರಣಾಗತಿಯಲ್ಲಿರುವ ಅಸ್ತಿತ್ವದ ಕೇಂದ್ರ ಶರಣಾಗತಿ ಮತ್ತು ಅದರ ಸಂಪೂರ್ಣ ಶರಣಾಗತಿಯನ್ನು ಸಿದ್ಧಿಸಿಕೊಳ್ಳುವುದು

ಅಷ್ಟು ಸುಲಭದ ಮಾತಲ್ಲ. ಒಂದೊಮ್ಮೆ ಅದನ್ನು ಸಿದ್ಧಿಸಿಕೊಂಡರೂ ಅದನ್ನು ಕೊನೆಯವರೆಗೂ ಹಾಗೇ ಉಳಿಸಿಕೊಂಡು ಹೋಗುವುದು ಈ ಮರ್ತ್ಯಮಾತ್ರರ ಸ್ವಭಾವಕ್ಕೆ ಅತ್ಯಂತ ಕಠಿಣವಾಗಿ ಪರಿಣಮಿಸುತ್ತದೆ. ಈ ಮುಂತಾದ ವಸ್ತುವಿಷಯಗಳ ಅನುಪಸ್ಥಿತಿಯಲ್ಲಿ ಆತ್ಮದ ಸ್ವಾತಂತ್ರ್ಯವು ಲಭಿಸಲು ಸಾಧ್ಯವಿಲ್ಲ. ಹಾಗೇನಾದರೂ ಅವುಗಳ ಸಾನಿಧ್ಯವಿಲ್ಲದೆ ಆತ್ಮ ಸ್ವಾತಂತ್ರ್ಯವನ್ನು ಸಾಧಿಸಬೇಕಿದ್ದಲ್ಲಿ ನಮ್ಮನ್ನು ನಾವು ಕಠಿಣಾತಿಕಠಿಣ ನಿಯಮಗಳಿಗೆ ಒಳಪಡಿಸಿಕೊಳ್ಳಬೇಕಾಗುತ್ತದೆ ಅಥವಾ ಕಷ್ಟಕರವಾದ ಜೀವನ ಪದ್ಧತಿಗಳನ್ನು ಮೈಗೂಡಿಸಿಕೊಳ್ಳಬೇಕಾಗುತ್ತದೆ.

ನಮ್ಮಲ್ಲಿರುವ ಅಜ್ಞಾನದ ರಾಶಿಯಿಂದಲೇ ಈ ಕಠಿಣ ನಿಯಮಗಳು ನಮ್ಮ ಮೇಲೆ ಅಧಿಪತ್ಯವನ್ನು ಸ್ಥಾಪಿಸಿವೆ. ನಮ್ಮ ಅನ್ನಮಯವು ಅಜ್ಞಾನದ ರಾಶಿಯಾಗಿದೆ; ನಮ್ಮ ಪ್ರಾಣಮಯವು ಅಜ್ಞಾನದಿಂದ ಉತ್ಸರ್ಜಿಸುವ ಆಸೆ ಮತ್ತು ಕಾಮನೆಗಳಿಂದ ತುಂಬಿ ತುಳುಕುತ್ತಿದೆ; ನಮ್ಮ ಮನೋಮಯವು ಅಜ್ಞಾನದ ಸಾಧನವಾಗಿದ್ದು, ಅದು ಯಾವುದೋ ಅಪೂರ್ಣವೂ–ಅವಚೇತನವೂ ಆದ ಬೇರೊಂದು ಜ್ಞಾನವನ್ನು ಸಂಪಾದಿಸಲೆಂದು ಹೆಣಗುತ್ತಿದೆ. ಸಾಧಕನ ಗುರಿಯು ಈ ಅಜ್ಞಾನದ ಮಾರ್ಗದ ಮೂಲಕವೇ ಸಾಗುತ್ತಿರುತ್ತದೆ. ಇಂತಹ ಪಥದಲ್ಲಿ ನಡೆಯುತ್ತಿರುವ ಸಾಧಕನಿಗೆ ಬಹುಕಾಲದ ಸಾಧನೆಯ ನಂತರವೂ ಯಾವುದೇ ಸೂಕ್ತ ಅನುಭೂತಿಗಳಾಗಲೀ, ಪ್ರಕಾಶಿತ ಸಾಕ್ಷಾತ್ಕಾರವಾಗಲೀ ಲಭಿಸುವದಿಲ್ಲ. ಕೇವಲ ಮಾನಸಕಕ್ಷೆಗೇ ಸೀಮಿತವಾದ ಕನಸು–ಕಲ್ಪನೆ–ನಂಬಿಕೆಗಳು ಮಾತ್ರ ತೇಲಿಬರುತ್ತವೆ. ಆದರೆ, ಅವುಗಳಿಗೆ ಆಧ್ಯಾತ್ಮಿಕದ ಸತ್ಯ ದರ್ಶನಗಳನ್ನು ನೀಡುವ ಸಾಮರ್ಥ್ಯವಿರುವುದಿಲ್ಲ. ಆಗ್ಗಾಗ್ಗೆ ಮಿಂಚಿ–ಮಾಯವಾಗುವ ಬೆಳಕಿನ ರೇಖೆಗಳ ಕಾಣ್ಕೆಯು ಲಭಿಸಬಹುದು. ಆದರೆ, ಕೆಲಹೊತ್ತಿನಲ್ಲೇ ಅದರಿಂದ ಉತ್ಸರ್ಜಿತವಾದ ಬೆಳಕು ಆರಿಹೋಗುತ್ತವೆ. ಮತ್ತೊಮ್ಮೆ ಅಂತಹ ಬೆಳಕಿನ ರೇಖೆಯು ಕಂಡುಬರುವ ಹೊತ್ತಿಗಾಗಲೇ ದೀರ್ಘ ಕಾಲಾವಧಿಯ ರಾತ್ರಿಗಳು ಮುತ್ತಿ ಪ್ರಜ್ಞೆಯ ಮೇಲೆ ಅಂಧಕಾರವನ್ನು ಕವಿಸುತ್ತವೆ. ಆ ಕರಾಳ ಅವಧಿಯಲ್ಲಿ ನಿರಂತರವಾದ ಏರಿಳಿತಗಳು, ಸತತವಾಗಿ ಕಾಡುವ ನಿರಾಸೆಗಳು, ಅಗಣಿತವಾದ ಅಧಃಪತನಗಳು, ಸೋಲುಗಳ ಸಂತೆಯೇ ಬಂದು ನೆರೆಯುತ್ತವೆ. ಈ ಯೋಗ ಮಾರ್ಗವು ಬಹು ಪ್ರಯಾಸಕರವಾಗಿದ್ದು, ಆಗ್ಗಾಗ್ಗೆ ಪ್ರತಿರೋಧಗಳನ್ನೊಡ್ಡುವ ಹಳ್ಳ–ದಿನ್ನೆಗಳಂತಹ ಕಷ್ಟ–ಕಾರ್ಪಣ್ಯಗಳಿಂದ ಕೂಡಿರುತ್ತದೆ. ಯೋಗ ಮಾರ್ಗವನ್ನು ಬಿಟ್ಟು ಭಕ್ತ ಮಾರ್ಗವನ್ನನುಸರಿಸಿ ಮುಂದುವರೆಯುತ್ತೇವೆ

ಎಂದು ಹೇಳಿದರೆ, ಅಲ್ಲಿಯೂ ಸಹ ನಾವು ಶೋಧಿಸುತ್ತಿರುವ ದೈವವು ಸುಲಭವಾಗಿ ದರ್ಶನಕ್ಕೆ ಸಿಗುತ್ತಿಲ್ಲ ಎಂಬ ದೂರುಗಳು ಕೇಳಿಬರುತ್ತವೆ. ಭಕ್ತಿ ಮಾರ್ಗದಲ್ಲಿ ಎಲ್ಲವೂ ಸರಿಯಿದ್ದಾಗಲೂ ಮಿಲನ–ವಿರಹ, ಸುಖ–ದುಃಖ, ಹರ್ಷ–ಹತಾಶೆಗಳೆಂಬ ನಿರಂತರವಾದ ಏರಿಳಿತಗಳು ಕಂಡುಬರುತ್ತವೆ. ಓರ್ವ ವ್ಯಕ್ತಿಯಲ್ಲಿ ಆ ದೈವದ ಕುರಿತಾಗಿ ನಂಬಿಕೆ ಇರಲಿ, ಇಲ್ಲದೇ ಇರಲಿ ಒಟ್ಟಿನಲ್ಲಿ ಆತನಲ್ಲಿ ಮುಂದುವರೆಯುವ ಸಂಕಲ್ಪವೊಂದಿದ್ದರೆ ಸಾಕು ಆತ ಆ ದೈವಿಕ ಸಾಕ್ಷಾತ್ಕಾರದ ಬೆಳಕು ಮಳೆಕರೆವ ಆನಂದದ ಆಸ್ಥಾನವನ್ನು ತಲುಪುತ್ತಾನೆ. ನಮ್ಮಲ್ಲಿ ಶರಣಾಗತಿಯ ಸಿದ್ಧಿಯು ಲಭಿಸಿದ್ದೇ ಆದಲ್ಲಿ ನಮ್ಮ ಕಷ್ಟಗಳು ನಮಗೆ ಯಾವುದೇ ವೇದನೆಯನ್ನು ನೀಡುವದಿಲ್ಲ ಮತ್ತು ನಾವು ನೇರವಾಗಿ ಸೂರ್ಯತೇಜದ ಪಥವನ್ನು ಪ್ರವೇಶಿಸಬಹುದು. ಮತ್ತು ಒಮ್ಮೆ ನಾವು ಆ 'ಶುದ್ಧ ಭಕ್ತಿ'ಯ ಸಾನಿಧ್ಯಕ್ಕೆ ಒಳಗಾದರೆ ನಮ್ಮ ಸಾಧನೆಯ ಮಾರ್ಗವು ಸುಲಭವಾಗುತ್ತದೆ. ಒಂದು ವೇಳೆ ಆ ಶುದ್ಧ ಭಕ್ತಿಯು ನಮ್ಮ ಮಾರ್ಗವನ್ನು ಸುಲಭಗೊಳಿಸದೇ ಇದ್ದರೂ, ಆ ಮಾರ್ಗದಲ್ಲಿರುವ ಕಂಟಕಗಳನ್ನೆಲ್ಲ ದಾಟಿ ನಾವು ನಮ್ಮ ಸಾಧನೆಯ ಗುರಿಶಿಖರವನ್ನು ತಲುಪುವವರೆಗೆ ನಮ್ಮ ಕೈಹಿಡಿದು ನಡೆಸುತ್ತದೆ.

## ಯೋಗದ ತ್ರಿವಿಧ ಗುರಿಗಳು

ಪ್ರತಿಯೊಂದು ಯೋಗದಲ್ಲಿ ಸಾಧಕನು ಸಿದ್ಧಿಕೊಳ್ಳಬೇಕಾದ ಒಟ್ಟು ಮೂರು ವಿಧವಾದ ಗುರಿಗಳಿವೆ: ದಿವ್ಯತೆಯೊಂದಿಗೆ ಅನುಸಂಧಾನ ಅಥವಾ ಅದರೊಟ್ಟಿನಗಿನ ನಿರಂತರವಾದ ಸಂಪರ್ಕ, ಆತ್ಮವನ್ನು ಪರಮಾತ್ಮದೊಡನೆ ತಾದಾತ್ಮ್ಯಗೊಳಿಸುವಿಕೆ ಅಥವಾ ಮುಕ್ತಿ, ಮತ್ತು ಮರ್ತ್ಯ ಪ್ರಜ್ಞೆಯಲ್ಲಿ ನಾವು ತರಬೇಕಿರುವ ಒಂದು ನಿರ್ದಿಷ್ಟ ಬದಲಾವಣೆ ಅಥವಾ ಆಧ್ಯಾತ್ಮಿಕ ಪರಿವರ್ತನೆ. ಈ ಆಧ್ಯಾತ್ಮಿಕ ಪರಿವರ್ತನೆಯು ಉಳಿದೆರಡು ಗುರಿಗಳನ್ನು ತಲುಪಲು ಅಗತ್ಯವಾದ ಅಂಶವಾಗಿದೆ. ಆದರೆ, ಈ ಪರಿವರ್ತನೆಯನ್ನು ತರುವುದು ಅಷ್ಟು ಸುಲಭವಲ್ಲ. ಈ ಪರಿವರ್ತನೆಯ ಕ್ರಮದಲ್ಲಿ ಹಲವಾರು ಸಂಘರ್ಷ ಮತ್ತು ಸಂಕಷ್ಟಗಳ ಸರಮಾಲೆಯೇ ಎದುರಾಗುತ್ತವೆ. ಈ ಪರಿವರ್ತನೆಯನ್ನು ತರುವ ಮೊದಲು ನಮ್ಮ ಮನಸ್ಸು, ಹೃದಯ ಮತ್ತು ಇಚ್ಛೆಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಆದರೆ, ನಮ್ಮೊಳಗಿರುವ ಅಜ್ಞಾನದ ಮನೋಭಾವನೆಯು ಆರಂಭದಲ್ಲಿಯೇ ಈ ಪರಿವರ್ತನೆಯ ಕ್ರಮವನ್ನು

ಪ್ರತಿರೋಧಿಸುತ್ತದೆ. ಈ ಯೋಗದಲ್ಲಿ ಕೇವಲ ವ್ಯಕ್ತಿಗತದ ಪರಿವರ್ತನೆ ಮಾತ್ರವಲ್ಲ, ಬದಲಿಗೆ ಇಡೀ ಪ್ರಕೃತಿಯ ರೂಪಾಂತರಣವನ್ನು ತರುವ ಗುರಿಯಿದೆ. ಆ ಮೂಲಕ ಕೇವಲ ವ್ಯಕ್ತಿಗತದ ಆತ್ಮ ಮತ್ತು ಚೇತನದ ಮುಕ್ತಿಯನ್ನಷ್ಟೇ ಅಲ್ಲದೇ ಪ್ರಕೃತಿಯ ಸರ್ವಾಂಗೀಣ ರೂಪಾಂತರಣವನ್ನು ಮಾಡುವ ಪ್ರಕ್ರಿಯೆಯಾಗಿದೆ. ಇದು ಕರ್ಮ ಯೋಗ ಮೂಲಕ ದಿವ್ಯ ಜೀವನದ ಅವತರಣಿಕೆಯ ಪ್ರಕ್ರಿಯೆಯಾಗಿದೆ. ಆ ದಿವ್ಯತೆಯೊಂದಿಗೆ ಅನುಸಂಧಾನ ಹೊಂದಲು ನಮ್ಮ ಪ್ರಜ್ಞೆ ಮತ್ತು ಸ್ವಭಾವವನ್ನು ದಿವ್ಯ ರೂಪವಾಗಿ ಪರಿವರ್ತಿಸಿಕೊಳ್ಳಬೇಕಿದೆ. ಪೂರ್ಣ ಯೋಗವೆಂದರೆ, ಅದು ಚತುರ್ವಿಧವಾದ ಯೋಗ ಪಥಗಳ ಸಮನ್ವಯದ ಸಾರವಾಗಿದೆ. ಅವುಗಳೆಂದರೆ: ಮನಸ್ಸಿಗಾಗಿ ಜ್ಞಾನ ಯೋಗ, ಹೃದಯಕ್ಕಾಗಿ ಭಕ್ತಿ ಯೋಗ, ಇಚ್ಛೆಗಾಗಿ ಕರ್ಮ ಯೋಗ ಮತ್ತು ಪ್ರಕೃತಿಯ ಸರ್ವಾಂಗೀಣ ಪರಿವರ್ತನೆಗಾಗಿ ಪರಿಪೂರ್ಣತೆಯ ಯೋಗ. ಈ ನಾಲ್ಕು ವಿಧವಾದ ಪಥಗಳಲ್ಲಿ ಯಾವುದಾದರೂ ಒಂದು ಪಥವನ್ನು ಪೂರ್ಣ ಹೃದಯದಿಂದ ಅನುಸರಿಸಿದರೆ, ನಾಲ್ಕೂ ಯೋಗಗಳ ಫಲಿತಾಂಶವನ್ನು ಪಡೆಯಬಹುದು. ಉದಾಹರಣೆಗೆ: ಓರ್ವ ಭಕ್ತನು ತನ್ನಲ್ಲಿರುವ ಭಕ್ತಿಯಾಧಿಕ್ಯದಿಂದ ದಿವ್ಯತೆಯ ಸಮೀಪವರ್ತಿಯಾಗುತ್ತಾನೆ. ಮತ್ತು ದಿವ್ಯತೆಯ ಕುರಿತಾದ ಜಾಗೃತ ಭಾವನೆಯನ್ನು ತಳೆಯುತ್ತಾನೆ. ಆ ಮೂಲಕ ಜ್ಞಾನದ ಲೋಕವನ್ನು ತಲುಪುತ್ತಾನೆ. ಏಕೆಂದರೆ ದಿವ್ಯತೆಯೇ ಋತ–ಸತ್ಯವಾಗಿದ್ದು, ಉಪನಿಷತ್ತುಗಳು ಹೇಳುವಂತೆ, 'ಆ ಪರಮಾತ್ಮನನ್ನು ತಿಳಿಯುವದರಿಂದ ಸರ್ವವನ್ನೂ ತಿಳಿಯಬಹುದು.' ಭಕ್ತಿಯ ಮೂಲಕವೇ ದಿವ್ಯ ಪ್ರೇಮ ಮತ್ತು ದಿವ್ಯ ಕ್ರಿಯೆಯ ಪಥವು ತೆರೆದುಕೊಳ್ಳುತ್ತದೆ. ಆ ಪಥವು ಕರ್ಮ ಯೋಗವನ್ನು ಸಿದ್ಧಿಸಿಕೊಳ್ಳಲು ಸಹಕಾರಿಯಾಗಿದೆ. ಮತ್ತು ಭಕ್ತಿಯಿಂದಲೇ ಪ್ರಜ್ಞೆಯಲ್ಲಿ ಆಧ್ಯಾತ್ಮಿಕ ರೂಪಾಂತರಣವು ಆರಂಭವಾಗುತ್ತದೆ. ಇದು ಕೇವಲ ವ್ಯಕ್ತಿಗತ ಪರಿವರ್ತನೆಯನ್ನಷ್ಟೇ ಅಲ್ಲದೇ ಇಡೀ ಮರ್ತ್ಯ ಪ್ರಕೃತಿಯ ಸರ್ವಾಂಗೀಣ ರೂಪಾಂತರಣದ ಮೊದಲ ಹೆಜ್ಜೆಯಾಗಿದೆ. ಈ ನಿಯಮವು ಇತರ ಯೋಗದ ಪಥಗಳಿಗೂ ಅನ್ವಯವಾಗುತ್ತದೆ.

## ದಿವ್ಯತೆಯ ಕ್ರಿಯೆಗಳು

ಮನಸ್ಸು, ಹೃದಯ ಮತ್ತು ಇಚ್ಛೆಯ ಸಹಯೋಗದೊಂದಿಗೆ ಭಕ್ತಿ ಮಾರ್ಗದ ಮೂಲಕ ಆ ದಿವ್ಯತೆಯೊಡನೆ ಅನುಸಂಧಾನ ಹೊಂದುವ ಮಾರ್ಗದಲ್ಲಿ ನಮ್ಮ

ಮರ್ತ್ಯ ಸ್ವಭಾವವೇ ಅಡೆತಡೆಗಳನ್ನು ಸೃಷ್ಟಿಸುತ್ತದೆ. ನಮ್ಮ **ಬುದ್ಧಿಮನ**ದ ಕಾರ್ಯಚಟುವಟಿಕೆ, ಮತ್ತು ಅದು ಸೃಷ್ಟಿಸಿಕೊಂಡ ಅಹಮಿಕೆ, ಪೂರ್ವಗ್ರಹ ಹಾಗೂ ಅದು ಬದಲಿಸಲು ಇಚ್ಛಿಸದ ಸ್ಥಿರ ಕಲ್ಪನೆಗಳು ಕೊನೆಗೆ ಅಜ್ಞಾನದ ಮೂಲದಿಂದ ಮೇಲೆದ್ದ ವೈಚಾರಿಕ ನಿಲುವುಗಳು ನಮ್ಮನ್ನು ನಮ್ಮ ಆಂತರ್ಯದೆಡೆ ಕೊಂಡೊಯ್ಯಲಿಕ್ಕಿರುವ ಬೆಳಕಿನ ದ್ವಾರವನ್ನು ಮುಚ್ಚಿರಬಹುದು, ಇದರಿಂದ ಭಕ್ತಿಯ ಪ್ರವಾಹವು ನಮ್ಮ ಆಂತರ್ಯವನ್ನು ಪ್ರವೇಶಿಸದಂತೆ ಅದನ್ನು ಪೂರ್ಣ ರೂಪದಲ್ಲಿ ನಿರ್ಬಂಧಿಸಿರಬಹುದು, ಅಲ್ಲದೆ ನಮ್ಮ ಮಾನಸವು ಕೇವಲ ಬಾಹ್ಯ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿ ನಮ್ಮ ಆಂತರ್ಯದ ಪಯಣಕ್ಕೆ ಅನುವು ಮಾಡಿಕೊಡದೇ ಹೋಗಬಹುದು, ಚೈತ್ಯದೃಷ್ಟಿಯು ತನ್ನ ಕಾಣ್ಕೆಯನ್ನು ವಿಸ್ತರಿಸಿ ನಮ್ಮ ಆಂತರ್ಯದ ಸೂಕ್ಷ್ಮ ದರ್ಶನವನ್ನು ಕಂಡುಕೊಳ್ಳಲು ಅವಕಾಶ ನೀಡದೇ ಇರಬಹುದು. ಆದರೂ ಸಹ ಮುನ್ನುಗ್ಗುವ ಛಲವಿರುವ ಈ ಚೈತ್ಯದೃಷ್ಟಿ ಮತ್ತು ಭಕ್ತಿಯಾಧಿಕ್ಯದ ಭಾವನೆಗಳು ದಿಗ್ವಲಯಗಳ ಮೀರಿ ಬೆಳೆದು ಸರ್ವಸ್ವವನ್ನೂ ಗೆಲ್ಲಬಹುದು; ನಮ್ಮ **ಪ್ರಾಣಮಯ**ದಲ್ಲಿರುವ ಆಸೆ, ಕಾಮನೆ ಮತ್ತು ಅಹಮಿಕೆಯ ಭಾವನೆಗಳು ಬೆಳೆದು, ಸಮರ್ಪಣಾ ಭಾವದಿಂದ ದಿವ್ಯತೆಯೆಡೆ ಪಯಣಿಸಲಿರುವ ಮನ–ಹೃದಯಗಳನ್ನು ಅದರ ಮಾರ್ಗದಲ್ಲಿ ಅಡೆತಡೆಗಳನ್ನು ಒಡ್ಡಬಹುದು; ನಮ್ಮ **ಅನ್ನಮಯ**ದಲ್ಲಿ ಮನೆಮಾಡಿಕೊಂಡಿರುವ ಜಡತ್ವ, ಅಜ್ಞಾನ, ಅಪ್ರಜ್ಞೆಗಳು ಮತ್ತು ವಿಚಾರ, ಭಾವನೆ ಮತ್ತು ಕ್ರಿಯೆಗಳಿಂದಾದ ಹಳೆಯ ರೂಢಿಗಳಿಗೆ ಮಾತ್ರ ಸೀಮಿತವಾದ ಅದರ ಸ್ವಭಾವವು ಪರಿವರ್ತನೆಯ ಮಾರ್ಗದಲ್ಲಿ ಅಡಚಣೆಗಳನ್ನೊಡ್ಡಬಹುದು. ಇಂತಹ ಸಂಧಿಗ್ಧ ಪರಿಸ್ಥಿತಿಯಲ್ಲಿ ಆ ದಿವ್ಯತೆಯು ತನ್ನ ಸಮಯಕ್ಕಾಗಿ ಕಾಯಲೇಬೇಕು. ಆದರೆ, ಹೃದಯದಲ್ಲಿ ಆ ದಿವ್ಯತೆಯ ಕುರಿತಾದ ಹಸಿವು ತೀವ್ರವಾಗಿದ್ದರೆ, ಸತ್ಯ ದರ್ಶನವನ್ನು ತಡೆಹಿಡಿಯಲು ಯಾರಿಂದಲೂ ಸಾಧ್ಯವಿಲ್ಲ. ಅದಾಗ್ಯೂ ಸಾಧಕನ ಮಾರ್ಗದಲ್ಲಿರುವ ಅಡೆತಡೆಗಳು ನಿಶ್ಶೇಶವಾಗುವವರೆಗೂ ಅವನು ಕಾಯಲೇಬೇಕು. ಅಲ್ಲಿಯವರೆಗಿನ ತಟಸ್ಥ ಸ್ಥಿತಿಯಲ್ಲಿ ಮನಸ್ಸು ಆಗ್ಗಾಗ್ಗೆ ಅಲ್ಪ ಪ್ರಮಾಣದ ಆಂತರಿಕ ಮತ್ತು ಪ್ರಕಾಶದ ಸಾನಿಧ್ಯದ ಅನುಭವವಾಗಬಹುದು, ಭಕ್ತಿ ಅಥವಾ ಶಾಂತಿಯು ಲಭಿಸಬಹುದು, ಸಾಧಕನ ಕ್ರಿಯೆ ಮತ್ತು ಸೇವೆಯಲ್ಲಿ ಅವನಿಗೆ ಸಮರ್ಪಣೆಯ ಸಂತೋಷವು ಸಿಗಬಹುದು. ಆದರೆ ಅದರ ಔನ್ನತ್ಯದ ಅನುಭೂತಿಯನ್ನು ಪಡೆಯಲು ದೀರ್ಘ ಕಾಲದ ಕಾಯುವಿಕೆಯು ಅತ್ಯವಶ್ಯಕ. ಈ ಕಾಯುವಿಕೆಯ ಸುದೀರ್ಘ ಕಾಲದಲ್ಲಿ

ಅಗಣಿತವಾದ ಸಂಘರ್ಷ–ಸಂಕಷ್ಟಗಳು ಬಂದು ಬೆದರಿಸಬಹುದು. ಕೊನೆಗೊಮ್ಮೆ ದಿವ್ಯತೆಯ ಹಸ್ತಕ್ಷೇಪವು ಅವತರಿಸಿ ಮಾನವತ್ವವನ್ನು ದೈವತ್ವದೆಡೆಗೇರಿಸುತ್ತದೆ.

*

**ಬೆಳಕು–ಕತ್ತಲೆಯ ಮಿಶ್ರಣ**

ಇಲ್ಲಿಯವರೆಗೆ ನಾನು ಯೋಗ ಮಾರ್ಗದಲ್ಲಿ ಎದುರಾಗುವ ಅತ್ಯಂತ ಕಠಿಣ ಪರಿಸ್ಥಿತಿಗಳನ್ನು ವಿವರಿಸಿದ್ದೇನೆ. ಸಾಕ್ಷಾತ್ಕಾರಕ್ಕಾಗಿಯೇ ಪೂರ್ವ ನಿರ್ಧರಿತವಾದವರನ್ನೂ ಸಹ ಆ ಕಷ್ಟಗಳು ಬಾಧಿಸಬಹುದು. ಆದರೆ, ಅಲ್ಲಿ ನಿರಂತರವಾದ ಕತ್ತಲೆಯ ಕೈವಾಡವಿರುವದಿಲ್ಲ, ಬದಲಿಗೆ ಬೆಳಕು–ಕತ್ತಲೆಯ ಮಿಶ್ರಣದ ಸ್ಥಿತಿಯಿರುತ್ತದೆ. ಸಾಧನೆಯ ಆರಂಭಿಕ ಹಂತದಲ್ಲೇ ಸಿದ್ಧಿಯು ದೊರೆತರೂ ನಂತರದಲ್ಲಿ ಹಲವಾರ ಅಡೆತಡೆಗಳು ಎದುರಾಗಬಹುದು. ಸಾಧನೆಯಲ್ಲಿ ಮೇಲೆರುತ್ತಿರುವ ಪ್ರಗತಿಯ ಜೊತೆಜೊತೆಗೆ ದಾಳಿ ಮತ್ತು ಸೋಲುಗಳು ಬರಬಹುದು. ಧೃಡವಾಗಿ ಮುನ್ನುಗ್ಗುತ್ತಿರುವಾಗಲೇ ಅಜ್ಞಾನದ ಕೆಸರಿನಲ್ಲಿ ಮುಳುಗುತ್ತಿರುವ ಅನುಭವವಾಗಬಹುದು. ಒಂದೊಮ್ಮೆ ಪ್ರಖರ ಸಾಕ್ಷಾತ್ಕಾರವು ಲಭಿಸಿ, ದಿವ್ಯವೂ–ಭವ್ಯವೂ ಆದ ಆಧ್ಯಾತ್ಮಿಕ ಅನುಭೂತಿಯು ದೊರಕಿದರೂ ಅಂತಿಮ ಗುರಿಯು ಸಾಧಕನಿಂದ ಇನ್ನೂ ಬಹು ದೂರದಲ್ಲೇ ಉಳಿದಿರುತ್ತದೆ. ಋಗ್ವೇದದಲ್ಲಿ ಹೇಳಿರುವಂತೆ “ಸಾಧಕನು ಒಂದು ಗುರಿಶಿಖರವನ್ನು ತಲುಪಿದ ಕೂಡಲೇ ಅದಕ್ಕಿಂತಲೂ ಔನ್ನತ್ಯದಲ್ಲಿರುವ ಇನ್ನೊಂದು ಶಿಖರವು ಅವನಿಗೆದುರಾಗಿ, ತಾನು ಸಾಧಿಸಬೇಕಿರುವುದು ಇನ್ನೂ ಬಹಳಷ್ಟಿದೆ” ಎಂಬ ಭಾವನೆಯು ಜಾಗೃತವಾಗುತ್ತದೆ. ಆದರೆ, ನಮ್ಮನ್ನು ಮುನ್ನಡೆಸುವ ಯಾವುದೋ ಒಂದು ಅಜ್ಞಾತ ಶಕ್ತಿಯು ಸದಾ ನಮ್ಮ ಜೊತೆಗೆ ನಿಂತಿರುತ್ತದೆ. ಆ ಶಕ್ತಿಯು ಮುಂದೆ ಒಂದು ಪ್ರಜ್ಞಾಪೂರ್ವಕವಾದ ರೂಪವನ್ನು ಪಡೆದುಕೊಳ್ಳಬಹುದು. ಅಥವಾ ಒಂದು ಶಕ್ತಿಯುತವಾದ ಆಧ್ಯಾತ್ಮಿಕ ಚಿಂತನೆ, ಅವಿಚ್ಛಿನ್ನ ಅಭೀಪ್ಸೆ ಮತ್ತು ಅಚಲವಾದ ನಂಬಿಕೆಯ ರೂಪವನ್ನು ಧರಿಸಬಹುದು. ಕತ್ತಲೆಯು ಕವಿದು ಹಿಂಸ್ರ ಪರಿಸ್ಥಿತಿಯ ಸಂದರ್ಭದಲ್ಲಿ ಈ ಶಕ್ತಿಯು ಸಂಪೂರ್ಣವಾಗಿ ಮರೆಯಾದಂತೆ ಕಂಡುಬಂದರೂ ರಾತ್ರಿಯು ಕಳೆದು ಬೆಳಗು ಹರಿಯುವಂತೆ ಅಂಧಕಾರದ ಯುಗವು ಕೊನೆಗೊಳ್ಳುತ್ತಿದ್ದಂತೆ ಈ ಶಕ್ತಿಯು ಮತ್ತೆ ಕಾಣಿಸಿಕೊಂಡು ತಮ್ಮ ಪ್ರಭಾವವನ್ನು ಬೀರುತ್ತವೆ. ಇದು ಮನಸ್ಸಿನ ಆಲೋಚನೆ–ಸಂಕಲ್ಪಕ್ಕಿಂತಲೂ, ಹೃದಯ

ಅಭೀಪ್ಸೆಗಿಂತಲೂ ಆಳದಲ್ಲಿ ನೆಲೆಸಿ ಮರ್ತ್ಯ ಚಕ್ಷುವಿಗೆ ನಿಲುಕದ ಚಿರಂತನ ಅಸ್ತಿತ್ವವಾಗಿರಬಹುದು. ಕೇವಲ ಮನಸ್ಸಿನ ಕುತೂಹಲ ಮತ್ತು ಜ್ಞಾನದ ಅಭೀಪ್ಸೆಯಿಂದ ಯೋಗ ಮಾರ್ಗವನ್ನು ಪ್ರವೇಶಿಸಿದವರು ನಿರಾಸೆಯಿಂದಲೋ, ಅಥವಾ ಇನ್ನಾವುದೋ ಕಾರಣದಿಂದಲೋ ದಾರಿ ತಪ್ಪಬಹುದು. ಇನ್ನು ಆಂತರ್ಯದ ಆಕಾಂಕ್ಷೆ ಅಥವಾ ಪ್ರಾಣದ ಇಚ್ಛೆಯಿಂದ ಈ ಮಾರ್ಗದಲ್ಲಿ ಕಾಲಿರಿಸಿದವರಂತೂ ಹತಾಶೆ, ನೋವು ಮತ್ತು ಸತತ ಸೋಲುಗಳಿಂದ ಬೇಸತ್ತು ಈ ಮಾರ್ಗವನ್ನೇ ತೊರೆದುಬಿಡಬಹುದು. ಆದರೆ ನಮ್ಮಲ್ಲಿ ಆಳವಾದ ಅಸ್ಮಿತೆಯು ಇದ್ದಲ್ಲಿ ನಾವು ಈ ಮಾರ್ಗದಲ್ಲಿ ಕೊನೆಯವರೆಗೂ ಮುನ್ನಡೆಯಬಲ್ಲೆವು. ಒಂದೊಮ್ಮೆ ನಾವಾಗಿಯೇ ಆ ಮಾರ್ಗವನ್ನು ತೊರೆಯಲು ಪ್ರಯತ್ನಿಸಿದರೂ ನಮ್ಮೊಳಗಿನ ಈ ಶಕ್ತಿಯು ಅದಕ್ಕೆ ಅವಕಾಶವನ್ನು ನೀಡುವದಿಲ್ಲ. ಅಥವಾ ಆ ಶಕ್ತಿಯು ಉತ್ಸರ್ಜಿಸುವ ಆಧ್ಯಾತ್ಮಿಕ ಹಸಿವು ನಮ್ಮನ್ನು ಮತ್ತೇ ಆ ಮಾರ್ಗವನ್ನು ಹಿಡಿಯುವಂತೆ ಪ್ರೇರೇಪಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/687–88**



ಮಾರ್ಗವು ದೂರವಾಗಿರಬಹುದು, ಆದರೆ ಶರಣಾಗತಿಯಿಂದ ಈ ಮಾರ್ಗವನ್ನು ಹತ್ತಿರವಾಗಿಸಿಕೊಳ್ಳಬಹುದು; ಮಾರ್ಗವು ಕಷ್ಟಕರವಾಗಿರಬಹುದು, ಆದರೆ ಪೂರ್ಣ ರೂಪದ ನಂಬಿಕೆಯಿಂದ ಅದನ್ನು ಸುಖಪ್ರದವಾಗಿಸಿಕೊಳ್ಳಬಹುದು.

**– ಶ್ರೀಮಾತೆ, CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/108**

# ಅಡೆ–ತಡೆಗಳು ಮತ್ತು ಸೂರ್ಯತೇಜದ ಪಥ

**– ಅನು: ಡಾ|| ಮಹಾದೇವ ಸಕ್ರಿ, ವಿಜಯಪುರ**

## ತೊಂದರೆಗಳನ್ನು ಎದುರಿಸುವುದು

ನೀವು ತೆಗೆದುಕೊಂಡಿರುವ ನಿಲುವು ಸರಿಯಾಗಿದೆ. ಕೆಲವೊಮ್ಮೆ ನಿಮ್ಮ ಮೇಲೆ ಎರಗುವ ಮತ್ತು ನಿಮ್ಮನ್ನು ಸರಿಯಾದ ಪ್ರಜ್ಞೆಯಿಂದ ಹೊರಗೆ ಎಸೆಯುವ ಹಲ್ಲೆಗಳನ್ನು ಬೇಗನೆ ಮಣಿಸಲು ನಿಮಗೆ ಸಹಾಯ ಮಾಡುವುದು ಈ ಭಾವನೆ ಮತ್ತು ನಿಲುವಾಗಿದೆ. ನೀವು ಹೇಳಿದಂತೆ, ಹಾಗೆ ತೆಗೆದುಕೊಂಡ ಕಷ್ಟಗಳು ಅವಕಾಶಗಳಾಗುತ್ತವೆ; ಸರಿಯಾದ ಮನೋಭಾವದಿಂದ ಎದುರಿಸಿದ ಮತ್ತು ಜಯಿಸಿದ ಕಷ್ಟವು, ಒಂದು ವಿಘ್ನವು ಕಣ್ಮರೆಯಾಗಿರುವುದನ್ನು ಮತ್ತು ಮುಂದಕ್ಕೆ ಒಂದು ಹೊಸ ಹೆಜ್ಜೆ ತೆಗೆದುಕೊಂಡಿರುವುದನ್ನು ನಾವು ಕಂಡುಕೊಳ್ಳುತ್ತೇವೆ. ಪ್ರಶ್ನಿಸೋದು, ನಮ್ಮ ಪುರುಷನ ಯಾವುದಾದರು ಭಾಗದಲ್ಲಿ ವಿರೋಧ ಮಾಡೋದು ಕಷ್ಟವನ್ನು ಮತ್ತು ತೊಂದರೆಗಳನ್ನು ಹೆಚ್ಚಿಸುತ್ತೆ – ಅದಕ್ಕಾಗಿ ಗುರುಗಳ ಮಾರ್ಗದರ್ಶನವನ್ನು ಪ್ರಶ್ನಾತೀತವಾಗಿ ಸ್ವೀಕರಿಸುವುದು, ಅದಕ್ಕೆ ನಿರಂತರವಾಗಿ ವಿಧೇಯತೆಯನ್ನು ತೋರೋದು ಪ್ರಾಚೀನ ಭಾರತೀಯ ಯೋಗದಲ್ಲಿ ಅನಿವಾರ್ಯವೆಂದು ಹೇಳಲಾಗಿತ್ತು – ಇದನ್ನು ಗುರುಗಳ ಹಿತಕ್ಕಾಗಿ ಬೇಡಿದ್ದಲ್ಲ, ಆದರೆ ಶಿಷ್ಯನ ಹಿತಕ್ಕಾಗಿ ಬೇಡಲಾಗಿತ್ತು.

## ಸಾಧಿಸು

ಯಾವಾಗ ಸಾಧಕನು ಪ್ರಕೃತಿಯ ಸಾಮಾನ್ಯ ಕ್ರಮವಾದಂಥ ನಿಧಾನಗತಿಯ ನಿರ್ಮೂಲನೆಯ ಬದಲಿಗೆ ಸಂಪೂರ್ಣ ಮತ್ತು ನಿರ್ಣಾಯಕ ಪ್ರಗತಿಯನ್ನು ಸಾಧಿಸಲು ಬಯಸುತ್ತಾನೋ, ಈ ರೀತಿಯ ತೀವ್ರವಾದ ಹೋರಾಟವು ಸಾಧಕನಿಗೆ ಆಗಾಗ್ಗೆ ಬರುತ್ತದೆ; ಮೇಲಿನ ಬಲವಾದ ಪ್ರಚೋದನೆಯು ಕೆಳಗಿನಿಂದ ತೀವ್ರವಾದ ಹಿಂದೆಳೆತದಿಂದ ಪ್ರತಿರೋಧಿಸಲ್ಪಡುತ್ತದೆ. ಆದರೆ, ಒಬ್ಬ ವ್ಯಕ್ತಿ ಪಟ್ಟುಹಿಡಿದು ಜಯಿಸಿದಾಗ ಆಗುವ ಪ್ರಯೋಜನವೆಂದರೆ, ಹೋರಾಟದಿಂದ ಹೆಚ್ಚಿನದನ್ನು ಪಡೆಯಲಾಗುತ್ತದೆ ಮತ್ತು ಆ ಪುರುಷನಲ್ಲಿನ ಪ್ರತಿರೋಧಿಸುವ ಭಾಗದಲ್ಲಿ ನಿರ್ಣಾಯಕ ಲಾಭ ಉಂಟಾಗುತ್ತದೆ. ಆದ್ದರಿಂದ ತಾಳ್ಮೆಯಿಂದಿರಿ ಮತ್ತು ಇಂತಹ

ಕಠಿಣ ಹೋರಾಟದಲ್ಲಿ ಸುಲಭವಾಗಿ ಸಂಭವಿಸಬಹುದಾದ, ಕೆಲವೊಮ್ಮೆ ಆಗುವ ಚಂಚಲತೆಗಳಿಗೆ ಅಥವಾ ಎಡವಟ್ಟುಗಳಿಗೆ ದುಃಖಿಸಬೇಡಿ. ಅಂತಹ ವಿಷಯಗಳಲ್ಲಿ ಕಾಲಹರಣ ಮಾಡದೆ ಮತ್ತೆ ತನ್ನನ್ನು ತಾನೇ ಸಾವರಿಸಿಕೊಂಡು ದೃಢವಾಗಿ ಮುನ್ನಡೆಯುವುದು ಸಾಧಕನಿಗೆ ಯಾವಾಗಲೂ ಒಂದು ನಿಯಮವಾಗಿರಬೇಕು. ನಮ್ಮ ಸಹಾಯ, ನಮ್ಮ ಶಕ್ತಿ, ನಮ್ಮ ಆಶೀರ್ವಾದವು ಅಂತಿಮ ಗೆಲುವಿನವರೆಗೂ ಪ್ರತಿ ಹೆಜ್ಜೆಯಲ್ಲೂ ನಿಮಗೆ ಯಾವಾಗಲೂ ಸಹಾಯ ಮಾಡುತ್ತಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/692–93**

**ತಾಳಿಕೊಳ್ಳುವುದರ ರಹಸ್ಯ**

ಈ ಚಿಕ್ಕ ವಿಷಯಗಳ ಬಗ್ಗೆ ಏಕೆ ಉತ್ತೇಜಿತರಾಗಬೇಕು ಅಥವಾ ಅವುಗಳು ನಿಮಗೆ ತೊಂದರೆ ಮಾಡಲು ಬಿಡಬೇಕೆ? ನೀವು ಶಾಂತವಾಗಿದ್ದರೆ, ಸಂಗತಿಗಳು ಚನ್ನಾಗಿ ನಡೆದುಕೊಂಡು ಹೋಗುತ್ತವೆ ಮತ್ತು ಅಲ್ಲಿ ಯಾವುದೇ ತೊಂದರೆಯಿದ್ದರೆ, ಶಾಂತಿ ಮತ್ತು ಪ್ರಭಾವಕ್ಕೆ ಮುಕ್ತವಾಗಿರುವ ಶಾಂತ ಮನಸ್ಸಿನಲ್ಲಿ ನೀವು ಒಂದು ಮಾರ್ಗವನ್ನು ಕಂಡುಕೊಳ್ಳುವ ಸಾಧ್ಯತೆಯಿದೆ. ಅದು (ತೊಂದರೆಯನ್ನು ಸಹಿಸಿಹೊಂಡು) ಮುಂದುವರೆಯುವ ರಹಸ್ಯವಾಗಿದೆ, ಸಂಗತಿಗಳು ಮತ್ತು ಘಟನೆಗಳನ್ನು, ನೈಜ ತಪ್ಪುಗಳನ್ನೂ ಸಹ, ನಿಮ್ಮನ್ನು ಅಸಮಾಧಾನ ಮಾಡಲು ಬಿಡಬೇಡಿ, ಆದರೆ ಹೆಚ್ಚು ಶಾಂತವಾಗಿರಿ, ನಿಮ್ಮನ್ನು ಮುನ್ನಡೆಸಲು ಮತ್ತು ವಿಷಯಗಳನ್ನು ಇನ್ನೂ ಹೆಚ್ಚು ಸರಿಪಡಿಸಲು ಪ್ರಭಾವದಲ್ಲಿ ಅಥವಾ ಶಕ್ತಿಯಲ್ಲಿ ನಂಬಿಕೆಯಿಡಿ. ನಾವು ಹಾಗೆ ಮಾಡಿದಾಗ ಸಂಗತಿಗಳು ಹೆಚ್ಚು ಹೆಚ್ಚು ಸರಿಯಾಗುತ್ತವೆ ಮತ್ತು ತೊಂದರೆಗಳು ಮತ್ತು ತಪ್ಪುಗಳು ಸಹ ಕಲಿಕೆಗೆ ಸಾಧನವಾಗುತ್ತವೆ ಮತ್ತು ಪ್ರಗತಿಯತ್ತ ಹೆಜ್ಜೆ ಹಾಕುತ್ತವೆ.

*

ಚಿಕ್ಕ ಚಿಕ್ಕ ವಿಷಯಗಳಿಂದ ನಿಮ್ಮನ್ನು ನೀವು ಚಿಂತೆಗೆ ಅಥವಾ ಬೇಸರಕ್ಕೆ ಒಳಪಡಿಸಿಕೊಳ್ಳಬೇಡಿ. ಆಂತರಿಕ ದೃಷ್ಟಿಕೋನದಿಂದ ವಿಷಯಗಳನ್ನು ನೋಡಿ ಮತ್ತು ಸಂಭವಿಸುವ ಎಲ್ಲದರಿಂದ ಪ್ರಯೋಜನವನ್ನು ಪಡೆಯಲು ಪ್ರಯತ್ನಿಸಿ. ನೀವು ತಪ್ಪು ಮಾಡಿದರೆ, ಅದೇ ಕಾರಣಕ್ಕೆ ದುಃಖಿತರಾಗಬೇಡಿ – ಬದಲಿಗೆ

ಭವಿಷ್ಯದಲ್ಲಿ ಸರಿಯಾದ ಚಲನೆಯನ್ನು ಪಡೆಯಲು ಕಾರಣವನ್ನು ಕಂಡುಕೊಳ್ಳಲು ಅದರ ಮೂಲಕ ಲಾಭ ಪಡೆಯಿರಿ. ನೀವು ದುಃಖ ಅಥವಾ ತೊಂದರೆಯಿಲ್ಲದೆ ಅಂತರಂಗದಿಂದ ಶಾಂತವಾಗಿ ನೋಡಿದರೆ ಮಾತ್ರ ನೀವು ಇದನ್ನು ಮಾಡಬಹುದು.

*

ನಾವು ನಿಜವಾದ ಆಧಾರವನ್ನು ಹೊಂದಿದ್ದರೆ, ಪ್ರತಿ ದಾಳಿಯ ನಂತರ ಪ್ರಗತಿಯಲ್ಲಿ ಹೆಚ್ಚು ಮುಂದುವರೆದಿರುವುದನ್ನು ನಾವು ಕಂಡುಕೊಳ್ಳುತ್ತೇವೆ ಎಂಬುದು ನಿಜವಾದ ಸಂಗತಿಯಾಗಿದೆ.

*

ತನ್ನ ಮೇಲೆ ಗಳಿಸಿದ ಪ್ರತಿಯೊಂದು ವಿಜಯವು ಹೆಚ್ಚಿನ ವಿಜಯಗಳನ್ನು ಪಡೆಯಲು ಹೊಸ ಶಕ್ತಿ ಎಂದರ್ಥ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/693–94**

**ವಿಜಯದ ನಿಶ್ಚಿತತೆ**

ವಿಜಯದ ದೃಢತೆಯಿಂದ ಹುಟ್ಟಿದ ಶಾಂತಿಯನ್ನು ನಿಮ್ಮಲ್ಲಿ ಬೆಳೆಯುವಂತೆ ಮಾಡಬೇಕು.

*

ಈ ವಿಷಯಗಳು (ಕೋಪ, ಬಯಕೆ ಇತ್ಯಾದಿ) ಈಗಾಗಲೇ ಮಾಯವಾಗಿದ್ದರೆ, ಜಯವು ಆಗಲೆ ನಿಮ್ಮದಾಗಿರುತ್ತಿತ್ತು. ನನ್ನ ಪ್ರಕಾರ "ಗೆಲುವಿನ ದೃಢ ನಂಬಿಕೆ" ಎಂದರೆ ಅಂತಿಮ ಜಯದ ಬಗ್ಗೆ ಖಚಿತತೆ ಎಂದು ಅರ್ಥ, ಇದು ನಂಬಿಕೆಯ ವಿಷಯವಾಗಿದೆ ಮತ್ತು ದೇವರ ಮೇಲೆ ಆಂತರಿಕ ಅವಲಂಬನೆಯಾಗಿದೆ. ಈ ದೃಢ ನಂಬಿಕೆಯಿಂದ ಹುಟ್ಟಿದ ಶಾಂತಿಯು ಎಲ್ಲ ಪರಿಶ್ರಮದ ಅಥವಾ ತೊಂದರೆಗಳು ಮರಳುವ ಮೂಲಕ ನಮ್ಮನ್ನು ಕೊಂಡೊಯ್ಯುತ್ತದೆ.

*

ಬಾಹ್ಯ ಪುರುಷನಲ್ಲಿ ಯಾವುದೇ ಪ್ರತಿರೋಧವಿದ್ದರೂ, ಅದು ಹೋಗುತ್ತದೆ, ಆದರೆ ಸ್ವಲ್ಪ ಸಮಯದ ನಂತರ. ಆ ನಿಶ್ಚಿತತೆಯನ್ನು ಆಧಾರವಾಗಿ ತೆಗೆದುಕೊಳ್ಳುವುದು

ಯಾವಾಗಲೂ ಉತ್ತಮ, ಮತ್ತು ತೊಂದರೆಯ ವಿರುದ್ಧ ಸಕ್ರಿಯವಾಗಿ ಪ್ರತಿಕ್ರಿಯಿಸಲು ಸಾಧ್ಯವಾಗದಿದ್ದಾಗಲೂ ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಶಾಂತವಾಗಿ ಮತ್ತು ದೃಢವಾಗಿ ಇರುವುದು ಒಳ್ಳೆಯದು. ಶಾಂತವಾದ ನಿಷ್ಕ್ರೀಯ ಪ್ರತಿರೋಧವು ಅದನ್ನು ಬೇಗ ಹಾದುಹೋಗಲು ಸಹಾಯ ಮಾಡುತ್ತದೆ, —ನಾವು ಅಸಮಾಧಾನವಾಗಿದ್ದರೂ ಮತ್ತು ಆತಂಕಗೊಂಡಿದ್ದರೂ.

*

**ತೊಂದರೆಗಳೊಂದಿಗೆ ವ್ಯವಹರಿಸುವುದು**

ಶ್ರೀಮಾತೆಯವರ ಶಕ್ತಿಯನ್ನು ಕ್ರಿಯಾತ್ಮಕವಾಗಿ ಬೇಡಲು ಸಾಧ್ಯವಾಗದಿದ್ದರೂ, ಅದು ಬರುತ್ತದೆ ಎಂಬ ಭರವಸೆಯನ್ನು ಇಟ್ಟುಕೊಳ್ಳಬೇಕು.

*

ನೀವು ಅನುಭವಿಸುವ ಅಥವಾ ಬಾಹ್ಯದಿಂದ ಎದುರಿಸುವ ತೊಂದರೆಗಳು ನಿಮ್ಮನ್ನು ಜಯಿಸಲು ಅಥವಾ ಮಂಕಾಗಿಸಲು ಬಿಡಬೇಡಿ. ನಿಮ್ಮ ಮನಸ್ಸಿನಲ್ಲಿ ಒಂದು ವಿಷಯ ಇಟ್ಟುಕೊಳ್ಳಿ, ದೈವೀ ಸನ್ನಿಧಾನಕ್ಕೆ ಬರುವುದು ನಿಮ್ಮ ಆಧ್ಯಾತ್ಮಿಕ ಗಮ್ಯ ಮತ್ತು ನೀವು ಇಲ್ಲಿ ಇದ್ದು ನಮ್ಮಿಂದ ಸ್ವೀಕೃತವಾಗಿರುವುದರಿಂದ, ಅದನ್ನು ಅದರ ಒಪ್ಪಿಗೆಯನ್ನಾಗಿ ತೆಗೆದುಕೊಳ್ಳಬಹುದು. ಅದು ಕಾರ್ಯರೂಪಕ್ಕೆ ಬರಲು ನೀವು ಬಯಸುವುದಕ್ಕಿಂತ ಹೆಚ್ಚು ಸಮಯ ತೆಗೆದುಕೊಂಡರೆ, ಇದು ನಿಮ್ಮನ್ನು ಬೇರೆ ರೀತಿಯಲ್ಲಿ ಯೋಚಿಸುವಂತೆ ಮಾಡಬಾರದು – ಯಾಕಂದ್ರೆ ಈ ತೊಂದರೆಗಳು ಮತ್ತು ಬಾಹ್ಯ ಅಡೆತಡೆಗಳು ಮತ್ತು ಅನಿಶ್ಚಿತತೆ ಯಾವಾಗಲೂ ಅನ್ವೇಷಕನಿಗೆ ಬರುತ್ತವೆ. ನಿಮ್ಮಲ್ಲಿರುವ ತೊಂದರೆಗಳಾಗಲಿ ಅಥವಾ ಜೀವನವು ತಂದೊಡ್ಡುವ ಅಡೆತಡೆಗಳಾಗಲಿ ಅದರ ಮೇಲೆ ಒತ್ತಡ ಹೇರುತ್ತಿರುವಾಗ ಅವುಗಳು ನಿಮ್ಮ ಭೌತಿಕ ಮನಸ್ಸಿಗೆ ತೋರುವಷ್ಟು ದುಸ್ತರವಾಗಿರುವುದಿಲ್ಲ. ಇಲ್ಲಿ ಪರಿಸ್ಥಿತಿಗಳು ಹೆಚ್ಚು ಅನುಕೂಲಕರವಾಗಿದ್ದರೂ ಸಹ, ದೂರದಲ್ಲಿದ್ದರೂ ಸಹ, ಅನುಗ್ರಹ ಮತ್ತು ಸಹಾಯವು ನಿಮ್ಮೊಂದಿಗೆ ಇರುತ್ತದೆ ಎಂಬುದನ್ನು ನೆನಪಿಡಿ. ನಿಮ್ಮನ್ನು ನಿಮ್ಮ ಗುರಿಯ ಮೇಲೆ ಮಾತ್ರ ಸ್ಥಿರಗೊಳಿಸಿರಿ, ಒಳಗಿನ ಆಯ್ಕೆಯನ್ನು ದೃಢವಾಗಿ ಮತ್ತು ಸಂಪೂರ್ಣವಾಗಿ ಮಾಡಿ; ಅದು ನಿಮ್ಮ ಆತ್ಮದಲ್ಲಿದೆ, ಅದನ್ನು ನಿಮ್ಮ ಮನಸ್ಸಿನಲ್ಲಿಯೂ

ಸ್ಥಿರಗೊಳಿಸಿರಿ. ಒಮ್ಮೆ ಅದನ್ನು ಅಲ್ಲಿ ಮಾರ್ಪಡಿಸಲಾಗದಂತೆ ಸ್ಥಿರಗೊಳಿಸಿದರೆ, ಅದು ನಿಮ್ಮ ಸ್ವಂತ ಪ್ರಾಣಿಕ ಸ್ವಭಾವದ ತೊಂದರೆಗಳ ಮತ್ತು ಭೌತಕ ಜಗತ್ತಿನ ವಿರೋಧದ, ತಪ್ಪು ಗ್ರಹಿಕೆಯ ಅಥವಾ ಹಿಂಜರಿಕೆಯ ಮೇಲೆ ಜಯ ಸಾಧಿಸುತ್ತದೆ.

*

ಜಯವು ಯವಾಗಲೂ ನಿಶ್ಚಿತ – ತೊಂದರೆ ಇದ್ದಾಗಲೂ ಕೂಡ, ಗೆಲುವು ಇರುತ್ತದೆ ಎಂದು ಎಂದಿಗೂ ಸಂದೇಹ ಪಡದಿರಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/694**

## ಉಲ್ಲಾಸ

ಉಲ್ಲಾಸವು ಸಾಧನೆಯ ಸ್ವಾದವಾಗಿದೆ. ಅದು ಖಿನ್ನತೆಗಿಂತ ಸಾವಿರ ಪಟ್ಟು ಉತ್ತಮವಾಗಿದೆ.

*

ಹೆಚ್ಚು ಉಲ್ಲಾಭರಿತರಾಗಿರಿ ಹಾಗೂ ವಿಶ್ವಾಸದಿಂದಿರಿ. ಕಾಮ ಮತ್ತು ಸಂಗಡಿಗರು ನಿಸ್ಸಂಶಯವಾಗಿ ಅಲ್ಲಿರುತ್ತಾರೆ, ಆದರೆ ದೇವರು ಕೂಡ ನಿಮ್ಮೊಳಗಡೆ ಇರುತ್ತಾನೆ. ನಿಮ್ಮ ಕಣ್ಣುಗಳನ್ನು ತೆರೆಯಿರಿ ಮತ್ತು ಮುಸುಕು ಹರಿಯುವವರೆಗೆ ನೋಡಿರಿ ಮತ್ತು ನೀವು ಆತನನ್ನು – ಅಥವಾ ಅವಳನ್ನು ಕಾಣುವಿರಿ.

*

ಎಕ್ಸ (X) ಅವರು ಗಮನಿಸಿದ ಬದಲಾವಣೆಯು, ಪ್ರಾಣ ಮತ್ತು ಭೌತಿಕ ಪುರುಷನಲ್ಲಿ ಒಂದು ದೊಡ್ಡ ಪ್ರಗತಿಯನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಆನಂದದಿಂದ ಹಾಗೂ ಉಲ್ಲಾಸದಿಂದ ಇರುವುದರಲ್ಲಿ ಆಧ್ಯಾತ್ಮಿಕವಾಗಿ ಯಾವುದೇ ತಪ್ಪಿಲ್ಲ, ಅದಕ್ಕೆ ವ್ಯತಿರಿಕ್ತವಾಗಿ ಅದು ಸರಿಯಾದ ಸಂಗತಿಯಾಗಿದೆ. ಹೋರಾಟ ಮತ್ತು ಆಕಾಂಕ್ಷೆಗಳಿಗೆ ಸಂಬಂಧಿಸಿದಂತೆ, ಹೋರಾಟಗಳು ನಿಜವಾಗಿಯೂ ಪ್ರಗತಿಗೆ ಅನಿವಾರ್ಯವಲ್ಲ ಮತ್ತು ಅನೇಕ ಜನರು ಹೋರಾಡುವ ಮನೋಭಾವಕ್ಕೆ ಎಷ್ಟು ಒಗ್ಗಿಕೊಂಡಿರುತ್ತಾರೆಂದರೆ, ಅವರು ಎಲ್ಲಾ ಸಮಯದಲ್ಲಿ ಹೋರಾಟಗಳನ್ನು ಹೊಂದಿರುತ್ತಾರೆ ಮತ್ತು ಬೇರೆಯದು ಬಹಳ ಕಡಿಮೆ. ಅದು ಅಪೇಕ್ಷಣೀಯವಲ್ಲ. ಅಲ್ಲಿ ಸೂರ್ಯನ ಬೆಳಕಿನಿಂದ ಪ್ರಜ್ವಲಿಸುವ (ಆನಂದದ/ಉಲ್ಲಾಸದ) ಪಥವಿದೆ

ಹಾಗೆಯೇ ಕತ್ತಲೆ ಕವಿದಂಥ ಮಾರ್ಗವೂ ಇದೆ ಮತ್ತು ಅದು ಎರಡಕ್ಕಿಂತ ಉತ್ತಮವಾಗಿದೆ – ಒಬ್ಬನು ಮಾಯೆಯ ಮೇಲೆ ಸಂಪೂರ್ಣ ಅವಲಂಬನೆಯನ್ನು ಹೊಂದಿದ, ಯಾವುದಕ್ಕೂ ಹೆದರದ, ಯಾವುದರ ಬಗ್ಗೆಯೂ ದುಃಖಿಸದೆ ಮುನ್ನಡೆಯುವಂಥ ಮಾರ್ಗವು ಉತ್ತಮವಾದ ಮಾರ್ಗವಾಗಿದೆ. ಮಹತ್ವಾಕಾಂಕ್ಷೆಯ ಅಗತ್ಯವಿದೆ ಆದರೆ ಬೆಳಕು ಮತ್ತು ನಂಬಿಕೆ ಮತ್ತು ಆತ್ಮವಿಶ್ವಾಸ ಮತ್ತು ಸಂತೋಷದಿಂದ ತುಂಬಿದ ಪ್ರಜ್ವಲಿಸುವ ಆಕಾಂಕ್ಷೆ ಇರಬಹುದು. ಕಷ್ಟವು ಬಂದರೆ, ಅದನ್ನೂ ಸಹ ನಗುಮುಖದಿಂದ ಎದುರಿಸಬಹುದು.

*

ಲವಲವಿಕೆ ಎನ್ನುವುದು ನಿನ್ನಲ್ಲಿ ಯಾವಾಗಲೂ ಇರಬೇಕೆಂದು ನಾವು ಬಯಸುತ್ತೇವೆ. ತನ್ನ ಮಾರ್ಗವನ್ನು ಕಂಡುಕೊಂಡಿರುವುದು ಚೈತ್ಯನ ಸಂತೋಷವಾಗಿದೆ, ಮತ್ತು ಎಂತಹದೇ ತೊಂದರೆಗಳು ಬರಲಿ, ಅದನ್ನು ಮುನ್ನಡೆಸಲ್ಪಟ್ಟು ಗುರಿಯನ್ನು ತಲುಪುವುದು ಖಚಿತ. ಒಬ್ಬ ಸಾಧಕನು ಅದನ್ನು ನಿರಂತರವಾಗಿ ಹೊಂದಿರುವಾಗ, ಅವನು ಕೆಟ್ಟದಾದ ಕಷ್ಟದಿಂದ ಹೊರಬಂದಿದ್ದಾನೆ ಮತ್ತು ಈಗ ಅವನು ಸುರಕ್ಷಿತ ಮಾರ್ಗದಲ್ಲಿ ದೃಢವಾಗಿ ಸಾಗುತ್ತಿದ್ದಾನೆ ಎಂದು ನಮಗೆ ತಿಳಿದಿದೆ.

*

**ಹಾಸ್ಯಪ್ರಜ್ಞೆ**

ಹಾಸ್ಯಪ್ರಜ್ಞೆ? ಅದು ಅಸ್ತಿತ್ವದ ಸ್ವಾದವಾಗಿದೆ. ಅದಿಲ್ಲದೆ ಪ್ರಪಂಚವು ಸಂಪೂರ್ಣವಾಗಿ ಸಮತೋಲನದ ಸ್ಥಿತಿಯಿಂದ ಹೊರಬರುತ್ತಿತ್ತು – ಅದು ಈಗಾಗಲೇ ಸಾಕಷ್ಟು ಅಸಮತೋಲನವಾಗಿದೆ – ಮತ್ತು ಬಹಳ ಹಿಂದೆಯೇ ಧಗಧಗನೆ ಉರಿದು ಹೋಗುತ್ತಿತ್ತು.

*

**ಆನಂದ ಮತ್ತು ಸಂತೃಪ್ತಿ**

ಸಾಮಾನ್ಯ ಅರ್ಥದಲ್ಲಿ ಸಂತೋಷವು, ಕಾರಣದಿಂದ ಅಥವಾ ಕಾರಣ ಇಲ್ಲದೆಯೇ, ಪ್ರಾಣದ ಪ್ರಜ್ವಲಿಸುವ ಬೆಳಕಿನ ಸ್ಥಿತಿಯಾಗಿದೆ. ಸಂತೃಪ್ತಿಯು ಸಂತೋಷಕ್ಕಿಂತ ಕಡಿಮೆ ಪ್ರಮಾಣದಲ್ಲಿದೆ – ಶಾಂತಿಯ ಆನಂದ ಅಥವಾ ಕಷ್ಟದಿಂದ ಮುಕ್ತವಾಗಿರುವುದು ಆನಂದದ ಶಾಂತಿಯ ಸ್ಥಿತಿಯಾಗಿದೆ. ಸಂತೋಷವು

ಸ್ವಯಂ–ತೃಪ್ತಿಯ ಅಥವಾ ಜಡತ್ವದ ಸ್ಥಿತಿಯಾಗಿರಬಾರದು, ಮತ್ತು ಅಗತ್ಯವಿಲ್ಲ, ಏಕೆಂದರೆ ಒಬ್ಬರು ಸಂತೋಷ ಹಾಗೂ ಆಕಾಂಕ್ಷೆಯನ್ನು ಒಂದಾಗಿಸಬಹುದು. ಸಹಜವಾಗಿ ಸಂತೋಷದ ಜಡತ್ವದ ಸ್ಥಿತಿ ಇರಬಹುದು, ಆದರೆ ಹೆಚ್ಚಿನ ಜನರು ಅದರಿಂದ ಹೆಚ್ಚು ತೃಪ್ತರಾಗುವುದಿಲ್ಲ, ಅವರು ಬೇರೆ ಯಾವುದನ್ನಾದರೂ ಬಯಸಲು ಪ್ರಾರಂಭಿಸುತ್ತಾರೆ. ಸಂತೋಷದ ಶಾಂತ ನಿಶ್ಚಲತೆಯಿಂದ ತೃಪ್ತರಾದ ಯೋಗಿಗಳಿದ್ದಾರೆ, ಅದು ಯಾಕೆಂದರೆ ಸಂತೋಷವು ಆನಂದದ ಒಂದು ರೂಪವಾಗಿದೆ ಮತ್ತು ನಿಶ್ಚಲತೆಯಲ್ಲಿ ಅವರು ಆತ್ಮಾನುಭೂತಿಯನ್ನು ಮತ್ತು ಅದರ ಶಾಶ್ವತ ಶಾಂತತೆಯನ್ನು ಅನುಭವಿಸುತ್ತಾರೆ ಮತ್ತು ಅವರು ಹೆಚ್ಚೇನೂ ಬಯಸುವುದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/173–76**

## ಅನುಭವಗಳು ಮತ್ತು ಸ್ವಭಾವದ ಬದಲಾವಣೆ

ಅನುಭವಗಳಿಗೆ ಸಂಬಂಧಿಸಿದಂತೆ, ಅವೆಲ್ಲವೂ ಸರಿಯಾಗಿವೆ, ಆದರೆ ತೊಂದರೆ ಏನೆಂದರೆ, ಅವು ಸ್ವಭಾವವನ್ನು ಬದಲಾಯಿಸುವಂತೆ ಕಾಣುವುದಿಲ್ಲ, ಅವು ಪ್ರಜ್ಞೆಯನ್ನು ಮಾತ್ರ ಶ್ರೀಮಂತಗೊಳಿಸುತ್ತವೆ – ಇನ್ನೂ ಹೇಳುವುದಾದರೆ, ಮನಸ್ಸಿನ ಮಟ್ಟದಲ್ಲಿ, ಬ್ರಹ್ಮನ ಸಾಕ್ಷಾತ್ಕಾರವೂ ಸಹ ಪ್ರಕೃತಿಯನ್ನು ಅದು ಇದ್ದ ಸ್ಥಳದಲ್ಲೇ ಬಿಡುತ್ತದೆ ಎಂದು ತೋರುತ್ತದೆ, ಕೆಲವು ಬದಲಾವಣೆಗಳನ್ನು ಹೊರತುಪಡಿಸಿ. ಅದಕ್ಕಾಗಿಯೇ ನಾವು ಚೈತ್ಯನ ರೂಪಾಂತರವನ್ನು ಮೊದಲ ಅವಶ್ಯಕತೆಯಾಗಿ ಒತ್ತಾಯಿಸುತ್ತೇವೆ – ಯಾಕಂದ್ರೆ ಅದು ನಿಜವಾಗಿ ನಮ್ಮ ಸ್ವಭಾವವನ್ನು ಬದಲಿಸುತ್ತದೆ – ಮತ್ತು ಅದರ ಪ್ರಮುಖ ಸಾಧನ ಭಕ್ತಿ, ಶರಣಾಗತಿ ಇತ್ಯಾದಿಗಳಾಗಿವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/617**

## ಚೈತ್ಯ ಮತ್ತು ಉಜ್ವಲ ಪಥ

ಚೈತ್ಯನು ನಿರಂತರವಾಗಿ ಅಥವಾ ಸಾಮಾನ್ಯವಾಗಿ ಮುಂಚೂಣಿಯಲ್ಲಿ ಇದ್ದಾಗ ಅಥವಾ ಒಬ್ಬರು ನಂಬಿಕೆಯ ಹಾಗೂ ಶರಣಾಗತಿಯ ಸ್ವಾಭಾವಿಕ ಚೈತನ್ಯವನ್ನು ಹೊಂದಿದ್ದರೆ ಅಥವಾ ರೂಢಿಗತವಾಗಿ ಸೂರ್ಯನ ಅಥವಾ ಚೈತ್ಯ ಮನೋವೃತ್ತಿಯ (ಉದಾ: ಒಬ್ಬರ ಆಧ್ಯಾತ್ಮಿಕ ನಿಯತಿಯಲ್ಲಿ ಒಂದು ನಂಬಿಕೆ)

ಕಡೆಗೆ ಮುಖ ತಿರುಗಿದ್ದರೆ ಅಥವಾ ಆತನು ಚೈತ್ಯ ಸ್ವರೂಪವನ್ನು ಹೊಂದಿದ್ದರೆ ಮಾತ್ರ ಉಜ್ವಲ ಪಥವನ್ನು ಅನುಸರಿಸಬಹುದು. ಹಾಗೆಂದ ಮಾತ್ರಕ್ಕೆ ಉಜ್ವಲ ಮನುಷ್ಯನಿಗೆ ತೊಂದರೆಗಳು ಇರುವುದಿಲ್ಲವೆಂದು ಅರ್ಥವಲ್ಲ; ಅವನಿಗೆ ಅನೇಕ ತೊಂದರೆಗಳಿರಬಹುದು, ಆದರೆ ಆತ ಅವುಗಳನ್ನು "ದೈನಂದಿನ ಕಾರ್ಯದಲ್ಲಿ ಎಲ್ಲವೂ" ಎಂಬಂತೆ ಉಲ್ಲಾಸದಿಂದ ಗೌರವಿಸುತ್ತಾನೆ. ಆತ ಕೆಟ್ಟ ಹೊಡೆತಗಳನ್ನು ಪಡೆದುಕೊಂಡರೆ, "ಸರಿ, ಅದೊಂದು ವಿಚಿತ್ರ ನಡೆಯಾಗಿತ್ತು, ಆದರೆ ದೇವರು ಸ್ಪಷ್ಟವಾಗಿ ಒಂದು ವಿಚಿತ್ರವಾದ ಮನಃಸ್ಥಿತಿಯಲ್ಲಿದ್ದಾನೆ ಮತ್ತು ಆತ ಕೆಲಸಗಳನ್ನು ಮಾಡುವ ವೈಖರಿ ಅದಾಗಿದ್ದರೆ, ಅದು ಸರಿಯಾಗಿಯೇ ಇರಬೇಕು; ಖಂಡಿತವಾಗಿ ಇನ್ನೂ ನಾನೊಬ್ಬ ವಿಚಿತ್ರವಾದ ಸಂಗಾತಿಯಾಗಿದ್ದೇನೆ ಮತ್ತು ಅದು ನನ್ನನ್ನು ಸರಿದಾರಿಗೆ ತರುವ ಏಕೈಕ ಸಾಧನವಾಗಿತ್ತು ಎಂದು ನಾನು ಭಾವಿಸುತ್ತೇನೆ," ಎಂದು ಹೇಳಲು ಸಮರ್ಥನಾಗಿದ್ದಾನೆ. ಆದರೆ ಪ್ರತಿಯೊಬ್ಬರೂ ಆ ರೀತಿ ಇರಲು ಸಾಧ್ಯವಿಲ್ಲ, ಮತ್ತು ಎಲ್ಲವನ್ನೂ ಸರಿಪಡಿಸುವ ಶರಣಾಗತಿ ಮಾಡುವುದು, ನೀವು ಹೇಳಿದಂತೆ, ಸಂಪೂರ್ಣವಾಗಿ ಮಾಡುವುದು ಕಷ್ಟ. ಅದಕ್ಕಾಗಿಯೇ ನಾವು ಒಂದೇ ಬಾರಿಗೆ ಸಂಪೂರ್ಣ ಶರಣಾಗತಿಗೆ ಒತ್ತಾಯಿಸುವುದಿಲ್ಲ, ಆದರೆ ಶುರುವಾತಿಗೆ ಸ್ವಲ್ಪದರಲ್ಲೇ ತೃಪ್ತರಾಗುತ್ತೇವೆ, ಉಳಿದದ್ದು ಸಾಧ್ಯವಾದಷ್ಟು ಬೆಳೆಯಲಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/618**

## ಅತ್ಯಂತ ಸರಳ, ಅತ್ಯಂತ ಸಹಜ ಮತ್ತು ನೇರ

ಈ ಮಾರ್ಗವು ನಿಮಗೆ ಅಥವಾ ನಿಮ್ಮಂತಹವರಿಗೆ ತುಂಬಾ ಕಷ್ಟ ಮತ್ತು ಇದನ್ನು ನನ್ನಂತಹ ಅಥವಾ ಶ್ರೀಮಾತೆಯವರಂತಹ "ಅವತಾರಗಳು" ಮಾತ್ರ ಮಾಡಬಲ್ಲರು ಎಂದು ನೀವು ಹೇಳುತ್ತೀರಿ. ಅದೊಂದು ವಿಚಿತ್ರವಾದ ತಪ್ಪು ಕಲ್ಪನೆಯಾಗಿದೆ, ಏಕೆಂದರೆ ಇದೊಂದು ಅತ್ಯಂತ ಸುಲಭ ಮತ್ತು ಸರಳ ಮತ್ತು ನೇರ ಮಾರ್ಗವಾಗಿದೆ ಮತ್ತು (ಅವರು ತಮ್ಮ ಮನಸ್ಸು ಮತ್ತು ಪ್ರಾಣವನ್ನು ಸಮಾಧಾನ ಮಾಡಿದರೆ) ಯಾರು ಬೇಕಾದರೂ ಅದನ್ನು ಮಾಡಬಹುದು, ನಿಮ್ಮ ಸಾಮರ್ಥ್ಯದ ಹತ್ತನೇ ಒಂದು ಭಾಗ ಸಾಮರ್ಥ್ಯವನ್ನು ಹೊಂದಿರುವವರೂ ಸಹ ಅದನ್ನು ಮಾಡಬಹುದು. ಇದು ಆತಂಕ ಹಾಗೂ ಒತ್ತಡದ ಮತ್ತು ಕಠಿಣ ಪ್ರಯತ್ನದ ಇನ್ನೊಂದು ಮಾರ್ಗವಾಗಿದೆ ಮತ್ತು ಅದು ತಪಸ್ಸಿನ ಅಗಾಧ ಶಕ್ತಿಯನ್ನು

ಬಯಸುತ್ತದೆ. ಶ್ರೀಮಾತೆ ಮತ್ತು ನನಗೆ ಸಂಬಂಧಿಸಿದಂತೆ, ನಾವು ಎಲ್ಲ ರೀತಿಯ ಮಾರ್ಗಗಳನ್ನು ಪ್ರಯತ್ನಿಸಬೇಕಾಯಿತು, ಎಲ್ಲ ವಿಧಾನಗಳನ್ನು ಅನುಸರಿಸಬೇಕಾಯಿತು, ಸಾಲು ಸಾಲು ತೊಂದರೆಗಳನ್ನು ಗೆಲ್ಲಲು, ಆಶ್ರಮದಲ್ಲಿನ ನಿಮಗಿಂತ ಅಥವಾ ಹೊರಗಿನ ಬೇರೆಯರಿಗಿಂತ ಅತಿ ಹೆಚ್ಚು ಭಾರವನ್ನು ಹೊರಲು, ಅತ್ಯಂತ ಕಠಿಣ ಪರಿಸ್ಥಿತಿಗಳನ್ನು, ಹೋರಾಡಲು ಯುದ್ಧಗಳನ್ನು, ಅನುಭವಿಸಲು ಗಾಯಗಳನ್ನು, ಅಭೇದ್ಯ ತೊಡಕು ಮತ್ತು ಮರುಭೂಮಿ ಹಾಗೂ ಕಾಡನ್ನು ಭೇದಿಸಲು, ವಿರೋಧಿ ಜನ ಸಮೂಹವನ್ನು ಗೆಲ್ಲಲು, ಇಂತಹ ಕೆಲಸ ನಮಗಿಂತ ಮೊದಲು ಯಾರಿಗೂ ಮಾಡಬೇಕಾಗಿಲ್ಲವೆಂದು ನನಗೆ ಖಚಿತವಾಗಿದೆ. ನಮ್ಮಂತಹ ಕೆಲಸದಲ್ಲಿ ಮುನ್ನಡೆಸುವವನಿಗೆ ದೈವಿಕತೆಯನ್ನು ಕೆಳಗೆ ತರುವುದು, ಪ್ರತಿನಿಧಿಸುವುದು ಮತ್ತು ಮೂರ್ತಗೊಳಿಸುವುದು ಮಾತ್ರವಲ್ಲದೆ, ಮಾನವತೆಯ ಆರೋಹಣದ ಅಂಶವನ್ನು ಪ್ರತಿನಿಧಿಸುವುದು ಮತ್ತು ಮಾನವತೆಯ ಹೊರೆಯನ್ನು ಸಂಪೂರ್ಣವಾಗಿ ಹೊರುವುದು ಮತ್ತು ಕೇವಲ ಲೀಲೆಯಲ್ಲಿ ಮಾತ್ರ ಅನುಭವಿಸುವುದಲ್ಲದೆ, ಕಠಿಣ ಶ್ರದ್ಧೆಯಲ್ಲಿ ಎಲ್ಲಾ ಅಡಚಣೆಗಳನ್ನು, ಕಷ್ಟಗಳನ್ನು, ವಿರೋಧಗಳನ್ನು, ನಿರಾಶೆಗೊಂಡ ಹಾಗೂ ತೊಂದರೆಗೊಳಗಾದ ಮತ್ತು ಕೇವಲ ನಿಧಾನವಾಗಿ ಜಯಶಾಲಿಯಾಗುವ ಶ್ರಮವನ್ನು ಅನುಭವಿಸಬೇಕು, ಇವೆಲ್ಲವೂ ಈ ಮಾರ್ಗದಲ್ಲಿ ಸಾಧ್ಯವಿದೆ. ಆದರೆ ಅವೆಲ್ಲವೂ ಇತರರ ಅನುಭವದಲ್ಲಿ ಪೂರ್ಣವಾಗಿ ಪುನರಾವರ್ತನೆಯಾಗುವುದು ಅನಿವಾರ್ಯವಲ್ಲ ಅಥವಾ ಸಹನೀಯವೂ ಅಲ್ಲ. ನಾವು ಸಂಪೂರ್ಣ ಅನುಭವವನ್ನು ಹೊಂದಿರುವುದರಿಂದ ನಾವು ಇತರರಿಗೆ ನೇರವಾದ ಮತ್ತು ಸುಲಭವಾದ ಮಾರ್ಗವನ್ನು ತೋರಿಸಬಹುದು – ಅವರು ಅದನ್ನು ಸ್ವೀಕರಿಸಲು ಒಪ್ಪಿದರೆ ಮಾತ್ರ. ಅಪಾರವಾದ ಬೆಲೆಯಲ್ಲಿ ಗೆದ್ದ ನಮ್ಮ ಅನುಭವದಿಂದಾಗಿ ನಾವು ನಿಮ್ಮನ್ನು ಮತ್ತು ಇತರರನ್ನು ಒತ್ತಾಯಿಸಬಹುದು, "ಚೈತ್ಯ ಮನೋಭಾವವನ್ನು ತೆಗೆದುಕೊಳ್ಳಿ; ನೇರವಾದ ಸೂರ್ಯನ ಬೆಳಕನ್ನು ಅನುಸರಿಸಿ, ದೈವಿಕತೆಯು ನಿಮ್ಮನ್ನು ಬಹಿರಂಗವಾಗಿ ಅಥವಾ ರಹಸ್ಯವಾಗಿ ಬೆಂಬಲಿಸುತ್ತಾ – ರಹಸ್ಯವಾಗಿದ್ದರೂ, ಅವನು ಸರಿಯಾದ ಸಮಯದಲ್ಲಿ ತನ್ನನ್ನು ತಾನು ತೋರಿಸಿಕೊಳ್ಳುತ್ತಾನೆ – ಕಠಿಣವಾದ, ಕುಂಠಿತಗೊಂಡ, ಸುತ್ತುವರಿದ ಮತ್ತು ಕಷ್ಟಕರವಾದ ಪ್ರಯಾಣಕ್ಕಾಗಿ ಒತ್ತಾಯಿಸಬೇಡಿ."

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/192**

# ದೈವೀ ಅನುಗ್ರಹಕ್ಕೆ ಸಂತೋಷದ ಮಾರ್ಗ

## ಎರಡು ಸಂಗತಿಗಳು ಮಾತ್ರ ಬೇಕಾಗುತ್ತವೆ

ಎಲ್ಲಾ ಭಯ, ಆಪತ್ತು ಮತ್ತು ವಿಪತ್ತುಗಳ ವಿರುದ್ಧ ಶಸ್ತ್ರಸಜ್ಜಿತವಾದ ಜೀವನವನ್ನು ನಡೆಸಲು, ಯಾವಾಗಲೂ ಒಟ್ಟಿಗೆ ಹೋಗುವಂಥ ಕೇವಲ ಎರಡು ಸಂಗತಿಗಳು ಬೇಕಾಗುತ್ತವೆ, – ಶ್ರೀಮಾತೆಯವರ ಅನುಗ್ರಹ ಮತ್ತು ನಿಮ್ಮ ಕಡೆಯ ಆಂತರಿಕ ನಂಬಿಕೆ, ಪ್ರಾಮಾಣಿಕತೆ, ಮತ್ತು ಶರಣಾಗತಿಯಿಂದ ಕೂಡಿದ ಸ್ಥಿತಿ. ನಿಮ್ಮ ನಂಬಿಕೆಯು ಶುದ್ಧ, ಪ್ರಾಮಾಣಿಕ ಮತ್ತು ಪರಿಪೂರ್ಣವಾಗಿರಲಿ. ಮಹತ್ವಾಕಾಂಕ್ಷೆ, ಹೆಮ್ಮೆ, ಪ್ರತಿಷ್ಠೆ, ಮಾನಸಿಕ ದುರಹಂಕಾರ, ಪ್ರಾಣಿಕ ಸ್ವ–ಇಚ್ಛೆ, ವೈಯಕ್ತಿಕ ಬೇಡಿಕೆ, ನಿಮ್ನ ಸ್ವಭಾವದ ಕ್ಷುಲ್ಲಕ ತೃಪ್ತಿಗಳ ಬಯಕೆಯಿಂದ ಕಳಂಕಿತವಾಗಿರುವ ಮನಸ್ಸಿನಲ್ಲಿನ ಮತ್ತು ಪ್ರಾಣದಲ್ಲಿನ ಅಹಂಕಾರಯುಕ್ತ ನಂಬಿಕೆಯು ಕೆಳಮಟ್ಟದ ಮತ್ತು ಹೊಗೆಯಿಂದ ಆವರಿಸಲ್ಪಟ್ಟ ಜ್ವಾಲೆಯಾಗಿದ್ದು ಅದು ಮೇಲಕ್ಕೆ ಸ್ವರ್ಗದೆಡೆಗೆ ಉರಿಯಲು ಸಾಧ್ಯವಿಲ್ಲ. ನಿಮ್ಮ ಜೀವನವನ್ನು ದೈವೀ ಕಾರ್ಯಕ್ಕಾಗಿ ಮತ್ತು ದೈವೀ ಅಭಿವ್ಯಕ್ತಿಯಲ್ಲಿ ಸಹಾಯ ಮಾಡಲು ಮಾತ್ರ ನಿಮಗೆ ನೀಡಲಾಗಿದೆ ಎಂದು ಪರಿಗಣಿಸಿ. ದೈವೀ ಪ್ರಜ್ಞೆಯ ಶುದ್ಧತೆ, ಶಕ್ತಿ, ಬೆಳಕು, ವಿಶಾಲತೆ, ಶಾಂತತೆ, ಆನಂದವನ್ನು ಮತ್ತು ನಿಮ್ಮ ಮನಸ್ಸು, ಜೀವನ ಮತ್ತು ದೇಹವನ್ನು ಪರಿವರ್ತಿಸಲು ಮತ್ತು ಪರಿಪೂರ್ಣಗೊಳಿಸಲು ಅದರ ಒತ್ತಾಯವನ್ನು ಹೊರತುಪಡಿಸಿ ಏನನ್ನೂ ಆಗ್ರಹಿಸಬೇಡಿ. ದೇವರನ್ನು, ಆಧ್ಯಾತ್ಮಿಕ ಮತ್ತು ಅತಿಮಾನಸ ಸತ್ಯವನ್ನು, ಭೂಮಿಯ ಮೇಲೆ ಹಾಗೂ ನಿಮ್ಮಲ್ಲಿ ಮತ್ತು ಆಯ್ಕೆಮಾಡಲ್ಪಟ್ಟ ಎಲ್ಲರಲ್ಲೂ ಅದರ ಸಾಕ್ಷಾತ್ಕಾರ ಮತ್ತು ಅದರ ಸೃಷ್ಟಿಗಾಗಿ ಹಾಗೂ ಎಲ್ಲ ವಿರೋಧಿ ಶಕ್ತಿಗಳ ಮೇಲೆ ಅದರ ಜಯವನ್ನು ಬಿಟ್ಟು ಬೇರೆ ಏನನ್ನೂ ಕೇಳಬೇಡಿ. ನಿಮ್ಮ ಪ್ರಾಮಾಣಿಕತೆ ಮತ್ತು ಶರಣಾಗತಿಯು ನಿಜವಾಗಿರಲಿ ಮತ್ತು ಸಂಪೂರ್ಣವಾಗಿರಲಿ. ನಿಮ್ಮನ್ನು ನೀವು ಅರ್ಪಿಸಿಕೊಳ್ಳುವಾಗ, ಸಂಪೂರ್ಣವಾಗಿ, ಬೇಡಿಕೆಯಿಲ್ಲದೆ, ಷರತ್ತುಗಳಿಲ್ಲದೆ, ಸಂಕೋಚವಿಲ್ಲದೆ ಅರ್ಪಿಸಿಕೊಳ್ಳಿ, ಇದರಿಂದ ನಿಮ್ಮಲ್ಲಿರುವುದೆಲ್ಲವೂ ಶ್ರೀಮಾತೆಯವರಿಗೆ ಸೇರುತ್ತದೆ ಮತ್ತು ಅಹಂಕಾರಕ್ಕೆ ಏನೂ ಉಳಿಯುವುದಿಲ್ಲ ಅಥವಾ ಬೇರೆ ಯಾವುದೇ ಶಕ್ತಿಗೆ ಕೊಡಲ್ಪಡುವುದಿಲ್ಲ.

## ಹೆದರಲು ಏನೂ ಇಲ್ಲ

ನಿಮ್ಮ ನಂಬಿಕೆ, ಪ್ರಾಮಾಣಿಕತೆ ಮತ್ತು ಶರಣಾಗತಿಯು ಎಷ್ಟು ಪೂರ್ಣವಾಗಿರುತ್ತದೆಯೋ, ಅಷ್ಟೇ ಹೆಚ್ಚು ಅನುಗ್ರಹ ಮತ್ತು ರಕ್ಷಣೆ ನಿಮ್ಮೊಂದಿಗೆ ಇರುತ್ತದೆ. ಶ್ರೀಮಾತೆಯವರ ಅನುಗ್ರಹ ಮತ್ತು ರಕ್ಷಣೆಗಳು ನಿಮ್ಮೊಂದಿಗಿರುವಾಗ, ನಿಮ್ಮನ್ನು ಯಾವುದೂ ಸ್ಪರ್ಶಿಸಲಾರದು ಅಥವಾ ನೀವು ಯಾರಿಗೂ ಭಯಪಡಬೇಕಾಗಿಲ್ಲ? ಅದರ ಸ್ವಲ್ಪ ಅಂಶವೂ ಸಹ ನಿಮ್ಮನ್ನು ಎಲ್ಲಾ ಕಷ್ಟಗಳ, ಅಡೆತಡೆಗಳ ಮತ್ತು ಅಪಾಯಗಳ ಮೂಲಕ ಕೊಂಡೊಯ್ಯುತ್ತದೆ; ಅದರ ಪೂರ್ಣ ಉಪಸ್ಥಿತಿಯಿಂದ ಸುತ್ತುವರೆದಿರುವ ನೀವು ಯಾವುದೇ ಭಯಗಳ ಬಗ್ಗೆ ಚಿಂತಿಸದೆ, ಎಷ್ಟೇ ಶಕ್ತಿಶಾಲಿಯಾದ ಶತ್ರುತ್ವದಿಂದ ಪ್ರಭಾವಿತರಾಗದೆ, ಅದು ಈ ಲೋಕದಿಂದ ಅಥವಾ ಕಣ್ಣಿಗೆ ಕಾಣದ ಲೋಕಗಳಿಂದ ಬಂದಿದ್ದರೂ, ಸುರಕ್ಷಿತವಾಗಿ ನಿಮ್ಮ ದಾರಿಯಲ್ಲಿ ಹೋಗಬಹುದು, ಏಕೆಂದರೆ ಅದು ಶ್ರೀಮಾತೆಯವರಾಗಿದೆ. ಅದರ ಒಂದು ಸ್ಪರ್ಶವು ತೊಂದರೆಗಳನ್ನು ಅವಕಾಶಗಳನ್ನಾಗಿ, ವಿಫಲತೆಯನ್ನು ಸಫಲತೆಯನ್ನಾಗಿ ಮತ್ತು ದುರ್ಬಲತೆಯನ್ನು ಅಚಲ ಬಲವನ್ನಾಗಿ ಪರಿವರ್ತಿಸಬಹುದು. ಏಕೆಂದರೆ, ಶ್ರೀಮಾತೆಯವರ ಅನುಗ್ರಹವು ಸರ್ವೋಚ್ಛದ ಅನುಮೋದನೆಯಾಗಿದೆ ಮತ್ತು ಇಂದು ಅಥವಾ ನಾಳೆ ಅದರ ಪರಿಣಾಮವು ನಿಶ್ಚಿತ. ಈ ಪರಿಣಾಮವು ಅಧೀಕೃತವಾದ, ಅನಿವಾರ್ಯವಾದ ಮತ್ತು ಎದುರಿಸಲಾರದ ಸಂಗತಿಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/8–9 – ಶ್ರೀ ಅರವಿಂದರು**

ಪರಿಪೂರ್ಣ ಪಥ: ಪ್ರತಿಯೊಬ್ಬರಿಗೂ ದೇವರೆಡೆಗೆ
ವೇಗವಾಗಿ ಕರೆದೊಯ್ಯುವಂಥ ಪಥ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/31**

# ಪ್ರಕಾಶಕ್ಕಿಂತ ಮೊದಲ ಕತ್ತಲು

**– ಅನು: ನಾಗಜ್ಯೋತಿ ಮಾನ್ವಿ**

**ಸಂತೋಷ**

ಸಂತೋಷದಿಂದ ಇರುವ ಹೃದಯವೆಂದರೆ ಅದು ನಗುತ್ತಿರುವ, ಶಾಂತವಾಗಿರುವ, ವಿಶಾಲವಾಗಿ ತೆರೆದುಕೊಂಡಿರುವ ಮತ್ತು ಯಾವುದೇ ಕತ್ತಲೆಯೂ ಅಲ್ಲಿರದ ಹೃದಯವಗಿರುತ್ತದೆ.

*

ನೀನು ನಿಶ್ಚಲವಾಗಿ ಸಂತೋಷದಿಂದ ಇದ್ದಾಗ ಮಾತ್ರ ಹೆಚ್ಚು ಸಹಾಯಕಾರಿಯಾಗಿರುವೆ. ವಿನಾ ನೀನು ನಾಟಕೀಯವಾಗಿ ಇದ್ದಾಗ ಅಲ್ಲ ಎನ್ನುವದನ್ನು ನೀನು ಎಂದಿಗೂ ಮರೆಯಬಾರದು.

*

ನನ್ನ ಮಗುವೇ, ಸಂತೋಷದಿಂದಿರು. ಇದು ಪ್ರಗತಿಗೆ ಖಚಿತವಾದ ದಾರಿಯಾಗಿದೆ.

*

ಸಂತೋಷವು ನಿರಾಶೆಯಷ್ಟೇ ಸಾಂಕ್ರಾಮಿಕವಾಗಿದೆ ಮತ್ತು ನಿಜವಾದ ಹಾಗು ಆಳವಾದ ಸಂತೋಷವನ್ನು ಜನರಿಗೆ ಹಂಚುವದಕ್ಕಿಂತ ಹೆಚ್ಚು ಉಪಯೋಗಕರವಾದುದು ಯಾವುದೂ ಇಲ್ಲ.

*

ಸಂತೋಷವಾಗಿರಲು ಪ್ರಯತ್ನಿಸಿ. ತಕ್ಷಣವೇ ನೀವು ಆಗ ದೈವೀ ಬೆಳಕಿಗೆ ಸಮೀಪವಾಗಿರುತ್ತೀರಿ.

*

ಯಾರು ದೈವವನ್ನು ಪ್ರೀತಿಸುವರೋ ಅವರೇ ನಿಜವಾಗಿ ಸಂತೋಷದಿಂದಿರುವರು. ಏಕೆಂದರೆ ಅವರ ಜೊತೆ ಯಾವಾಗಲೂ ದೈವವು ಇದ್ದೇ ಇರುತ್ತದೆ.

*

ಇತ್ತೀಚಿಗೆ ನನಗೆ ಎಷ್ಟೋ ತೊಂದರೆಗಳು ಬರುತ್ತಿವೆ. ಆದರೆ ಅವುಗಳನ್ನು ನಾನು ಸಂತೋಷದಿಂದಲೇ ಹೇಗೆ ಪರಿಹರಿಸಿಕೊಳ್ಳಬಹುದು ಎನ್ನುವದು ಗೊತ್ತಾದಾಗ ಆಶ್ಚರ್ಯಪಡುತ್ತೇನೆ.

*

ಸಂಪೂರ್ಣ ಮತ್ತು ಕೇವಲ ದೈವೀ ಕೃಪೆಯ ಮೇಲೆ ಅವಲಂಬನೆಗೊಳ್ಳುವದೇ ನಿಜವಾದ ಹಾಗೂ ಶಾಶ್ವತವಾದ ಸಂತೋಷವನ್ನು ಪಡೆದುಕೊಳ್ಳಲು ಇರುವ ಏಕೈಕ ಮಾರ್ಗವಾಗಿದೆ.

*

ಯಾವಾಗಲೂ ಒಳ್ಳೆಯವರಾಗಿರಿ. ಆಗ ನೀವು ಯಾವಾಗಲೂ ಸಂತೋಷದಿಂದ ಇರುವಿರಿ.

*

ನಾವು ಯಾವಾಗಲೂ ಒಳ್ಳೆಯದನ್ನೇ ಮಾಡೋಣ. ಅಂದರೆ ನಾವು ಯಾವಾಗಲೂ ನಿಶ್ಚಿತವಾಗಿಯೂ ಸಂತೋಷದಿಂದ ಇರುವೆವು.

*

ನಾವು ಯಾವಾಗಲೂ ಸಂತೋಷವನ್ನು ದೈವತ್ವದಲ್ಲಿಯೇ ಅರಸೋಣ.

*

ದೈವವು, ನಿಜವಾದ ಅಂತರಂಗದ ಸಂತೋಷವನ್ನು ಮಂಜೂರು ಮಾಡಿದಾಗ, ಜಗತ್ತಿನ ಯಾವ ಶಕ್ತಿಯೂ ಅದನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ.

*

ಆಧ್ಯಾತ್ಮಿಕ ಸಂತೋಷ; ಸತತವಾಗಿಯೂ ಮುಗುಳ್ನಗುತ್ತಲೇ ಇರುತ್ತದೆ. ಅದನ್ನು ಯಾವುದೇ ಸಂಗತಿಯೂ ವಿಚಲನೆಗೊಳಿಸಲು ಸಾಧ್ಯವಿಲ್ಲ.

*

ಇದನ್ನು ಯಾವಾಗಲೂ ನೆನಪಿಡಿ, ನೀವು ಪಡೆಯುವ ಸಂತೋಷವು ನೀವು ಕೊಡುವ ಸಂತೋಷದ ಮೇಲೆಯೇ ಅವಲಂಬಿತವಾಗಿರುತ್ತದೆ.

*

ಸಂತೋಷವನ್ನು ಪಡೆದುಕೊಳ್ಳುವದಕ್ಕಿಂತಲೂ ಸಂತೋಷವನ್ನು ಕೊಡುವದರಲ್ಲಿ ಹೆಚ್ಚಿನ ಸಾರ್ಥಕತೆ ಇರುತ್ತದೆ.

*

ನಮ್ಮದೇ ಸಂತೋಷದ ಬಗೆಗೆ ಕಾಳಜಿ ಮಾಡುವದು ನಮ್ಮನ್ನು ಅಸಂತೋಷಕ್ಕೆ ಕೊಂಡೊಯ್ಯುವ ಮಾರ್ಗವೇ ಆಗಿರುತ್ತದೆ.

*

ನಾವು ನಮ್ಮ ಸಂತೋಷವನ್ನು ಗಟ್ಟಿಯಾಗಿ ಮತ್ತು ಪರಿಶುದ್ಧವಾಗಿ ಇಟ್ಟುಕೊಳ್ಳಬೇಕೆಂದರೆ, ಅದಕ್ಕೆ ವಿರೋಧಿಯಾದ ಯಾವುದೇ ವಿಚಾರಗಳ ಬಗೆಗೆ ಆಕರ್ಷಿತವಾಗಬಾರದು.

*

ಯಾವಾಗಲೂ ಸಂತೋಷದಿಂದ ಇರುವದು ಮತ್ತು ಪರಿಶುದ್ಧ ಹಾಗು ಅಚಲವಾದ ಸಂತೋಷದಲ್ಲಿ ಇರುವದು, ಇದನ್ನು ಸಾಧಿಸುವದು ಬೇರೆಲ್ಲದಕ್ಕಿಂತಲೂ ಕಠಿಣವಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/179–181**

**ಇತರರ ಅಭಿಪ್ರಾಯಗಳು**

ಇನ್ನೊಬ್ಬರ ಭಾವನೆಗಳನ್ನು ಮತ್ತು ಅವರ ಇಷ್ಟಗಳನ್ನು ನಿನ್ನ ಮೇಲೆ ಪರಿಣಾಮ ಬೀರದ ಹಾಗೆ ಇರುವದು ಸೂಕ್ತವಾದ ದಾರಿಯಾಗಿರುತ್ತದೆ. ಇವೆಲ್ಲವನ್ನೂ ಮೀರಿ, ಮೇಲೇರಿ ಸತತವಾಗಿ ದಿವ್ಯತೆಯ ಸಾನಿಧ್ಯ, ಪ್ರೀತಿ ಮತ್ತು ರಕ್ಷಣೆಯ ಭಾವದಲ್ಲಿರಬೇಕು.

*

ಹೊರಗಿನಿಂದ ಬರುವ ಯಾವುದನ್ನೂ ನಿನ್ನ ಹತ್ತಿರ ಬರದಂತೆ ಮತ್ತು ನಿನ್ನನ್ನು ಅಶಾಂತಗೊಳಿಸಲು ಬಿಡಬೇಡ. ಜನರು ಏನನ್ನು ಯೋಚಿಸುತ್ತಾರೆ, ಏನನ್ನು ಮಾಡುತ್ತಾರೆ ಅಥವಾ ಏನು ಹೇಳುತ್ತಾರೆ ಎನ್ನುವದು ಅಲ್ಪ ಮಹತ್ವದ್ದಾಗಿರುತ್ತದೆ. ನಿಜವಾಗಿ ಮುಖ್ಯವಾಗಿರುವ ಸಂಗತಿ ಎಂದರೆ, ದೇವರೊಂದಿಗೆ ನಿನ್ನ ಸಂಬಂಧ

ಮಾತ್ರ. ಬೇರೆ ವ್ಯಕ್ತಿಯ ಪ್ರಭಾವಕ್ಕೆ ತೆರೆದಿಟ್ಟುಕೊಳ್ಳುವದು ವಿಷಾದದ ಸಂಗತಿಯಾಗಿರುತ್ತದೆ. ದೈವವನ್ನು ಬಿಟ್ಟು ಬೇರಾವ ಪ್ರಭಾವಕ್ಕೂ ಒಳಗಾಗಬಾರದು.

*

ಬೇರೆಯವರ ಕ್ರಿಯೆ ಅಥವಾ ವಿಚಾರ ಅಥವಾ ಮಾತುಗಳಿಂದ ನೋವು ಅನುಭವಿಸುವದು –ಇದು ಯಾವಾಗಲೂ ನಮ್ಮ ಶಕ್ತಿಹೀನತೆಯ ಲಕ್ಷಣವಾಗಿದೆ. ನಮ್ಮ ಇಡೀ ಸತ್ತೆಯ ದಿವ್ಯತ್ವದ ಕಡೆಗೆ ಸಾಗುತ್ತಿಲ್ಲ ಮತ್ತು ಅದರ ಪ್ರಭಾವದೊಳಗೂ ಇಲ್ಲ ಎನ್ನುವದನ್ನು ಇದು ಸಾಬೀತು ಪಡಿಸುತ್ತದೆ. ಆಗ, ತನ್ನಲ್ಲಿ ಪ್ರೀತಿ, ತಾಳ್ಮೆ, ತಿಳುವಳಿಕೆ ಮತ್ತು ಸಹನೆ ಎನ್ನುವ ಆಧ್ಯಾತ್ಮಿಕ ವಾತಾವರಣವನ್ನು ರೂಪಿಸಿಕೊಳ್ಳುವದನ್ನು ಬಿಟ್ಟು ನಮ್ಮ ಅಹಂಕಾರವು ಇನ್ನೊಂದು ಅಹಂಕಾರದೊಡನೆ ಸ್ಪಂದಿಸಿ, ಕಠಿಣತೆಯಿಂದ ಮತ್ತು ಯಾತನೆಯಿಂದ ಕೂಡಿದ ಭಾವನೆಗಳಲ್ಲಿ ಅಸಾಮರಸ್ಯದ ಸೃಷ್ಟಿಗೆ ಕಾರಣವಾಗುತ್ತದೆ. ದೈವವು ಪ್ರತಿಯೊಬ್ಬರಲ್ಲಿಯೂ ಬೇರೆ ಬೇರೆ ರೀತಿಯಲ್ಲಿಯೇ ವ್ಯವಹರಿಸುತ್ತಾ ಇರುತ್ತದೆ. ಆದರೆ ಇದು ಅಹಂಕಾರಕ್ಕೆ ಗೊತ್ತಿರುವದಿಲ್ಲ. ಜೊತೆಗೆ ತನ್ನದೇ ಅಹಂಕಾರದಲ್ಲಿಯೇ ಎಲ್ಲವನ್ನೂ ತೀರ್ಮಾನಿಸುವದೇ ಗೊಂದಲದ ಹೆಚ್ಚಳಕ್ಕೆ ಕಾರಣವಾಗುತ್ತದೆ. ಉತ್ಕಟ ಭಾವನೆ ಮತ್ತು ಅಸಹನೆಯಿಂದ ಮಾಡುವದು ದೈವತ್ವವಾಗಿರುವದಿಲ್ಲ. ಏಕೆಂದರೆ ದೈವವು ಕೇವಲ ಶಾಂತಿ ಮತ್ತು ಸಾಮರಸ್ಯದಿಂದ ಕಾರ್ಯಾಚರಣೆ ಮಾಡುತ್ತಾನೆ.

*

ನೀವು ಸಂಕಟದಲ್ಲಿದ್ದೀರಿ, ಏಕೆಂದರೆ ನೀವು ನಿಮ್ಮ ಆತ್ಮದ ಧ್ವನಿಯನ್ನು ಕೇಳುವ ಬದಲಾಗಿ ಬೇರೆಲ್ಲ ಕಡೆಗೆ ಅದರಲ್ಲೂ ಅಪರಿಶುದ್ಧತೆಯನ್ನು ಹೊಂದಿರುವ, ಕುರೂಪವಾಗಿರುವ ಮತ್ತು ಮನಸ್ಸಿನ ಅಸ್ಪಷ್ಟ ಪ್ರಜ್ಞೆಯ ಸಲಹೆಗಳನ್ನು ಒಪ್ಪಿಕೊಂಡಿರುತ್ತೀರಿ. ಇದಕ್ಕೆ ಕಾರಣವೆಂದರೆ ಇವು ಯಾವಾಗಲೂ ಚೈತ್ಯ ಪುರುಷನ ಪರಿಶುದ್ಧತೆಯ ಸಂಪರ್ಕದಲ್ಲಿ ಬರುವದಿಲ್ಲ.

ತಪ್ಪು ಸಲಹೆಗಳಿಗೆ ಕಿವಿ ಕೊಡುವದನ್ನು ಬಿಟ್ಟುಬಿಡು, ಉದ್ದೇಶಪೂರ್ವಕವಾಗಿ ದೈವತ್ವದ ಕಡೆಗೆ ತಿರುಗಿಕೋ. ಜೊತೆಗೆ ಆ ಪರಮ ಮಾರ್ಗದರ್ಶನದಲ್ಲಿ ನಿಮ್ಮ ಶ್ರದ್ಧೆಯನ್ನು ಪುಟಗೊಳಿಸಿಕೊಳ್ಳಿ.

*

ಕೆಲವು ಜನರ ಪ್ರಾಣವು ಯಾವಾಗಲೂ ಗೊಂದಲದಲ್ಲಿ ಮತ್ತು ಅಸಾಮರಸ್ಯದಿಂದ ಹಾಗು ಕ್ಷುಲ್ಲಕ ಜಗಳ ಮತ್ತು ಗೊಂದಲಗಳನ್ನೇ ಬಯಸುತ್ತ ಇರುತ್ತದೆ. ಸಾಮಾನ್ಯವಾಗಿ ಅವರಿಗೆ ಒಂದು ರೀತಿಯ ಪರಿಪೂರ್ಣತೆಯ ಹುಚ್ಚು ಇರುತ್ತದೆ. ಜೊತೆಗೆ ಎಲ್ಲರೂ ತಮ್ಮ ವಿರುದ್ಧವಾಗಿದ್ದಾರೆ ಎಂದು ನಂಬಿರುತ್ತಾರೆ. ಇದನ್ನು ಸರಿಪಡಿಸುವದು ಬಲುಕಷ್ಟ. ಗುಣಪಡಿಸಬೇಕಾದರೆ, ಪ್ರಕೃತಿಯ ಕ್ರಾಂತಿಕಾರಕ ರೂಪಾಂತರಣವಾಗಬೇಕಾಗುತ್ತದೆ.

*

ಬೇರೆಯವರ ಜೊತೆಗೆ ವ್ಯವಹಾರ ಮಾಡುವಾಗ ಅವರ ಪ್ರತಿಕ್ರಿಯೆಗಳಿಗೆ ತಲೆಕೆಡಿಸಿಕೊಳ್ಳದೇ ಇರಬೇಕು. ಆದರೆ ನಾವು ಮಾಡಬೇಕಾದುದನ್ನು ಸರಳವಾಗಿ ಮತ್ತು ಪ್ರಾಮಾಣಿಕವಾಗಿ ಮಾಡುತ್ತ ಸಾಗುವದೇ ಶ್ರೇಷ್ಠವಾಗಿದೆ.

*

ಜನರ ಪ್ರತಿಕ್ರಿಯೆಗಳು ಅವು ಎಷ್ಟೇ ಅಸಂತೋಷದಿಂದ ಕೂಡಿದ್ದರದೂ ಅದಕ್ಕೆ ಚಿಂತಿಸಲೇಬಾರದು. ಪ್ರಾಣವು ಎಲ್ಲ ಕಡೆಗೆ ಎಲ್ಲರಲ್ಲಿ ಅಪರಿಶುದ್ಧತೆಯಿಂದಲೇ ಇರುತ್ತದೆ, ಜೊತೆಗೆ ಭೌತಿಕವೂ ಅಪ್ರಜ್ಞಾಪೂರ್ವಕತೆಯಿಂದಲೇ ತುಂಬಿದೆ. ಇವೆರಡೂ ಅಪರಿಪೂರ್ಣತೆಗಳನ್ನು ಗುಣಪಡಿಸಬೇಕಾಗಿದೆ. ಇದಕ್ಕೆ ಎಷ್ಟೇ ಸಮಯ ಬೇಕಾದರೂ ತೆಗೆದುಕೊಳ್ಳಿ, ತಾಳ್ಮೆಯಿಂದ, ಧೈರ್ಯದಿಂದ ಇವುಗಳನ್ನು ಸರಿಪಡಿಸಿಕೊಳ್ಳಬೇಕಾಗಿದೆ.

*

ನಿಮ್ಮ ಪ್ರಕೃತಿಯು 'ಅ'ನ ಪ್ರಕೃತಿಗಿಂತಲೂ ಕೀಳಾಗಿದೆ ಎಂದು ನಿನಗೆ ಯಾರು ಹೇಳಿದ್ದಾರೆ? ಪ್ರತಿಯೊಬ್ಬರಿಗೂ ಅವನದೇ ಆದ ಪ್ರಕೃತಿ ಇರುತ್ತದೆ. ಹೀಗಾಗಿ ಅವನು ಅವನದೇ ಮಾರ್ಗದಲ್ಲಿ ಚಲಿಸುತ್ತಾನೆ. ಹೀಗಾಗಿ ಬೇರೆಯವರೊಂದಿಗೆ ಹೋಲಿಕೆ ಮಾಡುವದು ನಿರರ್ಥಕವಾಗಿದೆ. ಬಹುತೇಕವಾಗಿ ಅಪಾಯಕಾರಿಯಾಗಿರುತ್ತದೆ.

*

ಅಂಜುಬುರುಕುತನವು ಒಂದು ರೀತಿಯ ಜಂಬವಾಗಿದೆ. ಯಾವಾಗ ನೀನು ಅಂಜುಬುಕನಾಗುವೆಯೋ ಆಗ ನಿನ್ನ ಕಾರ್ಯದ ಪ್ರಾಮಾಣಿಕತೆಗಿಂತ ಬೇರೆಯವರ ಅಭಿಪ್ರಾಯಗಳಿಗೆ ನೀನು ಹೆಚ್ಚು ಮಹತ್ವ ಕೊಡುತ್ತಿರುವೆ ಎಂದರ್ಥವಾಗಿರುತ್ತದೆ.

ಜನರ ಅಭಿಪ್ರಾಯಗಳಿಗೆ ಮಹತ್ವ ಕೊಡುವ ಯಾವ ಅವಶ್ಯಕತೆಯೂ ಇರುವದಿಲ್ಲ. ಏಕೆಂದರೆ ಅವು ತಾತ್ಕಾಲಿಕ ಪ್ರಭಾವಗಳಿಂದ ಉತ್ಪತ್ತಿಯಾಗಿರುವ ತಾತ್ಕಾಲಿಕ ಪರಿಣಾಮಗಳಾಗಿರುತ್ತವೆ; ಬೇರೆ ಸಮಯದಲ್ಲಿ ಮತ್ತು ಹೊಸ ಪ್ರಭಾವಗಳಲ್ಲಿ ಅವರ ಅಭಿಪ್ರಾಯಗಳು ಬದಲಾಗುತ್ತಲೇ ಇರುತ್ತವೆ.

ಯಾರಲ್ಲಿ ತಪ್ಪುಗಳು ಇರುವದಿಲ್ಲವೋ ಅವರು ಬೇರೆಯವರ ಅಭಿಪ್ರಾಯಗಳಿಗೆ ಕಾಳಜಿ ಮಾಡುವದಿಲ್ಲ. ಬೇರೆಯವರ ಬೆದರಿಕೆಗಳಿಗೇಕೆ ಕಿವಿ ಕೊಡಬೇಕು? ಅಂತರಂಗದ ಆದೇಶದ ಪ್ರಕಾರ ಕಾರ್ಯ ಮಾಡಬೇಕೇ ವಿನಾ ಜನ ಸಾಮಾನ್ಯರ ಅಭಿಪ್ರಾಯದ ಪ್ರಕಾರವಾಗಿ ಅಲ್ಲವೇ ಅಲ್ಲ.

*

ಯಾವಾಗ ನೀನು ಒಂದು ನಿಸ್ವಾರ್ಥತೆಯಿಂದ ಕೂಡಿರುವ ಗುರಿಯನ್ನು ಈಡೇರಿಸಲು ನಿನ್ನನ್ನೇ ನೀನು ಕೊಟ್ಟುಕೊಂಡಾಗ, ಸಾಮಾನ್ಯ ಜನರು ನಿನ್ನನ್ನು ಹೊಗಳಿ ಪ್ರೋತ್ಸಾಹಿಸುತ್ತಾರೆ ಎಂದು ನಿರೀಕ್ಷಿಸಬೇಡ. ಬದಲಾಗಿ, ನಿನ್ನ ಗುರಿಯ ತದ್ವಿರುದ್ಧವಾಗಿ ಹೋರಾಟ ಮಾಡುತ್ತಾರೆ, ದ್ವೇಷಿಸುತ್ತಾರೆ ಮತ್ತು ಶಾಪವನ್ನೂ ಹಾಕುತ್ತಿರುತ್ತಾರೆ.

*

**ಆದರೆ ದೈವವು ನಿಮ್ಮ ಜೊತೆಗಿದ್ದೇ ಇರುವನು**

ದೈವದೆಡೆಗೆ ಸದಾ ನಮ್ಯತೆಯಿಂದ ಇರುವದು ಎಂದರೆ ಪೂರ್ವಗ್ರಹಿತ ವಿಚಾರಗಳು ಮತ್ತು ಸ್ಥಿರವಾದ ತತ್ತ್ವಗಳ ಕಟು ವಿರೋಧ ಮಾಡುವದಲ್ಲ; ಇದಕ್ಕೆ ಹೆಚ್ಚಿನ ಸಾಮರ್ಥ್ಯದ ಅವಶ್ಯಕತೆಯೂ ಇರುತ್ತದೆ. ನೀವು ದೈವೀ ಸಂಕಲ್ಪದ ಜೊತೆಗೆ ಸಂಪರ್ಕವಿರದ ಜನರ ಜೊತೆಗೆ ಹೆಚ್ಚು ಹೆಚ್ಚು ಸಂಘರ್ಷಕ್ಕೆ ಇಳಿಯಬೇಕಾಗುತ್ತದೆ.

*

ದೈವತ್ವಕ್ಕೆ ಸಂಪೂರ್ಣವಾಗಿ ನಿಮ್ಮ ಸಂಕಲ್ಪವನ್ನು ಸಮರ್ಪಿಸಿ. ಅದು ಯಾವುದೇ ಮಾನವ ಸಂಕಲ್ಪದ ಒತ್ತಾಯಪೂರ್ವಕವಾದ ಹೇರಿಕೆಯಿಂದ ಮುಕ್ತವಾದಂತೆ ವಾತಾವರಣ ಒದಗಿಸುತ್ತದೆ.

*

ಇಡೀ ಜಗತ್ತಿನಲ್ಲಿ ಎಲ್ಲಾ ಪರಿಶುದ್ಧತೆಯಿಂದ ದೈವತ್ವಕ್ಕೆ, ತನ್ನನ್ನು ತಾನು ಪೂರ್ಣವಾಗಿ ಕೊಟ್ಟುಕೊಳ್ಳುವ ಏಕೈಕ ವ್ಯಕ್ತಿ ನೀವಾಗಿದ್ದರೂ – ಮತ್ತು ಏಕಾಂಗಿಯಾಗಿದ್ದರೂ ಸಹಿತ, ಪೃಥ್ವಿಯ ಮೇಲಿರುವ ಎಲ್ಲರಿಂದಲೂ ಸಹಜವಾಗಿ ಅಪಾರ್ಥಕ್ಕೆ ಒಳಗಾಗಿದ್ದರೂ, ಇಂತಹ ಸ್ಥಿತಿಯಲ್ಲಿಯೂ ನೀನು ನಿನ್ನ ಕರ್ತವ್ಯವನ್ನು ಮಾಡದಿರಬೇಕೆಂದಿಲ್ಲ.

*

*‘ಅ’ ಎನ್ನುವ ವ್ಯಕ್ತಿಯು ನನ್ನ ವಿರುದ್ಧ ನಿಮಗೆ ದೂರಿದ್ದಾನೆ ಎನ್ನುವದನ್ನು ಕೇಳಿ ನನಗೆ ಆಘಾತವಾಗಿದೆ. ನಾನು ಆಕೆಯ ಬಗೆಗೆ ವಿಶೇಷವಾಗಿ ಕರುಣೆಯಿಂದಲೇ ಇದ್ದೇನೆ.*

ಇದೇ ರೀತಿಯ ಪ್ರತಿಕ್ರಿಯೆಯನ್ನು ಪರಮಾತ್ಮನು ಜಗತ್ತಿನಿಂದ ಸ್ವೀಕರಿಸುತ್ತಲೇ ಇದ್ದಾನೆ. ಶ್ರೀ ಅರವಿಂದರೂ ಸಹಿತ ಇದರಿಂದ ಹೊರಗೆ ಉಳಿದಿಲ್ಲ. ನೀವು ಉತ್ತಮರ ಜೊತೆಗೆ ಇದ್ದೀರಿ ಮತ್ತು ಹತಾಶೆಗೊಳ್ಳುವ ಯಾವ ಕಾರಣವೂ ಇಲ್ಲ!

*

ದೈವೀ ಸಂಕಲ್ಪದ ಹಾಗೆ ನಡೆದುಕೊಳ್ಳಿರಿ. ಆದರೆ ನಿಮ್ಮ ಸಂಕಲ್ಪದಂತಲ್ಲ.

ಬೇರೆ ಜನರ ಸಂಕಲ್ಪವನ್ನೂ ಈಡೇರಿಸಬೇಕೆಂದು ಅರ್ಥವಲ್ಲ, ಅದಕ್ಕೆ ಪಕ್ಕಾದರೆ ನೀವು ದುಃಖವನ್ನು ಅನುಭವಿಸಬೇಕಾಗಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/279–282**

## ದೈವವು ಸದಾ ನಿಮ್ಮ ಜೊತೆಗಿದೆ

ನೀವು ಏಕಾಂಗಿಯಲ್ಲ ಎನ್ನುವದನ್ನು ಎಂದಿಗೂ ಮರೆಯಬೇಡಿ. ದೈವವು ಸದಾ ಸಹಾಯ ಮಾಡುತ್ತ ಮತ್ತು ಮಾರ್ಗದರ್ಶನ ಮಾಡುತ್ತಲೇ ನಿಮ್ಮ ಜೊತೆಗೇ ಇರುತ್ತದೆ. ನಿಮ್ಮ ಸಂಗಾತಿಯಾಗಿಯೇ ಇರುತ್ತದೆ. ಸಾಂತ್ವನ ಮತ್ತು ಸಾಮರ್ಥ್ಯವನ್ನು ಕೊಡುವ ಗೆಳೆಯ ರೀತಿಯಲ್ಲಿ ಈ ದೈವತ್ವವು ನಮ್ಮನನ್ನು ಪ್ರೀತಿಸುತ್ತಾ ಇರುತ್ತದೆ. ನೀವು ಎಷ್ಟು ಏಕಾಂಗಿಯಾಗುತ್ತೀರೋ, ಅಷ್ಟು ಆ ಪ್ರಕಾಶಮಾನವಾದ ದೈವತ್ವದ ಸಂಪರ್ಕವನ್ನು ಪಡೆದುಕೊಳ್ಳಲು ತಯಾರಾಗಿದ್ದೀರಿ ಎಂದರ್ಥ. ಅದಕ್ಕಾಗಿ ಸದಾ

ಶ್ರದ್ಧೆಯಿಂದ ಕಾರ್ಯನಿರತರಾಗಿರಿ. ನಮಗೆ ಅವಶ್ಯವಾದ ಎಲ್ಲವನ್ನೂ ನಾವು ಯಾವಾಗಲೂ ದೈವದಲ್ಲೇ ಕಾಣುತ್ತೇವೆ.

*

ಕೇವಲ ದೈವವು ಮಾತ್ರ ನಮಗೆ ಪರಿಪೂರ್ಣವಾದ ಸುಕರಕ್ಷತೆಯನ್ನು ಕೊಡುವದು.

*

ನಿಮ್ಮ ಜೀವನವನ್ನು ನಡೆಸುವ ಮುಖ್ಯ ಶಕ್ತಿಯು ದೈವೀ ಪ್ರಜ್ಞೆಯೇ ಆಗಿರಲಿ.

*

ಯಾವಾಗಲೂ ನಿಮ್ಮ ಜೊತೆಗೆ ದೈವೀ ಸಾನಿಧ್ಯವು ಇರಲಿ.

*

ನೀವು ಏನೇ ಮಾಡಿದರೂ, ಯಾವಾಗಲೂ ದೈವವನ್ನು ಸ್ಮರಿಸುತ್ತಲೇ ಇರಬೇಕು.

*

ಪ್ರಥ್ವಿಯ ಮೇಲೆ ಯಾವಾಗ ಯಾವಾಗ ಎಲ್ಲಿ ಸಾಧ್ಯವಾಗುತ್ತದೆಯೋ ಅಲ್ಲಿ ದೈವವು ಪ್ರಕಟಗೊಳ್ಳುತ್ತದೆ.

ಪ್ರತಿಯೊಬ್ಬರ ಹೃದಯದಲ್ಲಿ ಇರುವ ದೈವತ್ವದ ಸಾನಿಧ್ಯವೇ ಭವಿಷ್ಯದ ಭರವಸೆಯ ಮತ್ತು ಪರಿಪೂರ್ಣತೆಯ ಸಾಧ್ಯತೆಯಾಗಿದೆ.

*

ಕೇವಲ ದೈವತ್ವದಲ್ಲಿ ಮಾತ್ರ ಪರಿಪೂರ್ಣ ಶಾಂತಿ ಮತ್ತು ಸಂತೃಪ್ತಿಯನ್ನು ಪಡೆಯಲು ಸಾಧ್ಯ.

*

ಪ್ರಕಟಗೊಳ್ಳುತ್ತಿರುವ ವಸ್ತುಗಳ ಹಿಂದೆ ಪರಿಪೂರ್ಣ ಪ್ರಜ್ಞೆಯ ಸಾಗರವಿದೆ. ಅದರಲ್ಲಿ ಯಾವುದೇ ಘಳಿಗೆಯಲ್ಲಾದರೂ ಮೀಯಬಹುದು.

*

**ದಿವ್ಯವು ನಿನ್ನೊಂದಿಗೆ ಇರುವುದು**

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

ಏನೇ ಆದರೂ ಕಡಿಮೆ ಆಗದ ಅಥವಾ ಕಳೆಗುಂದದ ಅಥವಾ ಕಲುಷಿತವಾಗದ ಚೇತನವೊಂದಿದೆ; ದಿವ್ಯ ಚೇತನವೆಂದು ನಾವು ಕರೆಯುವುದು ಅದನ್ನೇ.

*

ದಿವ್ಯ ಚೇತನವು ಮಾತ್ರವೇ ನಮ್ಮ ಮಾರ್ಗದರ್ಶಕನಾಗಿರಬೇಕು.

*

ನೈಜ ನೆರವು, ನೈಜ ಸಂತಸ, ದಿವ್ಯ ಚೇತನ ಮಾತ್ರವಾಗಿದೆ.

*

ಭಗವಂತನು ನುಡಿದಿದ್ದಾನೆ, "ಕಾಲವು ಆಗಮಿಸಿದೆ" ಮತ್ತು ಎಲ್ಲಾ ಅಡೆತಡೆಗಳನ್ನು ಜಯಿಸಲಾಗುವುದು.

*

ದಿವ್ಯವು ಸಮಸ್ತ ಜೀವನದ ರಕ್ಷಕನಾಗಿರುವದು, ಎಲ್ಲಾ ಕ್ರಿಯೆಯ ಕಾರಣವಾಗಿರುವದು, ನಮ್ಮ ಚಿಂತನೆಗಳ ಗುರಿಯಾಗಿರುವದು.

*

ಸಮಗ್ರ, ಅಪರಿವರ್ತನೀಯ ಏಕ ರೂಪದ ಸತ್ಯವಾಗಿರುವದು ದಿವ್ಯ ಸನ್ನಿಧಿ.

*

ದಿವ್ಯದಲ್ಲಿ, ದಿವ್ಯದ ಮೂಲಕ ಸಮಗ್ರವೂ ಉತ್ತಮ ರೂಪವನ್ನು ಪಡೆಯುವದು ಮತ್ತು ತೇಜೋಮಯವಾಗುವದು; ಎಲ್ಲಾ ನಿಗೂಢ ತತ್ತ್ವಗಳು ಮತ್ತು ಶಕ್ತಿಗಳ ಅತಿ ಮುಖ್ಯ ಅಂಶವು ದಿವ್ಯದಲ್ಲಿ ದೊರಕುವದು.

*

ದಿವ್ಯದ ಪರಮೋತ್ತಮ ಧ್ಯಾನದ ಬದಲಾವಣೆರಹಿತ ಶಾಂತಿ ಮತ್ತು ದಿವ್ಯದ ಅಪರಿವರ್ತನೀಯ ನಿರಂತರ, ಸಮಾಧಾನಕರ ದರ್ಶನವೂ ಎಲ್ಲರಲ್ಲೂ ಕಾಣದಾಗಿದೆ.

ದಿವ್ಯತೆಯ ಬೆಳಕಿನಲ್ಲಿ ನಾವು ನೋಡೋಣ, ದಿವ್ಯ ಜ್ಞಾನದಲ್ಲಿ ನಾವು ಅರಿಯೋಣ, ದಿವ್ಯ ಸಂಕಲ್ಪದಲ್ಲಿ ನಾವು ಯೋಜನೆಯನ್ನು ಪೂರ್ಣಗೊಳಿಸೋಣ.

*

ದಿವ್ಯತೆಯ ಹೊರಗೆ ಎಲ್ಲವೂ ಸುಳ್ಳು ಮತ್ತು ಭ್ರಮೆ, ಎಲ್ಲವೂ ದುಃಖಕರವಾದ ಅಸ್ಪಷ್ಟತೆ. ಜೀವನ, ಪ್ರಕಾಶ ಮತ್ತು ಸಂತೋಷಗಳು ದಿವ್ಯತೆಯಲ್ಲಿ ಇವೆ. ಪರಮ ಶಾಂತಿಯು ದಿವ್ಯದಲ್ಲಿ ಇದೆ.

*

ದಿವ್ಯತೆಯೊಂದಿಗಿದೆ ನಮ್ಮ ಎಲ್ಲಾ ಬಲಿಷ್ಠತೆ. ಆತನೊಂದಿಗಿದ್ದರೆ ನಾವು ಎಲ್ಲಾ ಅಡ್ಡಿಗಳನ್ನು ದಾಟಬಹುದು.

*

ರಾತ್ರಿಯ ಮೌನದಲ್ಲಿ ದಿವ್ಯತೆಯ ಧ್ವನಿಯು ಸಮಧುರ ಪಠಣದಂತೆ ಕೇಳಿಸುವದು.

*

ದಿವ್ಯತೆಯ ವಿಜಯೋತ್ಸಾವವು ಎಷ್ಟು ಪರಿಪೂರ್ಣವಾಗಿದೆಯೆಂದರೆ ಆತನ ವಿರುದ್ಧವಾಗಿ ಮೇಲೇಳುವ ಪ್ರತಿಯೊಂದು ಅಡತಡೆ, ಪ್ರತಿಯೊಂದು ದುಷ್ಟ ಸಂಕಲ್ಪ, ಪ್ರತಿಯೊಂದು ದ್ವೇಷವು ಇನ್ನೂ ಹೆಚ್ಚು ವಿಸ್ತಾರವಾದ ಮತ್ತು ಇನ್ನೂ ಹೆಚ್ಚು ಪೂರ್ಣವಾದ ವಿಜಯದ ಭರವಸೆಯಾಗಿದೆ.

*

ಆತನ ಬೆಳಕಿನ ಸಮೃದ್ಧತೆಗಾಗಿ ಆತನನ್ನು ವ್ಯಕ್ತಪಡಿಸುವ ಶಕ್ತಿಯನ್ನು ನೀಡಲು ಆಗಮಿಸೆಂದು ನಾವು ಆತನಲ್ಲಿ ಬೇಡುವೆವು.

*

ದಿವ್ಯತೆಯ ಪದಗಳು ಸಮಾಧಾನಪಡಿಸಿ ಆಶೀರ್ವದಿಸುವವು. ನೆಮ್ಮದಿಯನ್ನು ನೀಡಿ ಪ್ರಕಾಶಮಾನಗೊಳಿಸುವವು ಮತ್ತು ಅಪರಿಮಿತ ಜ್ಞಾನವನ್ನು ಅಡಗಿಸಿಟ್ಟುಕೊಂಡಿರುವ ಅವಕುಂಠನದ ಪದರವನ್ನು ದಿವ್ಯತೆಯ ಯಥೇಚ್ಛವಾಗಿ ನೀಡುವ ಕೈ ಮೇಲೇರಿಸುವದು.

*

ದಿವ್ಯ ಧ್ಯಾನದ ವೈವಿಧ್ಯತೆಯು ಎಷ್ಟು ಶಾಂತ, ಶ್ರೇಷ್ಠ ಮತ್ತು ಪರಿಶುದ್ಧವಾಗಿದೆ.

*

ಒಂದು ನವ ನವೀನ ಜೀವನವನ್ನು ದಿವ್ಯದೊಂದಿಗೆ ಜೀವಿಸುವದು, ಸಂಪೂರ್ಣವಾಗಿ ದಿವ್ಯದಿಂದಲೇ ನಿರ್ಮಿತವಾದ ಜೀವನ, ಅದಕ್ಕೆ ಅದೀಶ್ವರನಾದ ಪ್ರಭುವಾಗಿರಬೇಕು ದಿವ್ಯತೆ. – ಮತ್ತು ಅದರಿಂದ ಎಲ್ಲಾ ಸಮಸ್ಯೆಗಳು ಪ್ರಶಾಂತತೆಯಾಗಿ ಮತ್ತು ಎಲ್ಲಾ ದುಗುಡವು ಶಾಂತಿಯಾಗಿ ಪರಿವರ್ತನೆಯಾಗುವದು.

*

ದಿವ್ಯವು ನಮ್ಮಲ್ಲಿ ಎಷ್ಟು ಜೀವಂತವಾಗಿದೆಯೆಂದರೆ, ನಾವು ನಿರಾಕುಲತೆಯೊಂದಿಗೆ ಘಟನೆಗಳನ್ನು ಎದುರು ನೋಡುವೆವು, ಆತನ ಹಾದಿಯು ಎಲ್ಲೆಡೆಯಿದೆಯೆಂಬ ಅರಿವಿನೊಂದಿಗೆ ಏಕೆಂದರೆ ನಾವು ಅದನ್ನು ನಮ್ಮ ಸತ್ತೆಯಲ್ಲಿ ಹೊತ್ತುಕೊಂಡಿರುವೆವು.

*

ನಿರಂತರತೆಯ ವಿಜಯಗಳಾಗಿ ಸೋಲುಗಳನ್ನು ದಿವ್ಯದ ಮಹಿಮೆಯು ಪರಿವರ್ತಿಸುವದು; ಆತನ ತೇಜೋಮಯ ಪ್ರಕಾಶದ ಮುಂದೆ ನೆರಳುಗಳು ಓಡಿಹೋಗಿವೆ.

*

ಬಲಿಷ್ಠತೆಯಲ್ಲಿ ಶಾಂತತೆಯನ್ನು, ನಿರಾಕುಲತೆಯಲ್ಲಿ ಕ್ರಿಯೆಯನ್ನು ಮತ್ತು ಎಲ್ಲಾ ಪರಿಸ್ಥಿತಿಗಳ ಮಧ್ಯದಲ್ಲಿ ಒಂದು ಬದಲಾಗದ ಸಂತಸವನ್ನು ನೀಡುವುದು ದಿವ್ಯದ ಸನ್ನಿಧಿ.

*

ಕಲುಷಿತವಾಗದ ಸಂತಸ, ಆನಂದದಾಯಕ ಐಶ್ವರ್ಯವಾಗಿದೆ ದಿವ್ಯತೆ; ಆದರೆ ಸಮಗ್ರವಾಗಿರುವಾಗ ಮಾತ್ರ ಈ ಐಶ್ವರ್ಯವು ಪರಿಪೂರ್ಣವಾಗಿರುವದು.

*

ಒಂದು ಶಕ್ತಿ, ಒಂದು ಆಧಾರ ಮತ್ತು ಮಾರ್ಗದರ್ಶಕನಾಗಿರುವ ದಿವ್ಯವು ಎಂದೂ ಆಶಾಭಂಗವನ್ನು ಉಂಟುಮಾಡದ ಓರ್ವ ಗೆಳೆಯನೂ ಆಗಿರುವದು. ಕತ್ತಲೆಯನ್ನು ದೂರ ತಳ್ಳುವ ಬೆಳಕಾಗಿರುವ ದಿವ್ಯವು, ವಿಜಯವನ್ನು ಖಾತ್ರಿಪಡಿಸುವ ಆಕ್ರಮಣಕಾರನೂ ಆಗಿರುವದು.

*

ಎಂದೂ ಅಯಶಸ್ವಿಯಾಗದಿರುವ ಆಧಾರವಾಗಿದೆ ದಿವ್ಯತೆ.

*

ದಿವ್ಯದ ಪ್ರತಿಕ್ರಿಯೆಯು ಮಾತ್ರ ಎಂದೂ ನಿಷ್ಫಲವಾಗುವುದಿಲ್ಲ.

*

ದಿವ್ಯದ ಪ್ರೇಮವು ಮಾತ್ರ ಎಂದೂ ನಿಷ್ಕ್ರಿಯವಾಗುವುದಿಲ್ಲ.

*

ದಿವ್ಯವನ್ನು ಮಾತ್ರ ಪ್ರೀತಿಸು ಮತ್ತು ದಿವ್ಯವು ಸದಾ ನಿನ್ನೊಡನೆ ಇರುವದು.

*

ಪರಮೋತ್ತಮ ಪ್ರಭುವಿನ ಅಭಿಪ್ರಾಯಕ್ಕೆ ಮಾತ್ರ ಪ್ರಾಮುಖ್ಯತೆ.

*

ಪರಮೋನ್ನತ ಭಗವಂತನು ಮಾತ್ರ ನಮ್ಮ ಸಮಸ್ತ ಪ್ರೀತಿಗೆ ಅರ್ಹನು ಮತ್ತು ಆತನು ಅದರ ನೂರು ಪಟ್ಟು ನಮಗೆ ಹಿಂದಿರುಗಿಸುವನು.

*

ದಿವ್ಯದಲ್ಲಿ ಮಾತ್ರ ನಿನ್ನ ಜೀವವು ದೃಢ ನಂಬಿಕೆಯನ್ನು ಹೊಂದಿರಲಿ.

*

ದಿವ್ಯದ ಬಗ್ಗೆ ಮಾತ್ರ ಯೋಚಿಸು ಮತ್ತು ದಿವ್ಯವು ನಿನ್ನೊಂದಿಗೆ ಇರುವದು.

*

ಒಂದೇ ಒಂದು ವೃತ್ತಿ, ಒಂದು ಗುರಿ, ಒಂದು ಆನಂದ – ಅದೇ ದಿವ್ಯ.

*

ನಾಶ ಮತ್ತು ಮರಣವಾಗಿದೆ ತನ್ನ ಮೇಲಿನ ಕೇಂದ್ರೀಕರಣ. ಜೀವನ, ವೃದ್ಧಿ ಮತ್ತು ಅರಿವನ್ನು ದಿವ್ಯದ ಮೇಲಿನ ಕೇಂದ್ರೀಕರಣ ಮಾತ್ರ ತರುವದು.

*

ದಿವ್ಯವಿಲ್ಲದಿದ್ದರೆ ಜೀವನವು ಒಂದು ನೋವಿನೊಂದೊಡಗೂಡಿದ ಭ್ರಮೆ. ದಿವ್ಯದೊಂದಿಗೆ ಎಲ್ಲವೂ ಆನಂದದಾಯಕ.

*

ದಿವ್ಯಕ್ಕೆ ಮಾತ್ರ ಸೇರಿದವನಾಗಿರುವದು, ದಿವ್ಯಕ್ಕಾಗಿ ಮಾತ್ರ ಕೆಲಸ ಮಾಡುವದು ಮತ್ತು ಎಲ್ಲಕ್ಕಿಂತಲೂ ಹೆಚ್ಚಾಗಿ ದಿವ್ಯದಿಂದ ಮಾತ್ರ ಬಲಿಷ್ಠತೆ, ಶಾಂತಿ ಮತ್ತು ತೃಪ್ತಿಯನ್ನು ನಿರೀಕ್ಷಿಸುವದು ಅತ್ಯುತ್ತಮ ಮನೋಭಾವನೆಯಾಗಿದೆ. ದಿವ್ಯವು ಅತ್ಯಧಿಕ ಕರುಣಾಮಯಿಯಾಗಿದ್ದು ನಾವು ಗುರಿಯ ಕಡೆ ಶೀಘ್ರ ಗತಿಯಲ್ಲಿ ಮುನ್ನಡೆಯಲು ಅವಶ್ಯಕವಾದುದೆಲ್ಲವನ್ನೂ ನೀಡುವದು.

*

ಜೀವನಕ್ಕೆ ಮೌಲ್ಯವನ್ನು ಕೊಡುವದು ದಿವ್ಯತೆಯ ಸಾನ್ನಿಧ್ಯ. ಎಲ್ಲಾ ಶಾಂತಿ, ಎಲ್ಲಾ ಸಂತೋಷ, ಎಲ್ಲಾ ಸುಭದ್ರತೆಗಳ ಮೂಲವೂ ಈ ಸನ್ನಿಧಿಯೇ ಆಗಿದೆ. ಈ ಸನ್ನಿಧಿಯನ್ನು ಕಾಣಬಹುದಾದ ಜಾಗಗಳು: ನಿನ್ನಲ್ಲಿ ಮತ್ತು ನಿನ್ನ ಎಲ್ಲಾ ಕಷ್ಟಗಳು ಕಾಣದಾಗುವವು.

*

ಹಗಲು ಮತ್ತು ರಾತ್ರಿ ನಿರಂತರವಾಗಿ ಸನ್ನಿಧಿಯು ಇದೆ.

*

ಮೌನವಾಗಿ ಅಂತರಂಗದ ಕಡೆ ತಿರುಗಿದರೆ ಸಾಕು, ನಾವು ಅದನ್ನು ಗುರುತಿಸುವೆವು.

*

ದಿವ್ಯವನ್ನು ಯಾವಾಗಲೂ ನೆನೆಯುತ್ತಿರು ಮತ್ತು ದಿವ್ಯದ ಸನ್ನಿಧಿಯ ಅಭಿವ್ಯಕ್ತಿತೆಯಾಗಿರುವದು ನೀನು ಮಾಡುವ ಎಲ್ಲಾ ಕಾರ್ಯಗಳು.

*

ಕ್ರಿಯಾಶೀಲನಾಗಿರುವಾಗ ಮತ್ತು ಮೌನದಲ್ಲಿ, ತೆಗೆದುಕೊಳ್ಳುವಾಗ ಮತ್ತು ನೀಡುವಾಗ, ಯಾವಾಗಲೂ ನಿನ್ನ ಸಂತಸಭರಿತವಾದ ನೆನಪು ಇರಲಿ.

ಸಮುದ್ರದ ಕಡೆಗೆ ನದಿಯು ಪ್ರವಹಿಸುವ ರೀತಿಯಲ್ಲಿ ನಮ್ಮ ಎಲ್ಲಾ ಚಿಂತನೆಗಳು, ನಮ್ಮ ಎಲ್ಲಾ ಭಾವನೆಗಳು ದಿವ್ಯದ ಕಡೆಗೆ ಚಲಿಸುವವು.

*

ಎಲ್ಲಾ ಚಿಂತನೆಗಳು, ಎಲ್ಲಾ ಮನೋಭಾವಗಳೂ, ಎಲ್ಲಾ ಕ್ರಿಯೆಗಳು, ಎಲ್ಲಾ ಆಶಾಭಾವನೆಗಳು ದಿವ್ಯದ ಕಡೆ ತಿರುಗಿ ಆತನ ಮೇಲೆ ಕೇಂದ್ರೀಕೃತವಾಗಲಿ. ಆತನು ಮಾತ್ರವೇ ನಮ್ಮ ನೆರವು ಮತ್ತು ರಕ್ಷಕ.

*

ಹೌದು, ನನ್ನ ಮಗು, ದಿವ್ಯವು ಮಾತ್ರವೇ ನಮ್ಮ ಏಕೈಕ ಆಸರೆ ಎಂಬುದು ನಿಜಕ್ಕೂ ಸತ್ಯವಾದ ಮಾತು – ಆತನೊಂದಿಗೆ ಮಾತ್ರ ಸಮಗ್ರ ರಕ್ಷಣೆಯು ಇರುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/10–16**

*ನಮ್ಮ ಪ್ರೇರಣೆಗಳು ಮತ್ತು ಅಪೇಕ್ಷೆಗಳು, ನಮ್ಮ ಒಡಲ ನೋವು ಮತ್ತು ಹಿಂಸೆ, ನಮ್ಮ ವ್ಯಥೆ ಮತ್ತು ತೊಳಲಾಟಗಳಿಗೆ ನೀಡಬಹುದಾದ ಮೌಲ್ಯವಾದರೂ ಏನು? ನಮ್ಮ ನಿಯಂತ್ರಣದಲ್ಲಿಡಲಾಗದ ಕಲ್ಪನೆಗಳ ಮೂಲಕ ಅನಾವಶ್ಯಕವಾಗಿ ನಾಟಕೀಯವಾಗುವ ಈ ಎಲ್ಲಾ ಆಂತರಿಕ ಬದಲಾವಣೆಗಳು – ಈ ಶ್ರೇಷ್ಠ, ಈ ಸೂಕ್ಷ್ಮ ಮತ್ತು ದಿವ್ಯ ಪ್ರೇಮವು ನಮ್ಮ*

*ಸತ್ತೆಯ ಅತ್ಯಂತ ಆಂತರಿಕವಾದ ಆಳಗಳಿಂದ ನಮ್ಮ ಮೇಲೆ ಬಾಗಿದೆ. ನಮ್ಮ ದೌರ್ಬಲ್ಯಗಳನ್ನು ಸಹಿಸಿಕೊಳ್ಳುತ್ತಿದೆ. ನಮ್ಮ ದೋಷಗಳನ್ನು ಸರಿಪಡಿಸುತ್ತಿದೆ, ನಮ್ಮ ಗಾಯಗಳನ್ನು ಗುಣಪಡಿಸುತ್ತಿದೆ. ನಮ್ಮ ಇಡೀ ಸತ್ತೆಯನ್ನು ತನ್ನ ಪುನಶ್ಚೇತನಗೊಳಿಸುವ ಪ್ರವಾಹಗಳಲ್ಲಿ ಮುಳುಗಿಸುತ್ತಿದೆ. ಇವುಗಳ ಮುಂದೆ ಆ ಆಂತರಿಕ ಬದಲಾವಣೆಗಳ ಸ್ಥಾನವಾದರೂ ಏನು?*

ಆಂತರಿಕ ಪರಮೋತ್ತಮ ದೈವವು ಎಂದೂ ಒತ್ತಾಯಿಸುವದಿಲ್ಲ, ತಗಾದೆ ಮಾಡುವದಿಲ್ಲ ಅಥವಾ ಬೆದರಿಸುವದಿಲ್ಲ. ಸ್ವತಃ ತನ್ನನ್ನೇ ಆಕೆಯು ನೀಡುವಳು, ಎಲ್ಲಾ ಸತ್ತೆಗಳ ಹೃದಯ ಮತ್ತು ವಸ್ತುಗಳಲ್ಲಿ ಅಡಗಿ ತನ್ನನ್ನೇ ಮರೆತುಬಿಡುವಳು. ಆಕೆಯು ಎಂದೂ ದೂಷಿಸುವದಿಲ್ಲ ಅಥವಾ ಖಂಡಿಸುವುದಿಲ್ಲ, ಶಾಪ ನೀಡುವುದಿಲ್ಲ, ಶಿಕ್ಷೆ ವಿಧಿಸುವದಿಲ್ಲ ಆದರೆ ಯಾವ ಅಡೆತಡೆಯೂ ಇಲ್ಲದೆ ಪರಿಪೂರ್ಣಗೊಳಿಸಲು, ಕಳಂಕವಿಲ್ಲದೆ ಬದಲಾಗಲು ನಿರಂತರವಾಗಿ ಕೆಲಸ ಮಾಡುವಳು. ಆಕೆಯ ಅಸಮಾಧಾನವಿಲ್ಲದೆ ಪ್ರೋತ್ಸಾಹಿಸುವಳು. ಯಾರಿಗೆ ಎಷ್ಟು ಐಶ್ವರ್ಯವನ್ನು ಸ್ವೀಕರಿಸಲು ಸಾಧ್ಯವೋ ಅಷ್ಟನ್ನು ಆಕೆಯು ಅನುಗ್ರಹಿಸುವಳು. ಯಾರ ಪ್ರೇಮವು ಫಲ ನೀಡಿ ಪುಷ್ಟೀಕರಿಸುವದೋ, ರಕ್ಷಿಸುವದೋ ಮತ್ತು ಪೋಷಿಸುವದೋ, ವಿವೇಚನೆಯನ್ನು ನೀಡಿ ಸಮಾಧಾನ ಪಡಿಸುವದೋ, ಅಂತಹ ಮಾತೆಯು ಆಕೆಯಾಗಿರುವಳು. ಏಕೆಂದರೆ ಆಕೆಯು ಎಲ್ಲವನ್ನು ಅರ್ಥ ಮಾಡಿಕೊಳ್ಳುವಳು. ಆಕೆಯು ಎಲ್ಲವನ್ನೂ ಸಹಿಸಬಲ್ಲಳು, ಪ್ರತಿಯೊಂದನ್ನೂ ಕ್ಷಮಿಸಿ ಮನ್ನಿಸುವಳು. ಪ್ರತಿಯೊಂದನ್ನೂ ವಿಶ್ವಾಸಪೂರ್ವಕವಾಗಿ ಸಿದ್ಧಪಡಿಸುವಳು. ಪ್ರತಿಯೊಂದನ್ನೂ ತನ್ನೊಳಗೆ ಭರಿಸುವಳು. ಎಲ್ಲರಿಗೂ ಸೇರದೆ ಇರುವಂತಹುದೇನನ್ನೂ ಆಕೆಯು ಹೊಂದಿರುವದಿಲ್ಲ. ಆಕೆಯು ಎಲ್ಲರ ಆಡಳಿತಗಾರಳಾಗಿರುವದರಿಂದ ಆಕೆಯು ಎಲ್ಲರ ಸೇವಕಿಯಾಗಿರುವಳು. ಆದುದರಿಂದಲೇ ಎಲ್ಲರೂ, ಶ್ರೇಷ್ಠರಾದವರು ಮತ್ತು ಕ್ಷುಲ್ಲಕವಾದವರು, ಆಕೆಯೊಂದಿಗೆ ರಾಜರಾಗಬಯಸುವವರು ಮತ್ತು ಆಕೆಯಲ್ಲಿ ದೇವತೆಯಾಗಬಯಸುವವರು, ಆಕೆಯಂತೆಯೇ ದಮನಕಾರಿಗಳಾಗುವದಿಲ್ಲ. ಆದರೆ ಅವರ ಸಹೋದರರ ನಡುವೆ ಪರಿಚಾರಿಕನಾಗುವರು.

*

ಸೇವಕನ ಈ ನಮ್ರ ಪಾತ್ರವು ಎಷ್ಟು ಸುಂದರವಾಗಿ ಇರುವುದು. ಎಲ್ಲವನ್ನು ಜೀವಂತಗೊಳಿಸುವ ದಿವ್ಯ ಪ್ರೇಮದ, ಎಲ್ಲರ ಆಂತರ್ಯದಲ್ಲಿ ಇರುವ ಭಗವಂತನ ದೂತರ ಮತ್ತು ದರ್ಶನ ಮಾಡಿದ ಎಲ್ಲರದೂ ಸೇವಕನ ಪಾತ್ರವೇ ಆಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/42**

**ಸ್ವ–ಅರ್ಪಣೆ**

ತನ್ನನ್ನೇ ನೀಡುವದೇ ನಿಜವಾದ ಪ್ರಾರ್ಥನೆ.

*

ತನ್ನನ್ನೇ ನೀಡುವದು: ಇದರ ಮೂಲಕ ಇಡೀ ಸತ್ತೆಯು ಮಧ್ಯದ ಚೈತ್ಯ ಸತ್ತೆಯ ಸುತ್ತಲೂ ಹಂತ ಹಂತವಾಗಿ ಒಗ್ಗೂಡುವದು.

*

ನಿನ್ನನ್ನೇ ಕೊಟ್ಟುಬಿಡು – ಅದು ನಿನ್ನನ್ನು ಕಂಡುಕೊಳ್ಳುವ ಅತ್ಯುತ್ತಮ ಹಾದಿಯಾಗಿದೆ.

*

ದಿವ್ಯಕ್ಕೆ ನಿನ್ನನ್ನು ಕೊಟ್ಟುಬಿಡು, ನೀನೇನಾಗಿರುವೆಯೋ ಅದೆಲ್ಲವನ್ನೂ ಕೊಟ್ಟುಬಿಡು, ನೀನು ಮಾಡುವದೆಲ್ಲವನ್ನೂ ಕೊಟ್ಟುಬಿಡು, ಮತ್ತು ನೀನು ಶಾಂತಿಯನ್ನು ಪಡೆಯುವೆ.

*

ದಿವ್ಯಕ್ಕೆ ನಿನ್ನನ್ನು ಸಂಪೂರ್ಣವಾಗಿ ಕೊಟ್ಟುಬಿಡು ಮತ್ತು ನಿನ್ನ ಎಲ್ಲಾ ಸಮಸ್ಯೆಗಳ ಅಂತ್ಯವನ್ನು ಕಾಣುವೆ.

*

ಪ್ರಾಮಾಣಿಕವಾದ ಸ್ವ–ನೀಡುವಿಕೆಯೇ ಎಲ್ಲಾ ಕಷ್ಟಗಳು ಮತ್ತು ಅಪಾಯಗಳಿಂದ ಯಾರನ್ನಾದರೂ ಪಾರು ಮಾಡುವದು.

*

“ದಿವ್ಯಕ್ಕೆ ಕೊಡಲು ನನ್ನ ಹತ್ತಿರ ಏನೂ ಇಲ್ಲ”ವೆಂದು ಎಂದಿಗೂ ಹೇಳಬೇಡ. ಯಾವಾಗಲೂ ಕೊಡಲು ಏನಾದರೂ ಇರುವದು. ಏಕೆಂದರೆ ಯಾವಾಗಲೂ ಹೆಚ್ಚು ಉತ್ತಮವಾದ ಮತ್ತು ಹೆಚ್ಚು ಪೂರ್ಣವಾದ ರೀತಿಯಲ್ಲಿ ನಿನ್ನನ್ನು ನೀನು ಕೊಡಬಹುದು.

*

ನೀನು ದಿವ್ಯಕ್ಕೆ ಏನನ್ನು ನೀಡಿರುವೆಯೋ ಅದೇ ದಿವ್ಯವು ನಿನಗೆ ಕೊಡುವ ಮಾನ್ಯತೆ.

*

ನಿನ್ನ ಬಳಿ ಅತಿ ಹೆಚ್ಚಾಗಿ ಏನಿದೆಯೋ ಅದನ್ನು ದಿವ್ಯಕ್ಕೆ ನೀಡುವುದು ಅರ್ಪಣೆಯಲ್ಲ.

*

ನಿನ್ನ ಅವಶ್ಯಕತೆ ಏನಿದೆಯೋ ಅದರಲ್ಲಿ ಕೊನೆಯ ಪಕ್ಷ ಸ್ವಲ್ಪ ಭಾಗವನ್ನು ನೀಡಬೇಕು.

*

ನೀನು ದಿವ್ಯಕ್ಕೆ ಏನು ನೀಡಿರುವೆ ಎಂಬುದು ನಿನಗೆ ನೆನಪಿದ್ದರೆ, ಸ್ವತಃ ಆತನೇ ಅದನ್ನು ನೆನಪಿಟ್ಟುಕೊಳ್ಳುವ ಅವಶ್ಯಕತೆ ಇರುವದಿಲ್ಲ. ಮತ್ತು ಆ ಉಡುಗೊರೆಯ ಬಗ್ಗೆ ಬೇರೆ ಯಾರಿಗಾದರೂ ಹೇಳಿದರೆ, ನೀನು ದಿವ್ಯಕ್ಕೆ ಅರ್ಪಣೆ ಮಾಡಿದಂತೆ ಆಗದೆ ನಿನ್ನ ಅಹಂಕಾರದ ಭೂತಕ್ಕೆ ಅರ್ಪಣೆ ಮಾಡಿದಂತಾಗುವದು.

*

ಸಂಪೂರ್ಣ ಸ್ವ–ಅರ್ಪಣೆ: ಪೂರ್ತಿಯಾಗಿ ತೆರೆದುಕೊಂಡಿರು, ಸ್ಪಷ್ಟತೆ ಮತ್ತು ಪರಿಶುದ್ಧತೆ.

*

ಚೈತ್ಯ ಸಾಕ್ಷಾತ್ಕಾರ ಮತ್ತು ಆಧ್ಯಾತ್ಮಿಕ ಸಾಕ್ಷಾತ್ಕಾರಗಳ ನಡುವಿನ ವ್ಯತ್ಯಾಸವನ್ನು ತಿಳಿದುಕೋ. ಏಕೆಂದರೆ ಚೈತ್ಯ ಸಾಕ್ಷಾತ್ಕಾರವು ನಿನ್ನನ್ನು ಕಾಲ ಮತ್ತು ಪ್ರದೇಶಗಳ ಒಳಗೆ ಉಳಿಸುವದು; ಪ್ರಕಟವಾಗಿರುವ ವಿಶ್ವದ ಒಳಗೆ ಉಳಿಸುವದು.

*

ಆದರೆ ಆಧ್ಯಾತ್ಮಿಕ ಸಾಕ್ಷಾತ್ಕಾರದ ಪರಿಣಾಮವು ನಿನ್ನನ್ನು ಸಮಸ್ತ ಸೃಷ್ಟಿ, ಕಾಲ ಮತ್ತು ಪ್ರದೇಶದ ಹೊರಗೆ ಎಸೆಯುವದು.

*

ನಿನಗಿಂತಲೂ ಶ್ರೇಷ್ಠವಾದುದಕ್ಕೆ ನಿನ್ನನ್ನು ಸಂಪೂರ್ಣವಾಗಿ ನೀಡುವದಕ್ಕಿಂತಲೂ ಹೆಚ್ಚು ಪರಿಪೂರ್ಣವಾದ ಆನಂದ ಬೇರೊಂದಿಲ್ಲ. ದೈವ, ಪರಮೋತ್ತಮ ಮೂಲ, ದಿವ್ಯ ಸನ್ನಿಧಿ, ಸಮಗ್ರ ಸತ್ಯ – ನಾವು ಆತನಿಗೆ ಯಾವ ಹೆಸರನ್ನು ನೀಡುವೆವು ಅಥವಾ ಯಾವ ಅಂಶದ ಮೂಲಕ ನಾವು ಆತನನ್ನು ಸಮೀಪಿಸುವೆವು ಎಂಬುದು ಮುಖ್ಯವಲ್ಲ – ಸಾಕ್ಷಾತ್ಕಾರದ ಕಡೆಗಿನ ನಿಸ್ಸಂದೇಹವಾದ ಹಾದಿ ಯಾವುದೆಂದರೆ ಒಂದು ಸಮಗ್ರ ನಿವೇದನೆಯಲ್ಲಿ ತನ್ನನ್ನೇ ತಾನು ಸಂಪೂರ್ಣವಾಗಿ ಮರೆತುಬಿಡುವದು.

*

ನಮ್ಮ ಚಿಂತನೆಗಳು ದಿವ್ಯದ ಕಡೆ ತಿರುಗಿದಾಗ ಮತ್ತು ದಿವ್ಯಕ್ಕೆ ನಾವು ನಮ್ಮನ್ನೇ ನೀಡಿದಾಗ ಪ್ರತಿಯೊಂದೂ ಎಷ್ಟು ಸುಂದರ, ಶ್ರೇಷ್ಠ, ಸರಳ ಮತ್ತು ಶಾಂತವಾಗಿ ಪರಿಣಮಿಸುವವು!

*

ನಮ್ಮ ಜೀವನ, ನಮ್ಮ ಮರಣ, ನಮ್ಮ ಸಂತಸ ಮತ್ತು ನಮ್ಮ ದುಃಖಗಳನ್ನು ಹೇಗೆ ನೀಡಬೇಕೆಂಬುದನ್ನು ನಾವು ಅರಿತಿರಬೇಕು.

ದಿವ್ಯಕ್ಕೆ ಸಂಪೂರ್ಣವಾಗಿ ಸ್ವ–ಅರ್ಪನೆ ಮಾಡುವ ಮೂರು ವಿಧಾನಗಳು:

(1) ಪರಿಪೂರ್ಣ ನಮ್ರತೆಯೊಂದಿಗೆ ಎಲ್ಲಾ ಅಹಂಕಾರವನ್ನು ತ್ಯಜಿಸಿ ಆತನ ಪಾದಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡುವದು.

(2) ಆತನ ಮುಂದೆ ತನ್ನ ಸತ್ತೆಯನ್ನು ಬಯಲು ಮಾಡಿ, ತನ್ನ ಇಡೀ ದೇಹವನ್ನು ತೆರೆಯುವದು. ಶಿರದಿಂದ ಪಾದದವರೆಗೆ ಒಂದು ಪುಸ್ತಕವನ್ನು ತೆರೆಯುವ ರೀತಿಯಲ್ಲಿ, ಯಾವುದೂ ಅಡಗದೆ ಇರುವ ರೀತಿಯಲ್ಲಿ ಸಂಪೂರ್ಣ ಪ್ರಾಮಾಣಿಕವಾಗಿ ನಮ್ಮ ಕೇಂದ್ರಗಳು ತಮ್ಮ ಎಲ್ಲಾ ಚಲನವಲನಗಳನ್ನು ತೋರ್ಪಡಿಸುವಂತೆ ಬಹಿರಂಗಪಡಿಸಬೇಕು.

(3) ಆತನ ತೋಳುಗಳನ್ನು ತಬ್ಬಿಕೊಂಡು ಒಂದು ಸಮಗ್ರ ನಂಬಿಕೆ ಮತ್ತು ಪ್ರೇಮದೊಂದಿಗೆ ಆತನಲ್ಲಿ ವಿಲೀನವಾಗಬೇಕು.

ಮಾದರಿಗೆ ಅನುಗುಣವಾಗಿ ಈ ಚಲನೆಗಳು ಮೂರು ಸೂತ್ರಗಳು ಅಥವಾ ಅವುಗಳಲ್ಲಿ ಯಾವುದಾದರೊಂದರ ಜೊತೆಗೂಡಿರಬೇಕು:

(1) ನಿನ್ನ ಸಂಕಲ್ಪವು ಈಡೇರಲಿ, ನನ್ನದಲ್ಲ.

(2) ನೀನು ಸಂಕಲ್ಪಿಸಿದಂತೆ, ನಿನ್ನ ಸಂಕಲ್ಪಕ್ಕೆ ಅನುಗುಣವಾಗಿ.

(3) ನಿರಂತರವಾಗಿ ನಾನು ನಿನ್ನವನು.

*

ಸಾಮಾನ್ಯವಾಗಿ, ಈ ಚಲನೆಗಳನ್ನು ನೈಜವಾಗಿ ಮಾಡಿದಾಗ, ಒಂದು ಪರಿಪೂರ್ಣ ಗುರುತಿಸುವಿಕೆ.

ಒಂದು ಅಹಂಕಾರದ ಕರಗುವಿಕೆಯು ಅದನ್ನು ಅನುಸರಿಸುವದು. ಇದರಿಂದ ಒಂದು ಸೂಕ್ಷ್ಮ ಐಶ್ವರ್ಯವು ಹೊರಹೊಮ್ಮುವದು.

*

ಪರಮೋತ್ತಮ ಗುರುತಿಸುವಿಕೆಯ ಕಡೆಗಿನ ಮೂರು ಹೆಜ್ಜೆಗಳು.

*

ನಿನ್ನ ಬಳಿ ಇರುವದೆಲ್ಲವನ್ನೂ ಕೊಟ್ಟುಬಿಡು, ಇದೇ ಪ್ರಾರಂಭ.

*

ನೀನು ಮಾಡುವುದೆಲ್ಲವನ್ನೂ ಕೊಟ್ಟುಬಿಡು, ಇದೇ ಹಾದಿ.

*

ನೀನೇನಾಗಿರುವೆಯೋ, ಅದೆಲ್ಲವನ್ನೂ ಕೊಟ್ಟುಬಿಡು, ಇದೇ ಪರಿಪೂರ್ಣತೆ.

*

ದಿವ್ಯಕ್ಕೆ, "ತನ್ನನ್ನು ಕೊಡಬೇಕು" ಎಂದು ನಾನು ಓದಿರುವೆ ಮತ್ತು ಆಲಿಸಿರುವೆ, "ತನ್ನನ್ನು ಕೊಡುವುದು" ಹೇಗೆ ಎಂದು ನನಗೆ ಅರ್ಥವಾಗುತ್ತಿಲ್ಲ.

*

ನಿನ್ನ ಚಿಂತನೆಯೊಂದಿಗೆ, ನಿನ್ನ ಚಿಂತನೆಗಳನ್ನು ಕೊಟ್ಟುಬಿಡು.

*

ನಿನ್ನ ಹೃದಯದೊಂದಿಗೆ, ನಿನ್ನ ಭಾವನೆಗಳನ್ನು ಕೊಟ್ಟುಬಿಡು.

*

ನಿನ್ನ ದೇಹದೊಂದಿಗೆ, ನಿನ್ನ ಕೆಲಸವನ್ನೂ ಕೊಟ್ಟುಬಿಡು.

*

ಎಲ್ಲಾ ಪದಗಳಿಗಿಂತಲೂ ಹೆಚ್ಚಾಗಿ, ಎಲ್ಲಾ ಚಿಂತನೆಗಳಿಗಿಂತಲೂ ಮೇಲೆ ಅಭೀಪ್ಸಾಭರಿತ ಶ್ರದ್ಧೆಯ ಪ್ರಕಾಶಮಾನವಾದ ಮೌನದಲ್ಲಿ ನಿನ್ನನ್ನು ಸಂಪೂರ್ಣವಾಗಿ, ಯಾವುದೇ ಹಿಂಜರಿಕೆಯಿಲ್ಲದೆ, ಸಮಗ್ರವಾಗಿ ಪರಮೋತ್ತಮ ಒಡೆಯನಿಗೆ ಕೊಟ್ಟುಬಿಡು. ನೀನು ಏನಾಗಬೇಕೆಂದು ಆತನು ಆಶಿಸುವನೋ ಅದಾಗಿ ನಿನ್ನನ್ನು ಮಾಡುವನು.

ಪ್ರೇಮ ಮತ್ತು ಆಶೀರ್ವಾದಗಳೊಂದಿಗೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/100–103 – ಶ್ರೀಮಾತೆ**

## ಶ್ರೀ ಅರವಿಂದರ
## ‘ಗೀತಾ ಪ್ರಬಂಧಗಳು’

**– ಅನುವಾದ: ಜಾನ್ವಿ**

**41**

**ಎರಡನೆಯ ಸರಣಿ:**

**ಅಧ್ಯಾಯ – 5**

### ದೈವೀ ಸತ್ಯ ಮತ್ತು ಮಾರ್ಗ (5/3)

‘ವಾಸುದೇವಃ ಸರ್ವಮಿತಿ’ ಎಂಬ ವಾಕ್ಯದ ನಿಜವಾದ ಅರ್ಥ ಇದು; ಈ ಜಗತ್ತೇನಿದೆಯೋ ಅದೆಲ್ಲವೂ ಈಶ್ವರನೇ ಮತ್ತು ಜಗತ್ತಿನಕ್ಕಿಂತ ಹೆಚ್ಚಿಗೇನಿದೆಯೋ ಅದೂ ಕೂಡ ಈಶ್ವರನೇ. ಇಲ್ಲವಾದರೆ, ಮನಸ್ಸು ಉಚ್ಚತಮ ಗುರಿಯನ್ನು ಮುಟ್ಟದೇ ಹೋಗುವುದು, ಕೇವಲ ಜಗತ್ತಿನ ವ್ಯವಹಾರಕ್ಕೆ ಸೀಮಿತವಾಗಿ ನಿಂತು ಬಿಡುವುದು ಅಥವಾ ಜಗತ್ತಿನಲ್ಲಿನ ಈಶ್ವರನ ಯಾವುದಾದರೊಂದು ಅಂಶದ ಸಾಕ್ಷಾತ್ಕಾರಕ್ಕೆ ಸೀಮಿತವಾಗಿ ಬಿಡುವುದು. ಮುಂದೆ ಅದು ಈಶ್ವರನ ಜಾಗತಿಕ ಅಸ್ತಿತ್ವಕ್ಕೆ, ಅವನು ಚಲಿಸುವ, ಓಡಾಡುವ, ಕ್ರೀಡಿಸುವ ವಿಶ್ವಕ್ಕೆ ಮಾತ್ರ ಮಹತ್ವ ನೀಡುವುದು. ಆನಂತರ ಮುಂದೆ ಅದು ಅವನ ವಿಶ್ವಾತ್ಮಕ ಅಸ್ತಿತ್ವಕ್ಕೆ ಮಹತ್ವ ನೀಡುವುದು, ಇಡೀ ವಿಶ್ವವು ಅವನಲ್ಲಿಯೇ ಇದೆ, ಅವನೊಳಗೆಯೇ ಚಲಿಸುತ್ತದೆ ಎಂಬ ಅನುಭವವಾಗುವುದು. ಇದು ಈಶ್ವರನ ರೂಪವಾದ ವಿಶ್ವದಲ್ಲಿ ನಡೆಯುವ ಎಲ್ಲ ಕಾರ್ಯಕಲಾಪಗಳಿಗೂ ಸಮರ್ಥನೆ ನೀಡುವುದು. ಈ ಬೃಹತ್ ಆಧ್ಯಾತ್ಮಿಕ ಆತ್ಮ ಚೈತನ್ಯದಲ್ಲಿ ಈಶ್ವರನು ತನ್ನನ್ನು ಕಾಲ ಪುರುಷನ ರೂಪದಲ್ಲಿ ಕಂಡುಕೊಂಡು ತನ್ನ ವಿಶ್ವ ವ್ಯವಹಾರವನ್ನು ಸಂಚಾಲಿತಗೊಳಿಸುತ್ತಾನೆ. ಆನಂತರದ ಆಧ್ಯಾತ್ಮಿಕ ಅನುಭವದಲ್ಲಿ ಭಗವಂತನೇ ಸಮಸ್ತ ಸೃಷ್ಟಿಯಲ್ಲಿ ಅಂತರ್ಗತನಾಗಿದ್ದಾನೆ, ಮಾನವನ ಶರೀರದಲ್ಲಿ ಅಂತರ್ನಿಹಿತನಾಗಿದ್ದಾನೆ ಎಂಬ ಸತ್ಯದ ಅರಿವಾಗುತ್ತದೆ. ಅವನು ಸಮಸ್ತ ಸೃಷ್ಟಿಯಲ್ಲಿ ಅಂತರ್ನಿಯಾಮಕನಾಗಿ ಸರ್ವಾಂತರ್ಯಾಮಿಯಾಗಿ ವ್ಯಾಪ್ತನಾಗಿದ್ದಾನೆ. ಇದನ್ನರಿಯದೇ ಹೋದರೆ ವೈಯಕ್ತಿಕ ಅಸ್ತಿತ್ವದ ದೈವೀ ಅರ್ಥವೇ ಕೈ ಬಿಟ್ಟು ಹೋಗುವುದು, ಅಷ್ಟೇ ಅಲ್ಲ ನಮ್ಮ ಅತ್ಯುನ್ನತ ಆಧ್ಯಾತ್ಮಿಕ ಸಾಧ್ಯತೆಗಳನ್ನು ಪಡೆಯಬೇಕೆಂಬ ತುಡಿತವೇ ಇಲ್ಲದಾಗಿ ಜೀವ ಜೀವಗಳ ನಡುವಿನ

ಸಂಬಂಧಕ್ಕೂ ಮಾನವೀಯತೆಯ ಜೊತೆಗಿನ ಸಂಬಂಧಕ್ಕೂ ಸಮರ್ಪಕ ಸಮರ್ಥನೆ ಇಲ್ಲದಾಗಿ, ಅಹಂಕಾರವೇ ಪ್ರಧಾನವಾಗಿ ಬಿಡುವುದು. ಕೊನೆಯದಾಗಿ, ಗೀತೆಯು ಎಲ್ಲದರಲ್ಲೂ ದೈವೀ ಸಾನ್ನಿಧ್ಯವಿದೆ ಎಂಬುದನ್ನು ವಿವರವಾಗಿ ಪ್ರತಿಪಾದಿಸುತ್ತ ಪ್ರಕೃತಿಯಲ್ಲಿ ಏನೆಲ್ಲ ಇದೆಯೋ ಅದೆಲ್ಲವೂ ಏಕೈಕನಾದ ಈಶ್ವರನ ಬೆಳಕಿನಿಂದ ಶಕ್ತಿಯಿಂದ ಬಂದಿದೆ ಎಂಬುದನ್ನು ಶ್ರುತಪಡಿಸುವದು. ಈಶ್ವರ–ಜ್ಞಾನಕ್ಕೆ ಈ ದರ್ಶನ ಅತ್ಯಂತ ಅವಶ್ಯವಾಗಿದೆ. ಈ ಜ್ಞಾನದ ಮೇಲೆಯೇ ಇಡೀ ಅಸ್ತಿತ್ವದ ಸಮಗ್ರ ತಿರುವು ಅವಲಂಬಿಸಿದೆ. ಇಡೀ ಪ್ರಕೃತಿಯು ಈಶ್ವರನ ಕಡೆಗೆ ಸಾಗುತ್ತಿರುವ ನಿಜವಾದ ಅರ್ಥ ಇದರಲ್ಲಿಯೇ ಇದೆ, ಈ ಜಗತ್ತಿನಲ್ಲಿ ನಡೆದಿರುವ ಎಲ್ಲ ಕಾರ್ಯಗಳೂ ಈಶ್ವರನಿಂದಲೇ ಸಾಧ್ಯವಾಗಿವೆ ಎಂಬ ಮನವರಿಕೆ ಮಾನವನಿಗಾಗುವುದು. ಆ ದಿವ್ಯ ಭಾಗವತ ಶಕ್ತಿಯೇ ಎಲ್ಲದರ ಹಿಂದೆ ಇದೆ ಎಂಬುದು ಮನದಟ್ಟಾಗುವುದು, ಆಗ ಅವನ ಮನಸ್ಸು ಭಗವಂತನೆಡೆಗೆ ಪುನರ್ರೂಪಿತವಾಗುವುದು, ಎಲ್ಲವನ್ನೂ ಭಗವಂತನ ಕಾರ್ಯವೇ ಎಂದು ಭಾವಿಸಿ ಜೀವನ ವ್ಯಾಪಾರ ನಡೆಸಲು ಸಾಧ್ಯವಾಗುವುದು, ದೈವೀ ಕಾರ್ಯವು ವಿಶ್ವಾತೀತವಾಗಿದ್ದರೂ ಅದರ ಉದ್ದೇಶವು ವಿಶ್ವಾತ್ಮಕವಾಗಿರುವುದು, ಅದು ವ್ಯಕ್ತಿಯ ಮೂಲಕ ಜರುಗಿ ವ್ಯಷ್ಟ ಹಾಗೂ ಸಮಷ್ಟಿಯ ಸೃಷ್ಟಿಯ ಉದ್ದೇಶವನ್ನು ಸಾರ್ಥಕಗೊಳಿಸುವುದು.

ಪರಮ ಪುರುಷ, ಪುರುಷೋತ್ತಮ, ವಿಶ್ವ ಪ್ರಜ್ಞೆಯ ಹಿಂದೆ ಇರುವ ಅವಿಕಾರಿಯಾದ ಆತ್ಮ ಚೈತನ್ಯ, ಮಾನವನಲ್ಲಿರುವ ವೈಯಕ್ತಿಕತೆಯ ಸಾಕಾರ ರೂಪದ ದೈವತ್ವ; ಗುಪ್ತವಾಗಿರುವ ದೈವೀ ಪ್ರಜ್ಞೆ ಅಥವಾ ಅರೆಬರೆಯಾಗಿ ಪ್ರಕಟವಾಗಿರುವ ಪ್ರಕೃತಿ ಮತ್ತು ಅದರ ಎಲ್ಲ ಕಾರ್ಯಗಳಲ್ಲಿ, ಸೃಷ್ಟಿಯಲ್ಲಿ ಪಶು, ಪಕ್ಷಿ, ಪ್ರಾಣಿ, ಜೀವಿ ಎಲ್ಲವೂ ವಾಸ್ತವವಾಗಿ ಒಂದೇ ಸತ್ಯ, ಒಂದೇ ದೈವತ್ವ ಎಂಬುದು ಅರಿವಾಗುವುದು. ಆದರೆ ಏಕತೆಯ ಬಗ್ಗೆ ನಮಗಿರುವ ಸತ್ಯದ ಪರಿಕಲ್ಪನೆಗಳನ್ನು ಮುಂದಿರಿಸಲು ಹೋದಾಗ ಎಲ್ಲ ಅರ್ಥವೂ ಬದಲಾಗುವುದು, ಅಥವಾ ಏಕೈಕ ಪರಮ ಸತ್ತೆಯ ಇತರ ನಿಲುವುಗಳಿಗೆ ಈ ಸತ್ಯವನ್ನು ಅನ್ವಯ ಮಾಡಲು ಹೋದಾಗ ಸಂಪೂರ್ಣ ಅರ್ಥವೇ ಬದಲಾಗುವುದು. ಭಗವಂತನು ಯಾವಾಗಲೂ ಸದಾ ಸರ್ವದಾ ಈಶ್ವರನೇ, ಪ್ರಭುವೇ, ಆದ್ದರಿಂದ ಅವನ ಈ ಪ್ರಭುತ್ವದ ಪರಿಕಲ್ಪನೆಯನ್ನು ಬಹಳ ವಿಚಾರ ಮಾಡದೇ ಸ್ಥೂಲವಾಗಿ ಅನ್ವಯ

ಮಾಡಿದರೆ, ಇಡೀ ಪರಿಕಲ್ಪನೆಯ ಅರ್ಥವೇ ಬೇರೆಯಾಗಿ ಬಿಡುವುದು. ವಿಶ್ವಾತೀತ, ವಿಶ್ವಾತ್ಮಕ, ವೈಯಕ್ತಿಕ ಹೀಗೆ ಎಲ್ಲ ಸ್ವರೂಪಗಳಲ್ಲಿಯೂ ಒಂದೇ ರೀತಿ ಅನ್ವಯ ಮಾಡಲು ಇಚ್ಛಿಸುವದು ತಪ್ಪಾಗುವುದು. ಭಗವಂತನು ವಿಶ್ವಾತ್ಮಕ ಪ್ರಕೃತಿಯಲ್ಲಿ ಪ್ರಕಟನಾಗಿ ಅದರ ಜೊತೆ ತೀರ ಆಪ್ತವಾಗಿ, ಒಂದಾಗಿರುವಂತೆಯೇ ವರ್ತಿಸುತ್ತಾನೆ. ಆಗ ಅವನೇ ಪ್ರಕೃತಿ, ಆದರೆ ಅದೇ ಅಲ್ಲ ಅದರ ಎಲ್ಲ ಕಾರ್ಯಗಳಲ್ಲಿ ಅವುಗಳ ಆತ್ಮ ರೂಪವಾಗಿ ನಿಂತು, ಅವುಗಳನ್ನು ಮುಂದಾಗಿ ಸಂಕಲ್ಪಿಸಿ, ಮುಂದಾಗಿ ಯೋಜಿಸಿ, ಎಲ್ಲ ಮಗ್ಗಲುಗಳನ್ನು ಅರಿತುಕೊಂಡು, ಎಲ್ಲ ರೀತಿಯ ಕಾರ್ಯಗಳನ್ನು ಬಲವತ್ತರವಾಗಿಯಾದರೂ ಮಾಡಿಸಿಕೊಳ್ಳುತ್ತ ಫಲಿತಾಂಶದ ನಿಯಮಗಳನ್ನು ಮೀರಿ ಸಫಲಗೊಳಿಸುತ್ತಾನೆ. ಎಲ್ಲದರಲ್ಲೂ ನಿಶ್ಚಲನಾದ ಆತ್ಮನಾಗಿ ನಿಂತು ಅಕರ್ತೃ ಎನಿಸಿಕೊಳ್ಳುತ್ತಾನೆ, ಕಾರ್ಯ ಮಾಡುವುದು ಪ್ರಕೃತಿಯೇ–ನಮ್ಮ ಸ್ವಭಾವದ ವ್ಯವಹಾರ ಧರ್ಮದ ಅನುಸಾರ ಎಲ್ಲ ಕರ್ಮಗಳನ್ನು ಮಾಡಲು ಪ್ರಕೃತಿಗೇ ಬಿಟ್ಟುಕೊಡುತ್ತಾನೆ. “ಸ್ವಭಾವಸ್ತು ಪ್ರವರ್ತತೇ” (5.14) ಆದರೂ ಸಹ ಅವನು ಈಶ್ವರನೇ, ಅವನೇ ಒಡೆಯ ಅವನೇ ಪ್ರಭು “ಪ್ರಭು, ವಿಭು” ಏಕೆಂದರೆ ನಮ್ಮೆಲ್ಲರ ಕಾರ್ಯಗಳನ್ನು ಅವನೇ ಬೆಂಬಲಿಸುತ್ತಾನೆ, ತನ್ನ ನಿಶ್ಚಲ ಶಾಂತಿಯ ಮೂಲಕ ಪ್ರಕೃತಿಯೇ ಎಲ್ಲ ಕೆಲಸ ಮಾಡುವಂತೆ ಯೋಜಿಸುತ್ತಾನೆ. ಸ್ವತಃ ನಿಶ್ಚಲ ನಿಷ್ಕ್ರಿಯನಾಗಿರುತ್ತ ತನ್ನ ಪರಾತ್ಪರ ಶಕ್ತಿ ಎಲ್ಲೆಡೆ ಪಸರಿಸುವಂತೆ, ಕಾರ್ಯ ಮಾಡುವಂತೆ ಮಾಡುತ್ತಾನೆ. ತಾನು ಮಾತ್ರ ಎಲ್ಲರಲ್ಲಿ ಎಲ್ಲದರ ಸಾಕ್ಷಿಯಾಗಿ ನಿಂತು ನೋಡುತ್ತಾನೆ. ಪರಮೋಚ್ಚ ವಿಶ್ವೋತ್ತೀರ್ಣ ಪರಾತ್ಪರನಾಗಿ ಎಲ್ಲವನ್ನೂ ನಿಯೋಜಿಸುತ್ತಾನೆ, ತಾನು ಮಾತ್ರ ಎಲ್ಲದರಿಂದ ಭಿನ್ನವಾಗಿ ಮೇಲಿರುತ್ತಾನೆ. ಎಲ್ಲವೂ ಪ್ರಕಟವಾಗುವಂತೆ ಮಾಡುವವನೂ ಅವನೇ. ಆದರೆ ತಾನು ಸೃಷ್ಟಿಸಿದ ಯಾವುದರಲ್ಲೂ ಅವನು ಕಳೆದು ಹೋಗುವುದಿಲ್ಲ. ಯಾವುದರ ಮೋಹಕ್ಕೂ ಒಳಗಾಗಿ ಅಂಟಿಕೊಳ್ಳುವುದಿಲ್ಲ. ಅವನದು ಸರ್ವಸ್ವತಂತ್ರ ಮುಕ್ತ ಅಧೀಕ್ಷಕ ಸಂಕಲ್ಪವಾಗಿದ್ದು ಸಾಮಾನ್ಯವಾಗಿ ಎಲ್ಲ ಕಾರ್ಯಗಳ ಆರಂಭಕ್ಕೂ ಮುನ್ನ ಅದರ ಸಮ್ಮತಿ ಇದ್ದೇ ಇರುತ್ತದೆ. ವ್ಯಷ್ಟಿಯಲ್ಲಿ ಅವನು ಅವಿದ್ಯೆಯಲ್ಲಿರುವಾಗ ಗುಪ್ತವಾಗಿರುವ ಭಗವತ್ ಶಕ್ತಿಯಾಗಿರುತ್ತಾನೆ, ಅವನೇ ಎಲ್ಲವೂ ಪ್ರಕೃತಿಯಲ್ಲಿ ಮಂತ್ರಾ ರೂಢಾನಿ ಎಂಬಂತೆ ಕೆಲಸ ಮಾಡುವಂತೆ ಯೋಜಿಸುತ್ತಾನೆ. ನಮ್ಮ ಅಹಂ ಈ ಯಂತ್ರದ ಒಂದು ಭಾಗವಾಗಿ ಕಾರ್ಯ ನಿರ್ವಹಿಸುತ್ತದೆ. ಆದರೆ ಭಗವಂತನು

ಎಲ್ಲದರಲ್ಲೂ ಎಲ್ಲರಲ್ಲೂ ಇರುವುದರಿಂದ ನಾವು ಅವಿದ್ಯೆಯಿಂದ ಪಾರಾಗಿ ಈ ಸಂಬಂಧಗಳಿಂದ ಮುಕ್ತವಾಗಿ ಬಿಡಲು ಸಾಧ್ಯವಾಗುವುದು. ನಾವು ಇವೆಲ್ಲದರ ಹಿಂದಿರುವ ಏಕೈಕ ಆತ್ಮದ ಜೊತೆಗೆ (ಪರಮಾತ್ಮನ) ಗುರುತಿಸಿಕೊಳ್ಳುವುದರ ಮೂಲಕ ಅಕರ್ತೃವಾಗಿ, ಸಾಕ್ಷಿಯಾಗಿ ನಿಲ್ಲಲು ಸಾಧ್ಯವಾಗುವುದು ಅಥವಾ ನಮ್ಮ ಪ್ರತ್ಯೇಕ ಸತ್ತೆಯನ್ನು ಪರಮೋಚ್ಚ ಪುರುಷನ ಜೊತೆ ಯುಕ್ತ ಸಂಬಂಧವನ್ನು ಕಂಡುಕೊಂಡು ಅವನ ಎಲ್ಲ ಕಾರ್ಯಗಳಲ್ಲಿ ಕೇವಲ "ನಿಮಿತ್ತ" ಅಥವಾ ಉಪಕರಣವಾಗಿ ತೊಡಗಿಸಿಕೊಳ್ಳಬಹುದು. ಪರಮ ಪುರುಷನ ಮುಕ್ತ, ಅನಾಸಕ್ತ ಕಾರ್ಯಗಳಲ್ಲಿ ಆಧ್ಯಾತ್ಮಿಕವಾಗಿ ಗುರುತಿಸಿಕೊಳ್ಳಬಹುದು. ಇದನ್ನು ನಾವು ಗೀತೆಯಲ್ಲಿ ಸ್ಪಷ್ಟವಾಗಿ ನೋಡಬಹುದು. ಸತ್ಯವು ಒಂದೇ ಆಗಿದ್ದರೂ ಅದರ ಅನ್ವಯವು ಸಮಯ, ಸಂದರ್ಭ, ಸ್ಥಿತಿ–ಗತಿ ಇವುಗಳಿಗನುಗುಣವಾಗಿ ಬೇರೆ ಬೇರೆಯಾಗುತ್ತದೆ. ಇದನ್ನು ಗಮನಿಸದೇ ಹೋದರೆ ಏನೂ ಇಲ್ಲದಿರುವಲ್ಲಿ ಕೂಡ ವಿರೋಧ ತೋರಿ ಬರುವುದು, ಅಸಾಮರಸ್ಯ ಕಂಡು ಬರುವುದು, ಅರ್ಜುನನು ಕೃಷ್ಣನ ಒಗಟಿನಂಥ ಮಾತು ಕೇಳಿ ಗೊಂದಲಕ್ಕೀಡಾದಂತೆ ನಾವೂ ಸಹ ದಿಗ್ಭ್ರಾಂತರಾಗಬಹುದು.

"ಮತ್‌ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವ ಸ್ಥಿತಃ" (9.5) ಎಲ್ಲ "ಭೂತ ಪ್ರಪಂಚನೇ ನನ್ನಲ್ಲಿದೆ" ಎಂದು ಹೇಳುವ ಕೃಷ್ಣನೇ ತಕ್ಷಣ ಅದೇ ಶ್ಲೋಕದಲ್ಲಿ "ನಾನು ಮಾತ್ರ ಅವುಗಳಲ್ಲಿ ಇಲ್ಲ" ಎಂದು ಹೇಳುವುದರ ಮೂಲಕ ವಿರೋಧಾಭಾಸವನ್ನು ಸೃಷ್ಟಿಸುತ್ತಾನೆ. ಇದು ಒಂದು ಒಗಟು. ಅಷ್ಟೇ ಅಲ್ಲ ಭಗವಂತನು ಮಾನವ ಶರೀರದಲ್ಲಿ ಉಪಸ್ಥಿತನಾಗಿದ್ದಾನೆ "ಮಾನುಷೀಂ ತನುಮಾಶ್ರಿತಮ್" (9.11) ಎಂದು ಹೇಳುವುದು ಕೂಡ ಒಂದು ಒಗಟೇ. ಇಲ್ಲೆಲ್ಲ 'ಗುಪ್ತವಾಗಿರುವ ಸತ್ಯವನ್ನು' ಅರಿತುಕೊಳ್ಳಬೇಕು. ಆತ್ಮ ಮುಕ್ತಿಗೆ ಜ್ಞಾನ–ಭಕ್ತಿ–ಕರ್ಮಗಳ ಸಮಗ್ರ ಸಮನ್ವಯ ಮಾರ್ಗ ಅವಶ್ಯವಿದೆ. ಈ ಹೇಳಿಕೆಗಳು ತೋರಿಕೆಗೆ ವಿರುದ್ಧವಾಗಿದ್ದರೂ ಅವು ಪರಸ್ಪರ ಸತ್ಯವನ್ನು ಅಲ್ಲಗಳೆಯುವುದಿಲ್ಲ. ವಿಶ್ವೋತ್ತೀರ್ಣ ಅಂದರೆ ವಿಶ್ವದ ಮೇಲಿರುವ ಈಶ್ವರನು ವಿಶ್ವದಲ್ಲಿ ಇರಲಿಕ್ಕಿಲ್ಲ, ಅವನು ಭೂತಗಳ ಒಳಗೂ ಇರಲಿಕ್ಕಿಲ್ಲ. ಭೂತಿ ಮತ್ತು ಸಂಭೂತಿ ಅಥವಾ ಇರುವಿಕೆ ಮತ್ತು ಆಗುವಿಕೆ ಇವುಗಳ ನಡುವೆ ನಾವು ಮಾಡುವ ಅಂತರವು ಕೇವಲ ತೋರಿಕೆಯ ವಿಶ್ವದ ಪ್ರಕಟನೆಗೆ ಮಾತ್ರ ಸಂಬಂಧಿಸಿದುದಾಗಿದೆ. ವಿಶ್ವೋತ್ತೀರ್ಣ ಅಸ್ತಿತ್ವದಲ್ಲಿ ಎಲ್ಲವೂ

ಶಾಶ್ವತವಾದ ಅಸ್ತಿತ್ವವೇ, ವೈವಿಧ್ಯತೆ, ಅನೇಕತೆ ಹೀಗೆ ಏನೇ ಇದ್ದರೂ ಎಲ್ಲವೂ ಶಾಶ್ವತವೇ ಆಗಿರುತ್ತವೆ. ಒಳಗೆ ಇರುವ, ಹೊರಗೆ ಇರುವ ಎಂಬ ಸ್ಥಳಾತ್ಮಕ ಕಲ್ಪನೆಗೆ ಅಲ್ಲಿ ಎಡೆಯೇ ಇಲ್ಲ. ಏಕೆಂದರೆ ವಿಶ್ವಾತೀತ (ಅಥವಾ ವಿಶ್ವೋತ್ತೀರ್ಣ) ಕೇವಲ ಸ್ತರದಲ್ಲಿ ದೇಶ–ಕಾಲಗಳ ಪರಿಕಲ್ಪನೆಯೇ ಇಲ್ಲ. ದೇಶ ಕಾಲಗಳ ಪರಿಕಲ್ಪನೆ ಇರುವುದು ನಮ್ಮ ಈ ಪ್ರಪಂಚದಲ್ಲಿ ಮಾತ್ರ. ಅವುಗಳನ್ನು ಭಗವಂತನೇ ತನ್ನ ಯೋಗ ಮಾಯೆಯಿಂದ ನಿರ್ಮಾಣ ಮಾಡಿದ್ದಾನೆ. ಆ ಭಗವಂತ ಸ್ತರದಲ್ಲಿ ತಾತ್ಕಾಲಿಕ ಹಾಗೂ ದೇಶಬದ್ಧ ಅಸ್ತಿತ್ವವಿಲ್ಲ, ಅಲ್ಲಿರುವುದು ಆಧ್ಯಾತ್ಮಿಕ ಏಕಾತ್ಮತೆ: ಹಾಗೂ ಆಧ್ಯಾತ್ಮಿಕ ತಂದಾತ್ಮ್ಯತೆಯೇ ಅಲ್ಲಿನ ಬುನಾದಿ. ಆದರೆ ನಮ್ಮ ಈ ಪ್ರಕಟ ಪ್ರಪಂಚದಲ್ಲಿ ಇದಕ್ಕೆ ತದ್ವಿರುದ್ಧವಾಗಿ ವಿಶ್ವದ ಬೆಳವಣಿಗೆಯೇ ದೇಶ ಕಾಲಗಳ ಅಧೀನವಾಗಿದೆ. ಪರಮೋಚ್ಚ ವಿಶ್ವೋತ್ತೀರ್ಣ ಈಶ್ವರನೇ ಇಲ್ಲಿ ಪ್ರಕಟನಾಗಿದ್ದಾನೆ. ಅವನೇ ಇದರ ಆಧಾರ ಹಾಗೂ ಬೆಂಬಲ. ಅವನು ಮೊದಲು ಇದನ್ನೆಲ್ಲ ಭೂತಭೃತ್ ಅಂದರೆ ಎಲ್ಲವನ್ನೂ ಧಾರಣ ಮಾಡಿರುವ ಅಂತರ್ಯಾಮಿಯಾದ ಸರ್ವವ್ಯಾಪಿ ಪುರುಷನಾಗಿದ್ದಾನೆ. ಈ ಸರ್ವವ್ಯಾಪಕತ್ವದ ಮೂಲಕ ಸಮಗ್ರ ಜಗವನ್ನೆಲ್ಲ ಅವನೇ ಧರಿಸಿದ್ದಾನೆ ಎಂದು ಖಚಿತವಾಗಿ ಹೇಳಬಹುದು, ಆದರೆ ಅದೃಶ್ಯ ಆಧ್ಯಾತ್ಮಿಕ ಬುನಾದಿಯಾಗಿ, ತಳ ಹದಿಯಾಗಿ, ಈ ವಿಶ್ವದ ಸಮಸ್ತ ಸಂಭೂತಿಗಳ ಆಗಲಿರುವ ಜೀವಿಗಳ ಘಟನೆಗಳ ಕಾರಣ ರೂಪವಾಗಿ ಅವನಿದ್ದಾನೆ. ನಮ್ಮಲ್ಲಿರುವ ರಹಸ್ಯ ಚೈತನ್ಯವು ನಮಗೆ ಗೊತ್ತಾಗದಂತೆಯೇ ತನ್ನಲ್ಲಿ ನಾವು ಮಾಡುವ ಕೆಲಸ ಕಾರ್ಯಗಳು, ವಿಚಾರಗಳು, ಶರೀರ, ಮನಸ್ಸು, ಪ್ರಾಣಗಳಂತೆಯೇ ಎಲ್ಲವನ್ನೂ ಸಮಗ್ರ ವಿಶ್ವವನ್ನೇ ಭರಿಸಿರುತ್ತಾನೆ. ಎಲ್ಲದಕ್ಕೂ ಆಧಾರವಾಗಿ ಬೆಂಬಲವಾಗಿ ಇರುತ್ತಾನೆ. ಈ ರೀತಿಯ ಅಂತರ್ಯಾಮಿತ್ವ ಅಥವಾ ಸರ್ವವ್ಯಾಪಕತ್ವವು ಪ್ರಜ್ಞೆಯ, ಚೈತನ್ಯದ ಅಲೌಕಿಕ ಕಾರ್ಯವೇ ಹೊರತು ಲೌಕಿಕವಲ್ಲ. ಈ ಶರೀರವಾದರೂ ಸಹ ಆತ್ಮ ಚೈತನ್ಯದ ಪ್ರಜ್ಞೆಯ ನಿರಂತರ ಪ್ರಕಟ ಕಾರ್ಯವೇ ಆಗಿದೆ.

(ಸಶೇಷ)

## ಮುಖಪುಟದ ಕವನಗಳು

**– ಪುಟ್ಟು ಕುಲಕರ್ಣಿ**

**2**

ಬ್ರಹ್ಮಸೂಕ್ಷ್ಮದಾ –ಪರಿಪೂರ್ಣ–ಚಿತ್ತದಲಿ ಸ್ಪಂದದುಗಮವಾಗಿ
ಪರಿಪಕ್ವದಲ್ಲಿ ಸಚ್ಚಿದಾನಂದ ತೋಷಗಳು ಅಲೆಗಳಾಗಿ,
ನಮ್ಮ ದರ್ಶನಕೆ ಸಿಗದು ಎಂದಿಗೂ ಅದರಾತ್ಮದಂತರಂಗ
ಸ್ಪರ್ಶಕಾತೀತ ಆ ಶಾಂತ–ಸಾಂತ– ಸಂವೇದ–ಚಿತ್ತರಂಗ,
ಮೃಣ್ಮಯದ ಅಲ್ಪ–ಜೀವನದ ಯತ್ನ –ಕಾರ್ಯಗಳ ಫಲಿತವಾಗಿ
ಸಂವಹನದಲ್ಲಿ ಅದು ಮಾರ್ಗದರ್ಶಿ ಸಂಪರ್ಕ ಸೇತುವಾಗಿ,
ಘಟಕಗಳ–ಘಟಕ ಪರಿಪೂರ್ಣ–ರೂಹು ವರ್ಣಮಯ ನಾದ–ಲಹರಿ
ಸೌಂದರ್ಯ ಘನದ ಮಾಧುರ್ಯ ಸ್ನಿಗ್ಧ–ಉತ್ಕ್ರಾಂತಿ ಅಲೆಗೆ ದಾರಿ.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 2 ಪುಟ 20)**

**3**

ಚಿನ್ಮಯದ ಅಗ್ನಿಜ್ವಾಲೆಯದು ಇಂತು ಆಗಮಿಸಿತಿಲ್ಲಿ ಒಳಗೆ
ಈಗಿದೋ ದಹಿಸಿ ತಮದ–ಹೃದಯವನು, ಪರಿಪೂರ್ಣಗೊಳಿಸಿ ಬೆಳಗೆ;
ಧೂಸರದ ಛಾಯೆಯಾವರಿತ ಮನದ ನಿರ್ವಾತತತ್ತ್ವವೀಗ
ಸ್ವಪ್ನವನು ತಾನು ರೂಪಿಸುವ ಕ್ರಿಯೆಯಲೀಗಿದವು ಆದಿಯಾಗಿ;

ಅಚೇತನದ ಆತ್ಮಚೇತನವು ತಾ ಚೈತನ್ಯ ಪ್ರಗತಿಯೊಳಗೆ
ತಮವಿದೋ ಹೀಗೆ ಅನುಭೂತಿ ಮತ್ತೆ ಚಿಂತನದಿ ಪೂರ್ಣ ಜೊತೆಗೆ.
ಇಲ್ಲಿಹುದು ದೇವಗಣಗಳಾ ಉಷೆಯ ಪ್ರತ್ಯೂಷ–ತೋಷ ಘೋಷ;
ಪಾರಲೌಕಿಕದ ಸರಣಿ– ಸರಣಿಗಳು ಕರಣವನು ಬೆಳಗಿ ತೇಲಿ
ಸುಪ್ತಿಯೊಳಗೀಗ ಉದಿತಗೊಂಡಿರುವ ಅವುಗಳಾ ರೂಪಗಳಲಿ
ಪರಮನಾ ದೀರ್ಘ ದೀರ್ಘಾತಿ–ತಮದ ರಾತ್ರಿಗಳು ಕರಗುತಿಲ್ಲಿ
ಈಗಿದೋ ಮತ್ತೆ ನ್ಯಾಯಸಂಗತದಿ ಅವು ಉಷೆಯ ಬೆಳಗಿನಲ್ಲಿ.
ಸಹನಗೊಂಡೀಗ ಭಾವದಾವೇಗವೊಂದೀಗ ತಾನು ಇಲ್ಲಿ

ಮತ್ತಿದೋ ಜೊತೆಗೆ ನವ–ಜನ್ಮವೀಗ ವೈಭವದಿ ಸ್ಪಂದದಲ್ಲಿ
ವರ್ಣ–ವರ್ಣಗಳ–ರೆಕ್ಕೆಯಲಿ ಕಾಣ್ಕೆ ಕಾಣ್ಕೆಗಳು ಸಾಲುಗೊಂಡು
ಕಣ್ಣೆವೆಗಳೀಚೆ ಅಲೆ–ಅಲೆಯಲೀಗ ಅಲೆದಾಟದೊಳಗೆ ಸಂದು,
ಸ್ವರ್ಗೀಯ–ನಾದ ಪತಣದಲಿ ರಾಯಭಾರಿಗಳು ನಿನದಲಿಂದು
ನಿಮೀಲಿತಗೊಂಡ ಅವಕಾಶದಕ್ಷಿಗಳನೀಗ ಜಾಗೃತಿಗೆ ತಂದು,
ಸ್ವಪ್ನದಲಿ ಮಗ್ನರಾಗಿದ್ದ ದೇವಕುಲವೀಗ ಅವಲೋಕಗೊಂಡು
ದೃಷ್ಟದಾ ಆಚೆ ಆಚೆಯಾ ನೆಲೆಯ ತದುತ್ತರದಾಚೆ ಕಂಡು
ಅವರ ಚಿಂತನದ ಶ್ರೇಣಿಗಳಲೀಗ ಭೂಷಣವಗೊಳಿಸಿಕೊಂಡು
ಆ ದಿವ್ಯ ಭವ್ಯ ಚಿಲ್ಲೋಕಗಳನು ಚಿನ್ಮೂಲ ಸ್ಪಂದದಿಂದು
ಪರಿಮಾಣವಿರದ ಆ ಒಂದು ಕ್ಷಣದಿ, ಅಭಿಲಾಶೆ ತಾನು ಹೀಗೆ
ಉದ್ಭೂತಗೊಂಡು ಅಂಕುರಿಸಿತೀಗ ವಿಕಸನಕೆ ಮಾರ್ಗವಾಗೆ,
ತಳವಿರದ ಆಳ ಅತಳದಾ ಕೆಲವು ಹೃದಯದಲಿ ಒಮ್ಮೆ ಅದನು
ಅದು ಹೀಗೆ ಅಲ್ಲಿ ತಳವೂರಲೆಂದು ನೆಲೆಗೊಳಿಸೆ ಸಲಿಸಿ ಇದನು.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 10 ರೇಣು 1 ಪುಟ 601–02)**

**4**

ಬಲು ಗೂಢ–ಗುಹ್ಯ–ಜೀವನದ ನೆಲೆಯ ಆ ಆದಿಮೂಲದೆಡೆಗೆ
ಪರಮ–ಪರಿಶುದ್ಧ ಇಂದ್ರಿಯಾತೀತ ತಾ ಭೂಮಕ್ಷೇತ್ರದೊಳಗೆ
ಈ ಅಲ್ಪಬಾಹ್ಯಸತ್ತೆಗಿದು ಕಲ್ಪ–ವ್ಯಾಪ್ತಿಯಾ ರಕ್ಷೆಯಾಗಿ
ಮೃಣ್ಮಯದ ಘನದ ಗೋಡೆಯಿಂದೀಗ ಇದು ತಾ ವಿಭಕ್ತವಾಗಿ
ಪೂರ್ವದರ್ಶನದ ಸೃಷ್ಟಿ–ದೃಷ್ಟಿಯಲಿ ಸುಸ್ಪಷ್ಟಗೊಂಡಿತಿಲ್ಲಿ
ಸ್ಫಟಿಕಶುದ್ಧತೆಯ –ಪವನ–ಪಾವನದ ಮಾಯಕದ ರಂಗದಲ್ಲಿ
ಮಾಂಸ–ಮಜ್ಜೆಗಳ ಜೀವ–ಪ್ರಕೃತಿಯಲಿ ಎಂದಿಗೂ ಸ್ಪಂದಗೊಳದ
ಅದರೊಳಗೆ ಅವನು ಆಗಮಿಸಿ ಈಗ, ಅರಿಯಲೆನೆ ನಿತ್ಯ–ಬಂಧ
ದೀಪ್ತಿ ತಾನೊಂದು ಬೆಳಗುಗೊಳಿಸಿತ್ತು ಅಮೂರ್ತದಾ ರೂಹುಗಳನು
ವಿಸ್ಮಯಾದ್ಭುತದ ಅಧಿಕ್ರಮಣಶ್ರೇಣಿ ಉತ್ಕೃಷ್ಟ ಹಂತದೊಳಗೆ
ಸೂಕ್ಷ್ಮಾತಿಸೂಕ್ಷ್ಮ ಸೂಕ್ಷ್ಮಾಂಡ–ಜಡದ ದಿವ್ಯತೆಯ ಕಾಲಕರ್ಮ


ಉದಿತ ಈ ಭವ್ಯ ಭೂಮ ಸಾಮ್ರಾಜ್ಯ ವೈರಾಜ್ಯವಿದರ ಧರ್ಮ
ಪ್ರಾಣದುಂಬಿರುವ ವರ್ಣಮಾಲೆಗಳ ಆಕಾಶವೊಂದಕೀಗ
ಇದಕೆ ಪ್ರತಿಯಾಗಿ ಉಲ್ಲೇಖಗೊಂಡು ತಾನುದಿತಗೊಂಡಿತೀಗ
ಉಜ್ವಲದ–ದೀಪ್ತಿ ವೈಭವದ–ಬೋಧಿ ಆಚ್ಛಾದ ಛಂದದಿಂದ
ಪುಟಿಪುಟಿದು ಬೆಳೆದು ತಾ ಪ್ರಕಟಗೊಂಡು ಜೊತೆಗಿದೋ ಬಂಧದಿಂದ
ಮಂತ್ರ–ಮಾಯಕದ ರಹಸ್ಯೋದ್ಘಾಟ ಶ್ರುತಿಬದ್ಧಗೊಂಡು ರೂಪ
ದೀರ್ಘಗೊಳ್ಳುತಿದೆ ಅದರ ಸಮ್ಮುಖವು ಪ್ರತಿಬೋಧದಲ್ಲಿ ದೀಪ
ಮನಾಕರ್ಷಕದ –ರೂಪಗಳ ಲೋಕ ತಾನೊಂದು ಪ್ರೇಮವಾಗಿ
ನಮಗದುವು ಈಗ ಅತಿಸನಿಹದೊಳಗೆ ತಾ ನಿತ್ಯ ವಾಸಿಯಾಗಿ,
ಇಲ್ಲಿದೋ ಇದುವು ಅನಾವರಣದಲಿ ಸುಸ್ಪಷ್ಟವಾಗಿ ನಿಲಲು
ಋಷಿಯ–ದೃಷ್ಟಿಯದು ನಿರಾಕಾರವನು ಅನುಭೂತಿಗೊಳಿಸಿಕೊಳಲು
ಆಕಾರ ಸರ್ವ–ಸರ್ವಸ್ವವೆಲ್ಲ ಸೌಂದರ್ಯ ಸ್ವಯಂ–ಪೂರ್ಣ
ಜೊತೆಗಿದೋ ಸರ್ವ ವಸ್ತು–ವಿಷಯಗಳು ಸತ್ಯದಲಿ ಮಿನುಗಿ ವರ್ಣ,
ಪಾರದೀಪಕದ ಆ ದೀಪ್ತಿಕಾಂತಿ ವಾಯುಮಂಡಳವು ಈಗ
ಯೋಗಮಾಯೆಯಲಿ ಬೆಳಗುಗೊಂಡಲ್ಲಿ ಸುಸ್ಪಷ್ಟವಾಯಿತಾಗ
ಈ ಚಕ್ಷುವೀಗ ತೆರೆತೆರೆದು ದ್ವಾರ ವ್ಯೋಮಾನುಭೂತಿ ದೀಪ
ಶ್ರಾವ್ಯವದು ತಾನು ನಾದಾನುನಾದ, ಕಮನೀಯ ಸ್ಪರ್ಶ ರೂಪ
ಜೊತೆ ಸ್ಪಂದಗೊಂಡ ಹೃದಯವಿದು ಈಗ ಘನನಿಬಿಡ ಶಕ್ತಿ–ಶ್ವಾಸ
ದೀರ್ಘಾತಿದೀರ್ಘ ಉಚ್ಛ್ವಾಸದೊಳಗೆ ತುಂತುಂಬಿಕೊಂಡು ಹಾಸ
ಋಷಿಯ–ಸಹಜಗುಣದಾ ಸ್ಫುರಿತತೇಜದಾ ಉತ್ಪತ್ತಿ ತಾಣಗಳಿವು
ಇಲ್ಲೀಗ ಧ್ಯಾನ–ತಲ್ಲೀನ ಕೇಂದ್ರ ಸ್ಥಿತದಲ್ಲಿ ಬಂಧವಿದುವು
ಅವಳೀಗ ಅವಳ ಕಾರ್ಯಗಳನೆಲ್ಲ ತಾ ಎರಕಗೊಳಿಸಲೆನಲು
ಪರಿಪಕ್ವ ನಿಖರ ಪರಿಕಲ್ಪನೀಯ ಯೋಜನೆಗೆ ಅನುವುಗೊಳಲು
ಪೂರ್ಣ ಪರಿಶ್ರಮದಿ ಅವಳ ಬಲಗಳಲಿ ಬಲು ದೀರ್ಘ ದೀರ್ಘವಾಗಿ
ಸಂಸ್ಥಾಪಗೊಂಡ ವಿಧಿಯದುವು ಬಂಧ–ಸೂತ್ರದಿ ವಿರಾಮವಾಗಿ

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 2 ಪುಟ 103)**

**ಟಿಪ್ಪಣಿ:**

ಜಾಗ್ರತಗೊಂಡ ಸರ್ವಸ್ವವೂ ಶಕ್ತಿಮಯವಾಗಿರುತ್ತದೆ. ಹೀಗಾಗಿ ಶಕ್ತಿಯು ಜಾಗ್ರತಿಯನ್ನು ರೂಪಿಸುತ್ತದೆ. ಚಿತ್ ಶಕ್ತಿಯಾಗಿರುವ ಹಂತದಲ್ಲಿ ಇದು ಕಾರ್ಯಪ್ರವೃತ್ತಗೊಳ್ಳುತ್ತದೆ. ಶಕ್ತಿಯು ತನ್ನಲ್ಲಿ ತಾನೇ Kenetic-Force ನ್ನು ರೂಪಾಂತರದ ಹಂತದಲ್ಲಿ ರೂಪಿಸಿಕೊಳ್ಳುತ್ತದೆ. ಇದನ್ನೇ ತಪಸ್ಸನ್ನಾಗಿಸಿ ಸರ್ವ ಕ್ರಿಯೆಗಳ ಆಧಾರವನ್ನಾಗಿಸಿಕೊಳ್ಳುತ್ತದೆ. ಅದಕ್ಕಾಗಿ, ಎಲ್ಲ ಶಕ್ತಿಯೂ ಚಿತ್ತಿನ ರೂಪವೇ ಆಗಿದ್ದು, ಆತ್ಮದಿಂದ, ಪ್ರಕಾಶದ ಮೂಲಕವೇ ಪ್ರಕಟಗೊಳ್ಳುತ್ತದೆ. ಇದು ಅದರ ಮೂಲ ಉದ್ದೇಶವೂ ಆಗಿದೆ.ಆದರೆ ಪ್ರಕಾಶದಲ್ಲಿಯೂ ಸಹಿತ ಹಲವಾರು ವಿಧಗಳಿವೆ. ಇದು ಚಿತ್ತಿನ ಹಲವು ವಿಧದ ರೂಪಾಂತರದಿಂದ ನಿರ್ಮಾಣಗೊಳ್ಳುತ್ತವೆ. ಶಾಶ್ವತದ ಪ್ರಕಾಶಮಾನವಾದ ಜ್ಯೋತಿಪುಂಜದಿಂದ ಹೊರಹೊಮ್ಮುವ ಏಳು ಕಿರಣಗಳು ಏಕೀಭವಿಸಿಕೊಂಡು, ಸೂರ್ಯನ ತೆರದಲ್ಲಿ ಸಾಕಾರ ಪಡೆದುಕೊಂಡು ಮಾನವನಿಗೆ ಕಾಣುತ್ತದೆ; (ಆದಿತ್ಯವತ್ ತಮಸಃ ಪರಸ್ತಾತ್). ಅವಿನಾಶಿಯಾದ ಹಂತದಲ್ಲಿ ಪ್ರಕಟಗೊಳ್ಳುತ್ತದೆ. ಇದರ ಮೂಲಕವೇ ಏಳೂ ಏಳೂ ಕಿರಣಗಳು ಲೋಕದ ಸೃಷ್ಟಿಗೆ – ಅನುಷ್ಠಾನಕ್ಕೆ– ಅಭಿವ್ಯಕ್ತಿಗೆ –ರೂಪಾಂತರಕ್ಕೆ ಕಾರಣವಾಗುತ್ತವೆ. ಸತ್–ಚಿತ್–ಆನಂದ–ವಿಜ್ಞಾನ–ಮನಸ್ಸು–ಪ್ರಾಣ–ಅನ್ನ ಇವು ಸಪ್ತ ಆಯಾಮ ಹೊಂದಿದ, ಸಪ್ತ ರೂಪಗಳಲ್ಲಿ ಪ್ರಕಟಗೊಳ್ಳುವ ಚಿತ್ತಿನ ಸ್ವರೂಪಗಳೇ ಆಗಿವೆ. ಇದನ್ನೇ ಜ್ಯೋತಿರ್ಮಯ ಬ್ರಹ್ಮನ ಸಗುಣತತ್ತ್ವ ಎನ್ನುತ್ತಾರೆ.

ಇನ್ನು –ಪ್ರಕಾಶ, ಅಗ್ನಿ, ವಿದ್ಯುತ್, ಜ್ಯೋತಿ, ತೇಜಸ್ಸು, ದೋಷ ಮತ್ತು ಛಾಯಾ ಇವು ಏಳು ಜ್ಯೋತಿರ್ಮಯ ಬ್ರಹ್ಮನ ನಿರ್ಗುಣ ತತ್ತ್ವದ ರೂಪಗಳಾಗಿವೆ (ಗುಣಗಳಾಗಿವೆ).



ಫೋಟೋ: ಇಮೇಜಿಂಗ್ ಸಾವಿತ್ರಿ

**RNI No. 22511/1971**
No. of Pages **60 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.